ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ನವೆಂಬರ್ 26 ಮಂಗಳವಾರ 2024

₹4

ಸಂಪುಟ: 45 | ಸಂಚಿಕೆ: 219 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಾಂಗ್ರೆಸ್ ತನ್ನ ಅಸಮಾಧಾನಿತ ಶಾಸಕರನ್ನು ಹಿಡಿದಿಟ್ಟುಕೊಂಡು ಸರ್ಕಾರ ಉಳಿಸಿಕೊಳ್ಳಲಿ

ಯೋಗೇಶ್ವರ್‌ಗೆ ಸಾ.ರಾ.ಮಹೇಶ್ ತಿರುಗೇಟು



ಮೈಸೂರು, ನ.25(ಬಿಎಲ್‌ಯು)– ಕಾಂಗ್ರೆಸ್‌ನಲ್ಲಿರುವ ಅಸಮಾಧಾನಿತ ಶಾಸಕರನ್ನು ಮೊದಲು ಹಿಡಿದಿಟ್ಟುಕೊಳ್ಳಲಿ, ಈ ಮೂಲಕ ತಮ್ಮ ಸರ್ಕಾರ ಉಳಿಸಿಕೊಳ್ಳಲಿ ಎಂದು ಮಾಜಿ ಸಚಿವ ಸಾ.ರಾ. ಮಹೇಶ್, ನೂತನ ಶಾಸಕ ಸಿ.ಪಿ.ಯೋಗೇಶ್ವರ್‌ಗೆ ತಿರುಗೇಟು ನೀಡಿದ್ದಾರೆ.

ನಗರದ ರಮಾವಿಲಾಸ ರಸ್ತೆಯ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ 30ರಿಂದ 35 ಅಸಮಾಧಾನಿತ ಶಾಸಕರಿದ್ದಾರೆ ಎಂದು ಈ ಮೊದಲು ಯೋಗೇಶ್ವರ್ ಹೇಳಿದ್ದರು. ಈಗ ತಮ್ಮ ಪಕ್ಷದ ಶಾಸಕರ ಬಗ್ಗೆ ಗಮನ ಹರಿಸಲಿ, ಆ ನಂತರ ಜೆಡಿಎಸ್ ಶಾಸಕರನ್ನು ಕರೆ ತರುವ ಬಗ್ಗೆ ಮಾತನಾಡಲಿ ಎಂದು ಸಾ.ರಾ.ಮಹೇಶ್ ಹೇಳಿದರು.

ಕಾಂಗ್ರೆಸ್‌ನಲ್ಲಿ ಅಸಮಾಧಾನಗೊಂಡಿರುವ ಶಾಸಕರು ಯಾರೆಂದು ಯೋಗೇಶ್ವರ್ ಅವರಿಗೆ ಗೊತ್ತಿದೆ. ಆ ಶಾಸಕರು ಯಾರೆಂದು ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಮಾಹಿತಿ ನೀಡಲಿ. ಆ ನಂತರ ಜೆಡಿಎಸ್ ಶಾಸಕರ ಬಗ್ಗೆ ಮಾತನಾಡಲಿ ಎಂದು ಸಾ.ರಾ. ಮಹೇಶ್ ಸಲಹೆ ನೀಡಿದರು.

> “ಜೆಡಿಎಸ್ ಪ್ರಾದೇಶಿಕ ಪಕ್ಷವಾದರೂ ನಮ್ಮ ಶಾಸಕರು ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ.ಕುಮಾರಸ್ವಾಮಿ ಜೊತೆಯಲ್ಲಿದ್ದಾರೆ. ಜೆಡಿಎಸ್ ಶಾಸಕರಿಗೆ ನಮ್ಮ ನಾಯಕರ ಬಗ್ಗೆ ವಿಶ್ವಾಸವಿದೆ.
> –ಸಾ.ರಾ.ಮಹೇಶ್

ಈಗ ಚನ್ನಪಟ್ಟಣದ ಜನರು ಯೋಗೇಶ್ವರ್ ಅವರಿಗೆ ಆಶೀರ್ವಾದ ಮಾಡಿದ್ದಾರೆ. ಇನ್ನು ಮೂರು ವರ್ಷ ಜನರ ಸೇವೆ ಮಾಡುವ ಅವಕಾಶ ಅವರಿಗೆ ದೊರೆತಿದೆ. ಮೊದಲು ಜನಪರ ಕಾರ್ಯ ಮಾಡಲಿ ಎಂದರು. ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದವರ ಪೈಕಿ ಯೋಗೇಶ್ವರ್ ಪಾತ್ರ ಕೂಡ ಇದೆ. ಆದ ಕಾರಣ ಯೋಗೇಶ್ವರ್ ಅವರೇನು ಎಂದು ನಮಗೂ ಗೊತ್ತಿದೆ. ನಮ್ಮ ಪಕ್ಷದ ಉಸಾಬರಿ ಬಿಟ್ಟು ಮೊದಲು ತಮ್ಮ ಸರ್ಕಾರ ಉಳಿಸಿಕೊಳ್ಳುವತ್ತ ಗಮನಹರಿಸಲಿ ಎಂದು ಸಾ.ರಾ.ಮಹೇಶ್, ಶಾಸಕ ಯೋಗೇಶ್ವರ್‌ಗೆ ಸಲಹೆಯಿತ್ತರು.

ಡಿ.5, ಹಾಸನದಲ್ಲಿ ಶ್ರೀ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶ

ಇಂದು ಡಾ.ಯತೀಂದ್ರ ನೇತೃತ್ವದಲ್ಲಿ ಪೂರ್ವಭಾವಿ ಸಭೆ

ಮೈಸೂರು, ನ.25(ಜಿಎ)–ಅಹಿಂದ ಸಂಘಟನೆಗಳ ನೇತೃತ್ವದಲ್ಲಿ ಡಿ.5ರಂದು ಹಾಸನದಲ್ಲಿ 'ಶ್ರೀ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶ' ಆಯೋಜಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ನ.26ರಂದು ಸಂಜೆ 5 ಗಂಟೆಗೆ ನಗರದ ದಿವಾನ್ಸ್ ರಸ್ತೆಯಲ್ಲಿರುವ ಯಾದವ(ಗೊಲ್ಲ) ಸಮುದಾಯ ಭವನದಲ್ಲಿ ಡಾ.ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಭಾಗದ 6ರಿಂದ 7 ಜಿಲ್ಲೆಗಳ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಭಿಮಾನಿಗಳು, ಅಹಿಂದ ಸಂಘಟನೆಗಳ ಕಾರ್ಯಕರ್ತರು, ಮುಖಂಡರು ಸೇರಿದಂತೆ ಲಕ್ಷಾಂತರ ಜನರು ಈ ಸಮಾವೇಶದಲ್ಲಿ ಪಾಲ್ಗೊಂಡು ಶಕ್ತಿ ಪ್ರದರ್ಶನದ ಮೂಲಕ ಅಹಿಂದ ಸಮುದಾಯದ ಸ್ವಾಭಿಮಾನದ ಸಂದೇಶವನ್ನು ಇಡೀ ದೇಶಕ್ಕೆ ಸಾರಲಿದ್ದಾರೆ ಎಂದರು.

ನ.26ರಂದು ಮೈಸೂರಿನಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಿ ಹಾಸನ ಸಮಾವೇಶದ ರೂಪುರೇಷೆಗಳನ್ನು ಸಿದ್ಧಪಡಿಸಲಾಗುವುದು. ಉಪ ಚುನಾವಣೆಯ ಗೆಲುವಿನ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ಆಯೋಜಿಸುತ್ತಿಲ್ಲ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿದರು.

ಎರಡು ತಿಂಗಳ ಹಿಂದೆಯೇ ಮೈಸೂರಿನಲ್ಲಿ ಈ ಸಮಾವೇಶವನ್ನು ನಡೆಸಲು ಯೋಚಿಸಲಾಗಿತ್ತು. ಆದರೆ, ಹಳೇ ಮೈಸೂರು ಭಾಗದ ಜಿಲ್ಲೆಗಳಿಗೆ ಕೇಂದ್ರ ಸ್ಥಾನ ಎಂಬ ಕಾರಣಕ್ಕೆ ಅಲ್ಲಿ ಸಮಾವೇಶ ಆಯೋಜಿಸಲಾಗುತ್ತಿದೆ. ಈ ಸಮಾವೇಶ ಯಾವುದೇ ಸಮುದಾಯದ ವಿರುದ್ಧವಲ್ಲ. ಬದಲಿಗೆ ಅಹಿಂದ ಸಂಘಟನೆಗಳನ್ನು ಬಲಪಡಿಸಲು ಈ ಸಮಾವೇಶ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಅಹಿಂದ ವರ್ಗಗಳ ಪ್ರಬಲ ಧ್ವನಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ಬಿಜೆಪಿ ಮತ್ತು ಜಾ.ದಳ ಇನ್ನಿಲ್ಲದ ಷಡ್ಯಂತ್ರ ನಡೆಸುತ್ತಿದೆ. ಆ ಮೂಲಕ ಅಹಿಂದ ಸಮುದಾಯವನ್ನು ಗುಲಾಮಗಿರಿಗೆ ತಳ್ಳುವ ಮನಸ್ಥಿತಿಗೆ ಮೂರು ಕ್ಷೇತ್ರಗಳ ಮತದಾರರು ತಕ್ಕ ಉತ್ತರ ನೀಡುವುದರೊಂದಿಗೆ ಅಹಿಂದ ವರ್ಗಗಳ ತೀಕ್ಷ್ಣ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ಈ ಚುನಾವಣೆಯಲ್ಲಿ ತೋರಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಮುಡಾ ಹಗರಣದ ಹೆಸರಿನಲ್ಲಿ ಬಿಜೆಪಿ–ಜೆಡಿಎಸ್‌ನವರು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡಿದರು. ಚನ್ನಪಟ್ಟಣ ಉಪಚುನಾವಣೆ ಪ್ರಚಾರದಲ್ಲಿ ಹೆಚ್.ಡಿ.ದೇವೇಗೌಡರು ಸಿದ್ದರಾಮಯ್ಯ ಅವರ ಸೊಕ್ಕಿಳಿಸುವ ಮಾತುಗಳಿಗೆ ಅಲ್ಲಿನ ಮತದಾರರು ಉತ್ತರ ಕೊಟ್ಟಿದ್ದಾರೆ. ಒಂದೆರಡು ಜಾತಿಗಳನ್ನು ನಂಬಿಕೊಂಡು ರಾಜಕಾರಣ ಮಾಡಲಾಗಲ್ಲ ಎಂಬುದನ್ನು ಈ ಚುನಾವಣೆ ತೋರಿಸಿದೆ. ಅಹಿಂದ ಸಮುದಾಯಗಳು ಸರಿಯಾಗಿ ಸಂಘಟಿತರಾದಲ್ಲಿ ಅಧಿಕಾರ ಚಲಾಯಿಸುವ ಜಾಗದಲ್ಲಿ ಈ ವರ್ಗದವರಿರುತ್ತಾರೆ. ಇನ್ನಾದರೂ ಬಿಜೆಪಿ–ಜಾ.ದಳದವರು ಸಿದ್ದರಾಮಯ್ಯ ಅವರ ತೇಜೋವಧೆ ನಿಲ್ಲಿಸಿ, ನೈತಿಕ ರಾಜಕಾರಣ ಮಾಡಲಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಜೆ.ಜೆ.ಆನಂದ, ಅಹಿಂದ ಮುಖಂಡರುಗಳಾದ ಮೊಗಣ್ಣಾಚಾರ್, ಮೈಸೂರು ಬಸವಣ್ಣ, ರವಿನಂದನ್, ಲೋಕೇಶ್‌ಕುಮಾರ್ ಮಾದಾಪುರ ಉಪಸ್ಥಿತರಿದ್ದರು.

ಶ್ರೀಗಳು ಕಾವಿ ಕಳಚಿ ಆರ್‌ಎಸ್‌ಎಸ್ ಚಡ್ಡಿ ತೊಡಲಿ...

> “ಡಾ.ಬಿ.ಆರ್. ಅಂಬೇಡ್ಕರ್ ಬರೆದಿರುವ ಸಂವಿಧಾನದ ಬಗ್ಗೆ ಅಪಸ್ವರ ಎತ್ತಿರುವ ಉಡುಪಿಯ ಪೇಜಾವರ ಶ್ರೀಗಳು ಕಾವಿ ಕಳಚಿ ಆರ್‌ಎಸ್‌ಎಸ್ ಚಡ್ಡಿ ತೊಟ್ಟು ಚರ್ಚೆಗೆ ಬರಲಿ. ಇನ್ನು ಮುಂದೆ ಸಂವಿಧಾನದ ಬಗ್ಗೆ ಸ್ವಾಮೀಜಿ ಮಾತನಾಡಿದರೆ ಅವರ ಮಠದ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ. ಅವರು ಹೋದಲ್ಲಿ–ಬಂದಲ್ಲಿ ಕಪ್ಪುಬಟ್ಟೆ ಪ್ರದರ್ಶಿಸಬೇಕಾಗುತ್ತದೆ.
> –ಕೆ.ಎಸ್.ಶಿವರಾಮು

ಕನ್ನಡ ರಾಜ್ಯೋತ್ಸವ ಆಚರಣೆ...




ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ರಾಮಕೃಷ್ಣನಗರದ ಯೋಗ ಉದ್ಯಾನವನದಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್‌ಭಟ್, ಮಹಿಳಾ ಮೋರ್ಚಾ ನಗರ ಅಧ್ಯಕ್ಷೆ ರೇಣುಕಾ ರಾಜು, ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಕಾರ್ಯದರ್ಶಿ ವಿಜಯಾ, ಮಂಡಲದ ಅಧ್ಯಕ್ಷೆ ಲಕ್ಷ್ಮಿ, ಪ್ರಧಾನ ಕಾರ್ಯದರ್ಶಿಗಳಾದ ಮಂಜುಳಾ, ಪುಟ್ಟಮ್ಮಣ್ಣಿ, 58ನೇ ವಾರ್ಡಿನ ಅಧ್ಯಕ್ಷ ಸುಬ್ರಹ್ಮಣ್ಯ ರಾಜು, ಮುಖಂಡರಾದ ಸುಜಾತ, ಶಶಿಕಾಂತ್, ಹಿರಿಯಣ್ಣ, ಮಧು ಸೋಮಶೇಖರ್, ರಾಘವೇಂದ್ರ, ಚಂದನ್‌ಗೌಡ, ಕಾಂತರಾಜ ಅರಸ್, ನಾಗರಾಜ್ ಜನ್ನು, ದೇವರಾಜು ಇನ್ನಿತರರು ಉಪಸ್ಥಿತರಿದ್ದರು.

ನ.28, ವಿಶೇಷ 'ಸ್ವಾತಿ' ಪೂಜೆ

ಮೈಸೂರು, ನ.25–ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ನ.28ರಂದು ಗುರುವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.






ಜಿಲ್ಲಾ ಮಟ್ಟದ ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ನ.25– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2024–25ನೇ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ನವೆಂಬರ್ 27ರಂದು ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಗಣದಲ್ಲಿ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾ ಸ್ಪರ್ಧೆಯನ್ನು ಹಾಗೂ ನವೆಂಬರ್ 29ರಂದು ತಿಲಕ್‌ನಗರದ ಅಂಧ ಹಾಗೂ ಕಿವುಡ ಮಕ್ಕಳ ಸರ್ಕಾರಿ ಪಾಠಶಾಲೆಯಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ವಿಕಲಚೇತನರು ನವೆಂಬರ್ 26ರೊಳಗೆ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2490333 ಹಾಗೂ ಮೊ.ಸಂ:9731059098, 9164939204 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಚೇರಿಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತೂರು ಶ್ರೀಗಳಿಂದ ಆಶೀರ್ವಾದ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಕೆ.ಆರ್. ಬ್ಯಾಂಕ್‌ನ ನೂತನ ಅಧ್ಯಕ್ಷ ಬಸವರಾಜ್ ಬಸಪ್ಪ, ಉಪಾಧ್ಯಕ್ಷೆ ಸರ್ವಮಂಗಳ, ನಿರ್ದೇಶಕರಾದ ಎಂ.ಡಿ. ಪಾರ್ಥಸಾರಥಿ, ಜಿ.ಎಂ.ಪಂಚಾಕ್ಷರಿ, ಎಚ್.ವಿ.ಭಾಸ್ಕರ್ ಸೋಮವಾರ ಭೇಟಿ ನೀಡಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಇಲ್ಲದ ಕನ್ನಡ ನುಡಿ ಹಬ್ಬಕ್ಕೆ ಆಕ್ಷೇಪ

ಮೈಸೂರು, ನ.25(ಜಿಎ)–ಮಂಡ್ಯದಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ ಇತಿಹಾಸದಲ್ಲಿಯೇ ಜಿಲ್ಲಾ ಅಧ್ಯಕ್ಷ ಇಲ್ಲದೆ ನಡೆಯುತ್ತಿರುವ ಸಮ್ಮೇಳನವಾಗಿದ್ದು, ಇದು ಅಚ್ಚ ಕನ್ನಡ ಜಿಲ್ಲೆಗೆ ಮಾಡಿದ ಘೋರ ಅಪಮಾನ ಎಂದು ಕದಂಬ ಸೈನ್ಯ ಸಂಘಟನೆ ಕಿಡಿಕಾರಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಸಾಹಿತಿಗಳನ್ನು ವಿರೋಧಿಸುವವರನ್ನು ಎತ್ತಿಕಟ್ಟಿ ಈ ರೀತಿ ಜಿಲ್ಲೆಗೆ ಘೋರ ಅಪಮಾನ ಮಾಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯಾಧ್ಯಕ್ಷ ಮಹೇಶ್ ಜೋಷಿ ಅವರ ವಿರುದ್ಧ ಪರಿಷತ್‌ನಲ್ಲಿ ಧ್ವನಿ ಎತ್ತಲಾಗದ ಪರಿಸ್ಥಿತಿ ಇದೆ. ಇದು ಸರಿಯಲ್ಲ. ಮಂಡ್ಯ ಜಿಲ್ಲೆಗೆ ಡಾ.ಮೀರಾ ಶಿವಲಿಂಗಯ್ಯ, ಪ್ರೊ.ಜಯಪ್ರಕಾಶ್‌ಗೌಡ ಅಥವಾ ಡಾ.ಪ್ರದೀಪ್‌ಕುಮಾರ್ ಅವರಲ್ಲಿ ಯಾರನ್ನಾದರೂ ಅಧ್ಯಕ್ಷರನ್ನಾಗಿ ಮಾಡಬೇಕಾಗಿತ್ತು. ಆದರೆ ವೈಯಕ್ತಿಕ ಲಾಭದ ಕಾರಣ ಆ ರೀತಿ ಮಾಡಿಲ್ಲ. ಕನ್ನಡ ನಾಡಿನ ಮಹನೀಯರು ಕಟ್ಟಿ ಬೆಳೆಸಿದ ಪರಿಷತ್ ತನ್ನ ಸ್ವಾಯತ್ತತೆ, ಘನತೆ ಗೌರವಗಳನ್ನು ಕಳೆದುಕೊಳ್ಳುವಂತಾಗಿರುವುದು ಬೇಸರದ ಸಂಗತಿ ಎಂದರು. ಸುದ್ದಿಗೋಷ್ಠಿಯಲ್ಲಿ ಎಸ್.ಶಿವಕುಮಾರ್, ಉಮ್ಮಡಹಳ್ಳಿ ನಾಗೇಶ್, ಬಿ.ಶಿವಕುಮಾರ್ ಇದ್ದರು.

ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲಿ

> “ಅನ್ನದಾತರ ಜಮೀನು, ಮಂದಿರಗಳನ್ನು ವಕ್ಫ್ ಬೋರ್ಡ್ ಆಸ್ತಿ ಎಂದು ಆರ್‌ಟಿಸಿಗಳಲ್ಲಿ ಬಿಂಬಿಸಲಾಗುತ್ತಿದೆ. ಈ ಕುರಿತು ಕೇಂದ್ರ ಸರ್ಕಾರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಬೇಕು. ಅಲ್ಲದೆ, ಸಿಎಂ ಸಿದ್ದರಾಮಯ್ಯ ಅವರು ಈ ಕುರಿತು ಕೇವಲ ಬಾಯಿ ಮಾತಿನಲ್ಲಿ ಭರವಸೆ ನೀಡದೇ ಕಾರ್ಯ ರೂಪಕ್ಕೆ ತರುವ ಮೂಲಕ ಶಾಂತಿ, ಸೌಹಾರ್ದತೆ ಕಾಯ್ದುಕೊಳ್ಳಬೇಕು. –ಬೇಕ್ರಿ ರಮೇಶ್

ಬಿಜೆಪಿ–ಜೆಡಿಎಸ್‌ಗೆ ತಕ್ಕ ಪಾಠ ಉಪಚುನಾವಣೆ ಗೆಲುವು



ಬಿ.ಸುಬ್ರಹ್ಮಣ್ಯ

ಮೈಸೂರು, ನ. 25–ರಾಜ್ಯದ ಮೂರು ಕ್ಷೇತ್ರಗಳಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲುವು ನೀಡುವ ಮೂಲಕ ಮತದಾರರು ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಜೆಡಿಎಸ್‌ಗೆ ಸರಿಯಾದ ಪಾಠ ಕಲಿಸಿದ್ದಾರೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಈ ಎರಡೂ ಪಕ್ಷಗಳ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಭಾರಿ ಅಪಪ್ರಚಾರ ಮಾಡಿದ್ದರು. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಎಲ್ಲೂ ಇಲ್ಲದಿದ್ದರೂ ಅವರ ಹೆಸರನ್ನು ಎಳೆದು ತಂದು ವರ್ಚಸ್ಸಿಗೆ ಮಸಿ ಬಳಿಯುವ ಪ್ರಯತ್ನ ಮಾಡಿದ್ದರು. ಆದರೆ ಪ್ರಜ್ಞಾವಂತ ಜನರು ಇವರ ಅಪಪ್ರಚಾರಕ್ಕೆ ಕಿವಿಕೊಟ್ಟಿಲ್ಲ. ಚನ್ನಪಟ್ಟಣ, ಶಿಗ್ಗಾಂವಿ ಮತ್ತು ಸಂಡೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಗೆಲುವು ನೀಡುವ ಮೂಲಕ ಕರ್ನಾಟಕದ ಜನತೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಬೆನ್ನೆಲುಬಾಗಿ ನಿಂತಿದ್ದಾರೆ ಎಂಬ ಸಂದೇಶವನ್ನು ನೀಡಿದ್ದಾರೆ ಎಂದರು.

ನಾಳೆ ಬಲಮುರಿ ಗಣಪತಿ ಪ್ರಾಣ ಪ್ರತಿಷ್ಠಾಪನೆ

ಮೈಸೂರು,ನ.25–ಮೈಸೂರಿನ ಗೋಕುಲಂ 1ನೇ ಹಂತ ಮುಖ್ಯರಸ್ತೆ, ವಿ.ವಿ. ಮೊಹಲ್ಲಾದಲ್ಲಿರುವ ಶ್ರೀರಾಮಮಂದಿರದಲ್ಲಿ ನ.27ರಂದು ಬುಧವಾರ ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಬಲಮುರಿ ಗಣಪತಿ ಪ್ರಾಣ ಪ್ರತಿಷ್ಠಾಪನೆಯನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 10ಕ್ಕೆ ಗಣಹೋಮ, ನವಗ್ರಹ ಹೋಮ, 10.30ಕ್ಕೆ ಕುಂಬಾಭಿಷೇಕ, 11.30ರಿಂದ 12 ಗಂಟೆಗೆ ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ.

ಮಾಜಿ ಮೇಯರ್ ನರಸಿಂಹ ಐಯ್ಯಂಗಾರ್ ನಿಧನ




ಮೈಸೂರು, ನ.25– ಮೈಸೂರಿನ ಮಾಜಿ ಮೇಯರ್ ಹಾಗೂ ಹಿರಿಯ ನ್ಯಾಯವಾದಿ ಆರ್.ಜಿ.ನರಸಿಂಹ ಐಯ್ಯಂಗಾರ್ ಅವರು ಹೃದಯಾಘಾತದಿಂದ ಸೋಮವಾರ ರಾತ್ರಿ ಖಿಲ್ಲೆ ಮೊಹಲ್ಲಾದ ತಮ್ಮ ನಿವಾಸದಲ್ಲಿ ನಿಧನರಾದರು.

ಜೆಡಿಎಸ್ ಮುಖಂಡರಾಗಿದ್ದ ಇವರು ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದರು. ಕಾಸ್ಮೊಪಾಲಿಟನ್(ಸಿಸಿ) ಕ್ಲಬ್ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಇವರು ಪತ್ನಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದು, ಮಂಗಳವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ತಿಳಿದು ಬಂದಿದೆ.

ನರಸಿಂಹ ಅಯ್ಯಂಗಾರ್ ಅವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರೂ ಆದ ಸಿಸಿ ಕ್ಲಬ್ ಮಾಜಿ ಅಧ್ಯಕ್ಷ ಸಿ. ನಾರಾಯಣಗೌಡ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.11.2024 ಮಂಗಳವಾರ, ಮಳೆ ನಕ್ಷತ್ರ: ಅನೂರಾಧ, 19.11.2024 ರಿಂದ 01.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿನ್‌ಸನ್ಸ್ ಕಾಯಿಲೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ಸರ್ಕಲ್ ಬೆಳಗ್ಗೆ 9.30 ರಿಂದ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ:** ಹಸಿರಾಗಲಿ ಕರ್ನಾಟಕ ಉಸಿರಾಗಲಿ ಕನ್ನಡ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ, ಅಧ್ಯಕ್ಷತೆ : ಎಂಎಂಸಿ ಮತ್ತು ಆರ್‌ಐ ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಪ್ರಾಸ್ತಾವಿಕ ನುಡಿ: ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಪಿ.ನಂದಕುಮಾರ್, ಉಪಸ್ಥಿತರು: ಡಾ. ಎಚ್.ಎಲ್. ಶೈಲಾ, ಸಿ.ಆರ್. ಕಲ್ಪಶ್ರೀ, ಹೆಚ್.ವಿದ್ಯಾ, ಸ್ಥಳ: ಅಮೃತೋತ್ಸವ ಭವನ, ಜೆ.ಕೆ.ಮೈದಾನ, ಬೆಳಗ್ಗೆ 10ಕ್ಕೆ.

■ **ಸಿಎಸ್‌ಐಆರ್–ಸಿಎಫ್‌ಟಿಆರ್‌ಐ :** ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ ಮುಜಾಫರ್ ಹೆಚ್. ಅಸ್ಸಾದಿ, ಅಧ್ಯಕ್ಷತೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಉಪಸ್ಥಿತರು : ಶಿವಸ್ವಾಮಿ, ಕೆ. ರವಿಕುಮಾರ್, ಸ್ಥಳ: ಅಸೆಂಬ್ಲಿ ಹಾಲ್, ಸಿಎಫ್‌ಟಿಆರ್‌ಐ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಹಾಜನ ಕಾನೂನು ಕಾಲೇಜು :** 75ನೇ ವರ್ಷದ ಸಂವಿಧಾನ ದಿನಾಚರಣೆ ಹಾಗೂ ಸಂವಿಧಾನ ದಿನಾಚರಣೆ ಪ್ರಾಮುಖ್ಯತೆ ಮತ್ತು ಸಮಕಾಲೀನ ಭಾರತ ಕುರಿತು ಉಪನ್ಯಾಸ, ಉದ್ಘಾಟನೆ: ಜಿಲ್ಲಾ ನ್ಯಾಯಾಧೀಶರಾದ ಶ್ರೀಮತಿ ವಿಮಲಾ ಆರ್. ನಂದಗಾಂವ್, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಡಾ.ಎನ್.ಕೆ.ಲೋಕನಾಥ್, ಹಿರಿಯ ರಾಜಕೀಯ ವಿಜ್ಞಾನಿ ಡಾ.ಎಚ್.ಎಂ.ರಾಜಶೇಖರ ಅವರಿಂದ ಉಪನ್ಯಾಸ, ಉಪಸ್ಥಿತರು : ಮಹಾಜನ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ಮಹಾಜನ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸ್ಕೂಲ್ ಆಫ್ ಲಾ:** ಸಂವಿಧಾನ ದಿನಾಚರಣೆ, ಉದ್ಘಾಟನೆ: ನ್ಯಾಯಮೂರ್ತಿ ಡಿ.ಪುಟ್ಟಸ್ವಾಮಿ, ಗೌರವ ಅತಿಥಿಗಳು: ಸೀನಿಯರ್ ಸಿವಿಲ್ ಜಡ್ಜ್ ಬಿ.ಜಿ. ದಿನೇಶ್, ವಕೀಲ ಎಸ್.ಲೋಕೇಶ್, ಅಧ್ಯಕ್ಷತೆ : ಸ್ಕೂಲ್ ಆಫ್ ಲಾ ನಿರ್ದೇಶಕ ಪ್ರೊ.ಎಂ. ಸುರೇಶ್ ಬೆಂಜಾಮಿನ್, ಸ್ಥಳ: ಸ್ಕೂಲ್ ಆಫ್ ಲಾ ಸಭಾಂಗಣ, ಮೈಸೂರು ವಿವಿ, ಬೆಳಗ್ಗೆ 10.30ಕ್ಕೆ.

■ **ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘ :** ಕನ್ನಡ ರಾಜ್ಯೋತ್ಸವ ಹಾಗೂ ಆದರ್ಶ ಅಣ್ಣ ತಮ್ಮಂದಿರ ಅಭಿನಂದನಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಮಾಯಕಾರ ಗುರುಕುಲ ಸಂಸ್ಥಾಪಕ ವಿದ್ವಾನ್ ಮೂಗೂರು ಮಧುದೀಕ್ಷಿತ್, ದಿವ್ಯ ಸಮ್ಮುಖ : ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ನಿವೃತ್ತ ಪ್ರಾಧ್ಯಾಪಕ ಮಲ್ಲಣ್ಣ, ಉದ್ಘಾಟನೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘದ ಅಧ್ಯಕ್ಷ ಬನ್ನೂರು ನಾಗರಾಜು, ಆಶಯ ನುಡಿ : ವಿಶ್ವ ಹಿಂದೂ ಪರಿಷತ್, ಮೈಸೂರು ವಿಭಾಗದ ವಿಭಾಗೀಯ ಕಾರ್ಯದರ್ಶಿ ವೆಂಕಟರಾಜು, ಉಪಸ್ಥಿತರು : ಮೂಗೂರು ನಂಜುಂಡಸ್ವಾಮಿ, ಎಂ. ಚಂದ್ರಶೇಖರ್, ನಾಗರಾಜು, ವೀರಗಾಸೆ ಕಲಾವಿದ ಬಸವಣ್ಣ, ಚಲನಚಿತ್ರ ನಟ ಪ್ರಭುಸೂರ್ಯ, ಡಿ.ಪಿ.ಕೆ. ಪರಮೇಶ್, ಸ್ಥಳ: ರೋಟರಿ ಭವನ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸಂವಿಧಾನ ದಿನಾಚರಣೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ. ಶಿವಕುಮಾರ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಎಂ. ಶಾರದಾ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಹೆಚ್.ಎ. ಪೂರ್ಣಿಮಾ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಚಾಮರಾಜೇಶ್ವರಿ ಅಕ್ಕನ ಬಳಗ :** ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ 109ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದಿವ್ಯ ಸಮ್ಮುಖ: ಚಾಮರಾಜನಗರ ಶ್ರೀ ಸಿದ್ಧಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಉದ್ಘಾಟನೆ: ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಅಧ್ಯಕ್ಷತೆ: ಮಾಜಿ ಶಾಸಕಿ ಪರಿಮಳಾ ನಾಗಪ್ಪ, ನುಡಿನಮನ: ಆಧ್ಯಾತ್ಮಿಕ ಚಿಂತಕ ಶಂಕರ ದೇವನೂರು, ಉಪಸ್ಥಿತರು : ಬಳಗದ ಅಧ್ಯಕ್ಷೆ ಮಾದಲಾಂಬಿಕೆ ನಂಜುಂಡಸ್ವಾಮಿ, ಸ್ಥಳ: ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್, ಶ್ರೀ ವಾಣಿ ವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜು:** ಕನ್ನಡ ಹಬ್ಬ, ಮುಖ್ಯ ಅತಿಥಿಗಳು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಅಧ್ಯಕ್ಷತೆ: ಟ್ರಸ್ಟ್ ಕಾರ್ಯದರ್ಶಿ ಮಹೇಶ್ ಅರಸ್, ಸನ್ಮಾನಿತರು: ಬೆಮೆಲ್ ಕಂಪಲಪ್ಪ ಸ್ಥಳ: ಕಾಲೇಜು ಆವರಣ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ಭೀಮ್ ಸೇನೆ:** ಉದ್ಘಾಟನಾ ಸಮಾರಂಭ, ಸ್ಥಳ: ಪುರಭವನ, ದೊಡ್ಡ ಗಡಿಯಾರ, ಬೆಳಗ್ಗೆ 11ಕ್ಕೆ.

■ **ಮೈಸೂರು ವಕೀಲರ ಸಂಘ :** ಸಂವಿಧಾನ ದಿನಾಚರಣೆ, ಉದ್ಘಾಟನೆ : ಪ್ರಭಾರ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ. ಪುಟ್ಟಸ್ವಾಮಿ, ಅಧ್ಯಕ್ಷತೆ : ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ಉಪಸ್ಥಿತರು: ಪ್ರೊ.ಟಿ.ಆರ್.ಮಾರುತಿ, ಎ.ಜಿ.ಸುಧೀರ್, ಬಿ.ಆರ್.ಚಂದ್ರಮೌಳಿ, ಎಂ.ವಿ.ಚಂದ್ರಶೇಖರ್, ಸ್ಥಳ: ಮೈಸೂರು ವಕೀಲರ ಸಂಘ, ಮಧ್ಯಾಹ್ನ 1.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಸಾಂವಿಧಾನಿಕ ದಿನಾಚರಣೆ, ಮುಖ್ಯ ಅತಿಥಿಗಳು : ಅಸೋಸಿಯೇಟ್ ಪ್ರೊಫೆಸರ್ ಡಾ. ಎಂ.ಕೆ. ಮಟೋಳ್ಳಿ, ಅಧ್ಯಕ್ಷತೆ :ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣನವರ್, ಎಸ್. ಶಿವಲಿಂಗಯ್ಯ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಮಹಾರಾಣಿ ಮಹಿಳಾ ಕಲಾ ಕಾಲೇಜು:** ಸಂವಿಧಾನ ದಿನಾಚರಣೆ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ನಿವೃತ್ತ ಹಣಕಾಸು ಅಧಿಕಾರಿ ಶಿವರುದ್ರಪ್ಪ, ಉಪಸ್ಥಿತರು: ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ.ಪ್ರವೀಣ್, ಮಹಾರಾಣಿ ಕಾಲೇಜು ಪ್ರಾಂಶುಪಾಲರಾದ ಡಾ.ಎಂ. ವಿಜಯಮ್ಮ, ಪ್ರೊ.ಲಕ್ಷ್ಮಿ, ಕುಲಸಚಿವ ಡಾ.ಹೆಚ್.ವಿಶ್ವನಾಥ್, ಸ್ಥಳ: ಕಾವೇರಿ ಸಭಾಂಗಣ, ಮಧ್ಯಾಹ್ನ 3ಕ್ಕೆ

■ **ನಾಗರಿಕ ಸ್ವಾತಂತ್ರ್ಯಕ್ಕಾಗಿ ಜನರ ಒಕ್ಕೂಟ (ಪಿಯುಸಿಎಲ್), ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್, ಗೋಕುಲಂ:** ಸಂವಿಧಾನ ದಿನಾಚರಣೆಯ ದಿನದಂದು ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ವಿಷಯ: ಭಾರತದ ಸಂವಿಧಾನ–ಸವಾಲುಗಳು, ಪ್ರತಿಕ್ರಿಯೆಗಳು ಮತ್ತು ಭವಿಷ್ಯ, ಉಪನ್ಯಾಸಕರು: ನಿವೃತ್ತ ಪ್ರಾಧ್ಯಾಪಕ ಎಂ. ಉಮಾಪತಿ, ಅಧ್ಯಕ್ಷತೆ: ಪಿಯುಸಿಎಲ್ ಅಧ್ಯಕ್ಷ ಕಮಲ್ ಗೋಪಿನಾಥ್, ಉಪಸ್ಥಿತರು: ಶ್ಯಾಗಲೆ ಶಿವರುದ್ರಮ್ಮ ಟ್ರಸ್ಟ್‌ನ ಕೆ.ಕಾಳಚನ್ನೇಗೌಡ, ಸ್ಥಳ: ಶ್ಯಾಗಲೆ ಹೌಸ್, ಕಾಂಟೂರ್ ರಸ್ತೆ, ಗೋಕುಲಂ, ಸಂಜೆ 4.30 ರಿಂದ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಪ್ರತಿನಿತ್ಯ ಬೆಳಗ್ಗೆ ರುದ್ರಾಭಿಷೇಕ, ಸಂಜೆ 7ಕ್ಕೆ ಪ್ರಾಕಾರೋತ್ಸವ, ಸ್ಥಳ: ದೇವಸ್ಥಾನದ ಆವರಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀರಾಮ್‌ಜೀ ಸೇವಾ ಟ್ರಸ್ಟ್ :** ಸಂವಿಧಾನ ಸಮರ್ಪಣಾ ದಿನಾಚರಣೆ, ಉದ್ಘಾಟನೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಭಾಷಣಕಾರರು : ಡಾ. ಕೃಷ್ಣಮೂರ್ತಿ ಚಮರಂ, ಚಿಂತಕ ಹರಕುಮಾರ್, ಅಧ್ಯಕ್ಷತೆ: ಪ್ರೊ ಡಿ.ಆನಂದ್, ಉಪಸ್ಥಿತರು : ಪಾಲಿಕೆ ಮಾಜಿ ಸದಸ್ಯ ಪ್ರದೀಪ್ ಚಂದ್ರ, ಟ್ರಸ್ಟ್ ಅಧ್ಯಕ್ಷ ಎಂ. ನರಸಿಂಹ ಮೂರ್ತಿ, ಲಕ್ಷ್ಮಿರಾಮ್, ನಾಡಪಹಳ್ಳಿ ಅವರಿಂದ ಕ್ರಾಂತಿ ಗೀತೆ, ಸ್ಥಳ: ವಿಶ್ವಜ್ಞಾನಿ ವೃತ್ತ, ಕೆಸರೆ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಎನ್.ಕೆ.ಲೋಲಾಕ್ಷಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ: ಶಭಾನ ಮತ್ತು ಕೀರ್ತಿಎಸ್. ಬೈಂದೂರು, ಪರಿಕಲ್ಪನೆ: ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಮೊದಲ ಕಂತು ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.05 ಸಂವಿಧಾನ ದಿನ ಕುರಿತ ವಿಶೇಷ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಚಂದ್ರಿಕಾ. ಆರ್.,12.45 ಯಾರೂ ಕಾಣದ ಪ್ರವಾಸಿ ತಾಣ–ನಂಜನಗೂಡು ತಾಲೂಕು ಚಿಕ್ಕಟಿಯ ಗಂಗರ ಕಾಲದ ಸ್ಮಾರಕವನ್ನು ಪರಿಚಯಿಸುತ್ತಾರೆ ಸಿರಿ ಮೈಸೂರು, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ರಂಗಸ್ವಾಮಿ–ನಾಗಸ್ವರ, 4.00 ಕಥಾ ಕಾಲಕ್ಷೇಪ–ಭೀಮ ಜರಾಸಂಧ, ಪ್ರಸ್ತುತಿ: ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಕೃಷಿ ಉಪ ಉತ್ಪನ್ನಗಳನ್ನು ಕುರಿತ ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ: ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ.ಕೆ.ಎನ್.ಮಧುಸೂದನ್ ಹಾಗೂ ಡಾ.ವೈ. ತಿರುಪತಯ್ಯ, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಪಂಡಿತ್. ಕಾರ್ತಿಕ್ ಕುಮಾರ್–ಸಿತಾರ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ.ಕೆ. ವರದರಾಜನ್–ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 26 ಮಂಗಳವಾರ 2024

ಸಂಪುಟ: 45 | ಸಂಚಿಕೆ: 219 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕೆಬಿಜಿಯವರ ಭೂಮಂತ್ರ...
ಸಿದ್ದರಾಮಯ್ಯನವರ ಶಿಕ್ಷಣ ಕುರಿತ ಭಾಷಣವನ್ನು ನೀವು ಕೇಳಿದ್ದೀರಾ?

■ ಪುಟ–4

ಸೌದಿ ಅರೇಬಿಯಾದ ಜೆದ್ದಾದಲ್ಲಿ ಐಪಿಎಲ್ ಮೆಗಾ ಹರಾಜು
ಕೋಟಿ ಕೋಟಿ ಹಣ ಸುರಿದು ಆಟಗಾರರ ಖರೀದಿ
ಅತೀ ಹೆಚ್ಚು 27 ಕೋಟಿಗೆ ಮಾರಾಟವಾದ ರಿಷಬ್ ಪಂತ್

■ ಪುಟ–5

ಉಪ ಸಮರದ ದಿಗ್ವಿಜಯದ ಬೆನ್ನ ಹಿಂದೆಯೇ ಜೆಡಿಎಸ್ ಶಾಸಕರಿಗೆ ಕಾಂಗ್ರೆಸ್ ಗಾಳ

ಬೆಳಗಾವಿ ಅಧಿವೇಶನದಲ್ಲೇ ಕೆಲ ಜೆಡಿಎಸ್ ಶಾಸಕರು

ಪ್ರತ್ಯೇಕ ಆಸನಕ್ಕೆ ಮನವಿ ಮಾಡುವ ಸಾಧ್ಯತೆ

ಬೆಂಗಳೂರು, ನ.25(ಕೆಎಂಶಿ)– ವಿಧಾನಸಭಾ ಉಪ ಚುನಾವಣೆ ಫಲಿತಾಂಶ ಹೊರಬೀಳುತ್ತಿದ್ದಂತೆ ಜೆಡಿಎಸ್‌ನ ಪ್ರಭಾವಿ ಶಾಸಕರ ಸೆಳೆಯಲು ಕಾಂಗ್ರೆಸ್ ಮುಂದಾಗಿದೆ. ಬೆಳಗಾವಿ ಅಧಿವೇಶನಕ್ಕೂ ಮುನ್ನವೇ ಕೆಲ ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಪ್ರತ್ಯೇಕ ಬಣವಾಗಿ ಗುರುತಿಸಿಕೊಂಡು ತಮ್ಮದೇ ನೈಜ ಜೆಡಿಎಸ್ ಎಂದು ಬಿಂಬಿಸಿಕೊಳ್ಳಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತೆರೆಮರೆಯಲ್ಲಿ ಜೆಡಿಎಸ್‌ನ ಕೆಲವು ಶಾಸಕರು ಮತ್ತು ಮುಖಂಡರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಜೆಡಿಎಸ್ ಕಾರ್ಯಕರ್ತರನ್ನು ಪಕ್ಷಕ್ಕೆ ಸೆಳೆದುಕೊಳ್ಳುವ ಉದ್ದೇಶದಿಂದಲೇ ಮುಖ್ಯಮಂತ್ರಿಗಳ ಅಭಿಮಾನಿಗಳ ಹೆಸರಿನಲ್ಲಿ ಡಿ.5ರಂದು ಹಾಸನದಲ್ಲಿ ಬೃಹತ್ ಸಮಾವೇಶ ನಡೆಸುತ್ತಿದ್ದಾರೆ.

ಇದಕ್ಕೂ ಮುನ್ನ ತುಮಕೂರಿನಲ್ಲಿ ಸರ್ಕಾರದ ವತಿಯಿಂದ ಡಿಸೆಂಬರ್ 2ರಂದು ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿಯವರೇ ಆಯೋಜಿಸಿದ್ದಾರೆ. ಗೃಹ ಇಲಾಖೆ ಹೊಣೆ ಹೊತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ.ಪರಮೇಶ್ವರ್, ಸಾಧನಾ ಸಮಾವೇಶ ನಡೆಸಲು ಭಾರಿ ಸಿದ್ಧತೆ ಮಾಡಿಕೊಂಡಿದ್ದಾರೆ. ಈ ಸರ್ಕಾರಿ ಸಮಾವೇಶದಲ್ಲೇ



ಕೆಲವು ಜೆಡಿಎಸ್ ಶಾಸಕರು ವೇದಿಕೆಯನ್ನು ಹಂಚಿಕೊಳ್ಳಲಿದ್ದಾರೆ. ಆ ನಂತರ, ಹಾಸನದಲ್ಲಿ ನಡೆಯುವ ಸಮಾವೇಶದಲ್ಲಿ ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ಸಿದ್ದರಾಮಯ್ಯ ಟೀಕಾಸ್ತ್ರಗಳನ್ನು ಸಿಡಿಸಿ, ಕೋಮುವಾದಿ ಪಕ್ಷದ ಜೊತೆ ಜೆಡಿಎಸ್ ಕೈಜೋಡಿಸಿದ್ದು ಇದನ್ನು ವಿರೋಧಿಸಿ ಆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಹೊರಬನ್ನಿ ಎಂದು ಸಾರ್ವಜನಿಕವಾಗಿ ಕರೆ ನೀಡಲಿದ್ದಾರಂತೆ.

ಚನ್ನಪಟ್ಟಣ ವಿಧಾನಸಭಾ ಉಪಚುನಾವಣಾ ಪ್ರಚಾರ ಸಂದರ್ಭದಲ್ಲಿ ದೇವೇಗೌಡರು ಸಿದ್ದರಾಮಯ್ಯ ವಿರುದ್ಧ ಮಾಡಿದ ಟೀಕೆ ಮತ್ತು ಈ ಸರ್ಕಾರವನ್ನು ಕಿತ್ತೊಗೆಯುವವರೆಗೂ ವಿಶ್ರಮಿಸುವುದಿಲ್ಲ ಎಂಬ ಹೇಳಿಕೆ ಮುಖ್ಯಮಂತ್ರಿ ಅವರ ನಿದ್ದೆಗೆಡಿಸಿದೆ.


ಅವರ ಹೇಳಿಕೆಯನ್ನೇ ಸವಾಲಾಗಿ ತೆಗೆದುಕೊಂಡಿರುವ ಸಿದ್ದರಾಮಯ್ಯ, ಗೌಡರ ನೆಲದಲ್ಲೇ ಅವರಿಗೆ ಉತ್ತರ ನೀಡುವುದಲ್ಲದೆ, ಆ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ವೇದಿಕೆ ಸಿದ್ಧಪಡಿಸಲಿದ್ದಾರೆ.

ಹಾಸನ ಸಮಾವೇಶದ ನಂತರ, ಜೆಡಿಎಸ್ ಬಲಿಷ್ಠವಾಗಿರುವ ಜಿಲ್ಲೆಗಳಲ್ಲಿ ಸಿದ್ದರಾಮಯ್ಯ ಅಭಿಮಾನಿಗಳು ಇಂತಹ ಸಮಾವೇಶಗಳನ್ನು ನಡೆಸಲು ತೀರ್ಮಾನಿಸಿದ್ದಾರೆ.

ಇದಕ್ಕೂ ಮೊದಲು ಚನ್ನಪಟ್ಟಣ ಸೇರಿದಂತೆ ಉಪ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಮೂರೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಸಮಾವೇಶಗಳು ನಡೆಯಲಿವೆ. ಮುಡಾ ಹಾಗೂ ಮಹರ್ಷಿ ವಾಲ್ಮೀಕಿ ಹಗರಣವನ್ನು ● 6ನೇ ಪುಟಕ್ಕೆ

ಜೆಡಿಎಸ್‌ನ ಸ್ಥಿತಿ ಈಗ ಬಸ್ ನಿಲ್ದಾಣದಲ್ಲಿ ನಿಂತ ಬಸವಿಯಂತಾಗಿದೆ!

ಮೈಸೂರಿನಲ್ಲಿ ಶಾಸಕ ಜಿ.ಟಿ.ದೇವೇಗೌಡರಿಗೆ ಜನ್ಮದಿನದ ಶುಭಾಶಯ ಕೋರಿದ ಬಳಿಕ ಮಾಜಿ ಸಚಿವ ಸಿಎಂ ಇಬ್ರಾಹಿಂ ಹೇಳಿಕೆ



ಮೈಸೂರಿನಲ್ಲಿ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ ಮಾಜಿ ಸಚಿವ ಸಿ.ಎಂ.ಇಬ್ರಾಹಿಂ

ಮೈಸೂರು, ನ.25(ಆರ್‌ಕೆ)– ಜಾತ್ಯಾತೀತ ಜನತಾ ದಳದ ಮನೆಗೆ ಈಗ ಬೆಂಕಿ ಬಿದ್ದಾಗಿದೆ ಎಂದು ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರನ್ನು ಭೇಟಿ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಈಗ ಇರುವ ಜೆಡಿಎಸ್ ಮನೆಗೆ ಬೆಂಕಿ ಬಿದ್ದಾಗಿದೆ. ಬೆಂಕಿ ನಂದಿಸುವ ಕೆಲಸವಾಗಬೇಕಿದೆ ಎಂದರು. ಇತ್ತೀಚಿನ ರಾಜಕೀಯ ಬೆಳವಣಿಗೆ ನಂತರ ಜೆಡಿಎಸ್ ಶಾಸಕರು ಬೇಸರಗೊಂಡಿದ್ದಾರೆ. ಅವರವರ ಕ್ಷೇತ್ರ ಉಳಿಸಿಕೊಳ್ಳಲು ಶಾಸಕರು ಪರದಾಡುವಂತಾಗಿದೆ. ಹೀಗಾಗಿ ಒಬ್ಬೊಬ್ಬರಾಗಿ ಮಾತನಾಡಲಾರಂಭಿಸಿದ್ದಾರೆ ಹೆಚ್.ಡಿ. ಕುಮಾರಸ್ವಾಮಿ ● 6ನೇ ಪುಟಕ್ಕೆ

ಗೊಂದಲ, ಗದ್ದಲದ ನಡುವೆ ವಕ್ಫ್ ವಿರುದ್ಧ

ಯತ್ನಾಳ್ ಟೀಂ ಹೋರಾಟ ಆರಂಭ

ಬೀದರ್, ನ.25– ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸೆಡ್ಡು ಹೊಡೆದಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ರೆಬೆಲ್ ತಂಡ ವಕ್ಫ್ ವಿರುದ್ಧ ಹೋರಾಟವನ್ನು ಆರಂಭಿಸಿದೆ. ಸೋಮವಾರ ಬೆಳಗ್ಗೆ ಬೀದರ್‌ನ ಹೊರವಲಯದ ನರಸಿಂಹ ಝುರಣಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಇದಕ್ಕೂ ಮುನ್ನ ಗೋಶಾಲೆಯಲ್ಲಿ ಗೋವಿಗೆ ಪೂಜೆ ಮಾಡಿದ ಟೀಂ, ವಕ್ಫ್ ವಿರುದ್ಧ ಹೋರಾಟವನ್ನು ಶುರು ಮಾಡಿದರು.

ಈ ವೇಳೆ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಕುಮಾರ ಬಂಗಾರಪ್ಪ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಬಿಜೆಪಿ ಕಲಬುರಗಿ ವಿಭಾಗೀಯ ಸಹ ಪ್ರಭಾರಿ ಈಶ್ವರಸಿಂಗ್ ಠಾಕೂರ್ ಹಾಜರಿದ್ದರು. ಭಾಷಣದ ವೇಳೆ ವಕ್ಫ್ ಬೋರ್ಡ್ ವಿರುದ್ಧ ಶಾಸಕ ಯತ್ನಾಳ್ ಆಕ್ರೋಶ ಹೊರ ಹಾಕಿದರು. ● 6ನೇ ಪುಟಕ್ಕೆ



ಬೀದರ್‌ನಲ್ಲಿ ಸೋಮವಾರ ಆರಂಭವಾದ ವಕ್ಫ್ ವಿರುದ್ಧದ ಹೋರಾಟ ಸಭೆಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿದರು.

ಬಿಜೆಪಿ ಬಣ ಸಂಘರ್ಷ; ಪೊಲೀಸರಿಗೆ ದೂರು

ಬೆಂಗಳೂರು/ ಬೀದರ್: ರಾಜ್ಯ ಬಿಜೆಪಿ ಮನೆಯ ಬಿರುಕು ಮತ್ತಷ್ಟು ಹೆಚ್ಚಾಗಿದ್ದು, ಬಣ ಬಡಿದಾಟ ಮತ್ತೊಂದು ಹಂತಕ್ಕೆ ಹೋಗಿದೆ. ಇಂದಿನಿಂದ ವಕ್ಫ್ ವಿರೋಧಿ ರಾಜ್ಯ ಪ್ರವಾಸ ಕೈಗೊಂಡಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಂಡಕ್ಕೆ ಬಿಜೆಪಿಯಿಂದ ಪೊಲೀಸ್ ದೂರು ನೀಡುವ ಮೂಲಕ ಶಾಕ್ ಕೊಡಲಾಗಿದೆ. ಯತ್ನಾಳ್ ತಂಡದ ವಿರುದ್ಧ ಹೈಕಮಾಂಡ್‌ಗೆ ದೂರು ಕೊಡಲು ನಿರ್ಧರಿಸಲಾಗಿದೆ. ಬಿಜೆಪಿ ವಕ್ಫ್ ಹೋರಾಟ ಬಣ ಸಂಘರ್ಷಕ್ಕೆ ಬಲಿಯಾಗುವ ಲಕ್ಷಣ ಕಾಣುತ್ತಿದೆ. ಬಿಜೆಪಿ ಚಿಹ್ನೆಯಡಿ ವಕ್ಫ್ ವಿರೋಧಿ ಹೋರಾಟ ಮಾಡುತ್ತಿರುವ ಯತ್ನಾಳ್ ಅಂಡ್ ಟೀಂ ಮೇಲೆ ಬೀದರ್ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ್ ಪಾಟೀಲ್‌ಪೊಲೀಸ್ ಅಧೀಕ್ಷರಿಗೆ ಲಿಖಿತ ದೂರು ನೀಡಿದ್ದಾರೆ. ಯಾರೋ ಅನಾಮಿಕರು ಬೀದರ್ ನಗರಾದ್ಯಂತ ಬಿಜೆಪಿ ಚಿಹ್ನೆ, ಬ್ಯಾನರ್‌ಗಳನ್ನು ಹಾಕಿದ್ದಾರೆ. ಜಿಲ್ಲಾಧ್ಯಕ್ಷನಾದ ನನಗೆ ● 6ನೇ ಪುಟಕ್ಕೆ

ಕಾಂಗ್ರೆಸ್ ಶಕ್ತಿ ಬಿಜೆಪಿ, ಜೆಡಿಎಸ್ ಕಾರ್ಯಕರ್ತರಿಗೂ ಅರಿವಾಗಿದೆ

- ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕ ನುಡಿ
- ಜೆಡಿಎಸ್, ಬಿಜೆಪಿ ಅಪಪ್ರಚಾರವನ್ನು ರಾಜ್ಯದ ಜನ ನಂಬಲ್ಲ



ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ನ.25(ಕೆಎಂಶಿ)– ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಭವಿಷ್ಯವಿದೆ ಎಂದು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರಿಗೆ ಅರಿವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವರ್ಷದ ವಿಧಾನಸಭೆ ಚುನಾವಣೆ ಫಲಿತಾಂಶಕ್ಕೂ ಈ ಉಪಚುನಾವಣೆಯಲ್ಲಿ ಈ ಕ್ಷೇತ್ರಗಳಲ್ಲಿನ ಮತಗಳ ಅಂತರವನ್ನು ಗಮನಿಸಿ, ಬಸವರಾಜ ಬೊಮ್ಮಾಯಿ ಅವರ ಕ್ಷೇತ್ರದಲ್ಲಿ 50 ಸಾವಿರ ಮತಗಳು ಬದಲಾಗಿವೆ, ಚನ್ನಪಟ್ಟಣದಲ್ಲಿ ವಿಧಾನಸಭೆ ಚುನಾವಣೆಯಲ್ಲಿ, ಕಾಂಗ್ರೆಸ್ ಅಭ್ಯರ್ಥಿ 16 ಸಾವಿರ ಮತಗಳನ್ನು ಪಡೆದಿದ್ದರು, ಈ ಉಪಚುನಾವಣೆಯಲ್ಲಿ 1.12 ಲಕ್ಷ ಮತಗಳನ್ನು ಪಡೆದಿದ್ದಾರೆ ಎಂದರು.

ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ನಮಗೆ ಮತ ಹಾಕದಿದ್ದರೆ ಇಷ್ಟು ಪ್ರಮಾಣದಲ್ಲಿ ಮತಗಳು ವ್ಯತ್ಯಾಸವಾಗುತ್ತಿತ್ತೇ, ಆ ಮೂಲಕ ಜನ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಕೂಟವನ್ನು ತಿರಸ್ಕರಿಸಿದ್ದಾರೆ. ಬಿಜೆಪಿ ಅವಧಿಯಲ್ಲಿ ವಕ್ಫ್ ಆಸ್ತಿ ವಿಚಾರವಾಗಿ ಅವರಿಗೆ ಬೇಕಾಗಿರುವುದು ಕೇವಲ ಪ್ರಚಾರ. ಅವರು ಪ್ರತಿಭಟನೆ ಮಾಡಿದಷ್ಟು ನಮಗೆ ಒಳ್ಳೆಯದು. ಅವರು ತಮ್ಮ ಮುಖಗಳನ್ನು ಕನ್ನಡಿಯಲ್ಲಿ ನೋಡಿಕೊಳ್ಳಲಿ ಎಂದು ಹೇಳಿದ್ದೇನೆ. ಗೋಮುಖ ವ್ಯಾಘ್ರರ ಸತ್ಯಾಂಶವನ್ನು ನಾವು ಬಿಚ್ಚಿಡುತ್ತೇವೆ, ಚನ್ನಪಟ್ಟಣ ಉಪಚುನಾವಣೆ ಸಂದರ್ಭದಲ್ಲಿ ಅಲ್ಲಿನ ಜನ ಪಹಣಿಯಲ್ಲಿ ವಕ್ಫ್ ನಮೂದಾಗಿರುವ ವಿಚಾರವಾಗಿ ಅರ್ಜಿ ತೆಗೆದುಕೊಂಡು ಹೋಗುತ್ತಿದ್ದರು. ● 6ನೇ ಪುಟಕ್ಕೆ

ಮುಡಾ ನಿವೇಶನ ಹಂಚಿಕೆ ಹಗರಣ ಪ್ರಕರಣ

ಇಂದು ಹೈಕೋರ್ಟ್‌ಗೆ ವರದಿ ಸಲ್ಲಿಸುತ್ತೇವೆ

ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಸ್ಪಷ್ಟನೆ



ಮುಡಾ ಕಚೇರಿ



ಹೈಕೋರ್ಟ್

ಮೈಸೂರು, ನ.25(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ನಿವೇಶನ ಹಂಚಿಕೆ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣ ಕುರಿತಂತೆ ನಾಳೆ(ನವೆಂಬರ್ 26) ಹೈಕೋರ್ಟ್‌ಗೆ ಮಧ್ಯಂತರ ವರದಿ ಸಲ್ಲಿಸುತ್ತೇವೆ ಎಂದು ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ತಿಳಿಸಿದ್ದಾರೆ.

ಇಂದು ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದ ಅವರು, ನಾಳೆ ಹೈಕೋರ್ಟ್‌ನಲ್ಲಿ ನಡೆಯುವ ವಿಚಾರಣೆ ವೇಳೆ ನ್ಯಾಯಾಲಯ ಸೂಚಿಸಿರುವಂತೆ ವರದಿ ಸಲ್ಲಿಸುವುದಾಗಿ ಹೇಳಿದರು. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಶೇ.50:50 ಅನುಪಾತದಡಿ 14



ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್

ನಿವೇಶನಗಳನ್ನು ಅಕ್ರಮವಾಗಿ ಮಂಜೂರಾತಿ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದ ಅನ್ವಯ ಸೆ.27ರಂದು ಮೈಸೂರು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿ, ತನಿಖೆ ಕೈಗೊಂಡಿದ್ದರು. ಸಿದ್ದರಾಮಯ್ಯ ದಂಪತಿ ಸೇರಿದಂತೆ ಪ್ರಕರಣದ ಆರೋಪಿಗಳ ವಿಚಾರಣೆ ನಡೆಸಿದ್ದರು.

ಈ ನಡುವೆ ದೂರುದಾರ ಸ್ನೇಹಮಯಿ ಕೃಷ್ಣ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ಲೋಕಾಯುಕ್ತ ಅಧಿಕಾರಿಗಳು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಕಾರಣ ಅವರು ನಡೆಸುವ ತನಿಖೆ ನಿಷ್ಪಕ್ಷಪಾತವಾಗಿರುವುದಿಲ್ಲ. ಆದ ಕಾರಣ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಪ್ರತಿಪಾದಿಸಿದ್ದರು.

ನ.5ರಂದು ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಧೀಶರು, ಸರ್ಕಾರಿ ವಕೀಲರು ಕಾಲಾವಕಾಶ ಕೇಳಿದ ಹಿನ್ನೆಲೆಯಲ್ಲಿ ನ.26ಕ್ಕೆ ವಿಚಾರಣೆ ಮುಂದೂಡಿದರು. ಇದೇ ವೇಳೆ ಪ್ರಕರಣ ಸಂಬಂಧ ತನಿಖೆ ನಡೆಸಿರುವ ಲೋಕಾಯುಕ್ತ ಪೊಲೀಸರು, ಮಧ್ಯಂತರ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರು ಲೋಕಾಯುಕ್ತರು ಪ್ರಕರಣದ ಬಗ್ಗೆ ಈವರೆಗೆ ನಡೆಸಿರುವ ತನಿಖೆ ವರದಿಯನ್ನು ನಾಳೆ ಸಲ್ಲಿಸಲಿದ್ದಾರೆ.

ಸಿಬಿಐ ತನಿಖೆಗೆ ಮನವಿ: ಸಿಬಿಐ ತನಿಖೆಗೆ ಕೋರಿ ಸಲ್ಲಿಸಿರುವ ● 6ನೇ ಪುಟಕ್ಕೆ

ಸಮಯಾವಕಾಶ ಕೋರುತ್ತೇವೆ...

ಲೋಕಾಯುಕ್ತ ಐಜಿಪಿ ಡಾ.ಸುಬ್ರಹ್ಮಣ್ಯರಾವ್ ಮಾಹಿತಿ



ಸುಬ್ರಹ್ಮಣ್ಯರಾವ್

ಮೈಸೂರು, ನ.25(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ಹೈಕೋರ್ಟ್‌ಗೆ ಇಂದು ಯಾವುದೇ ವರದಿ ಸಲ್ಲಿಸಿಲ್ಲ ಎಂದು ಲೋಕಾಯುಕ್ತ ಐಜಿಪಿ ಡಾ.ಎ.ಸುಬ್ರಹ್ಮಣ್ಯರಾವ್ ಸ್ಪಷ್ಟಪಡಿಸಿದ್ದಾರೆ.

ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಈ ವಿಚಾರ ತಿಳಿಸಿದ ಅವರು, ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ಇಂದು ವರದಿ ಸಲ್ಲಿಸುವಂತೆ ಹೈಕೋರ್ಟ್ ಸೂಚಿಸಿತ್ತು. ಆದರೆ ಇಂದು ವರದಿ ಸಲ್ಲಿಸಿಲ್ಲ ಎಂದರು. ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ನಾಳೆ(ನ.26) ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯಲಿದೆ. ಆದರೆ ವರದಿ ಸಲ್ಲಿಸಲು ಮತ್ತಷ್ಟು ಸಮಯಾವಕಾಶ ನೀಡುವಂತೆ ನಮ್ಮ ವಕೀಲರ ಮೂಲಕ ಕೋರಲಿದ್ದೇವೆ. ಇದರಿಂದ ನ್ಯಾಯಾಧೀಶರು ನಾಳೆ ವಿಚಾರಣೆಯನ್ನು ಮುಂದೂಡಬಹುದು ಎಂದು ಡಾ.ಸುಬ್ರಹ್ಮಣ್ಯರಾವ್ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಣ್ಣಿನ ಕಡೆಯವರು : ನಮ್ಮ ಹುಡುಗಿ ಒಪ್ಪಿಗೆ ಆದಳೆ?
ಗಂಡಿನ ಕಡೆಯವರು : ನಮಗೆ ಒಪ್ಪಿಗೆ.
ಹೆಣ್ಣಿನ ಕಡೆಯವರು : ನಾವು 1 ಕೆಜಿ ಚಿನ್ನ, 1 ಕಾರು, 10 ಲಕ್ಷ ಹಣ ಕೊಡ್ತೀವಿ. ಇನ್ನೂ ಏನಾದರೂ ಬೇಕಾ?
ಗಂಡಿನ ಕಡೆಯವರು : ಅಯ್ಯೋ! ಅವೆಲ್ಲ ಏನೂ ಬೇಡ. ನಮ್ಮತ್ರ ಇರೋ 50 ಲಕ್ಷ 2 ಸಾವಿರ ನೋಟ್ ಬದಲಿಸಿಕೊಟ್ರೆ ಸಾಕು.

ಮೈಸೂರು ಮಿತ್ರ

ಮಂಗಳವಾರ, 26 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ತಪ್ಪು ಅನ್ನುವುದು ಜೀವನದ ಒಂದು ಪುಟ ಮಾತ್ರ. ಸಂಬಂಧಗಳು ಅನ್ನುವುದು ಪೂರ್ತಿ ಪುಸ್ತಕ. ದಯವಿಟ್ಟು ಆ ಒಂದು ಪುಟಕೋಸ್ಕರ ಪೂರ್ತಿ ಪುಸ್ತಕವನ್ನು ಕಳೆದುಕೊಳ್ಳಬೇಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶಸ್ತ್ರದಿಂದಾದ ಗಾಯ ಮಾಯುತ್ತದೆ, ನಾಲಿಗೆಯಿಂದಾದ ಗಾಯ ಮಾಯುವುದಿಲ್ಲ.

ನಿಮ್ಮ ಪತ್ರಗಳು

ಉಪಚುನಾವಣೆ, ಹಿಂದುತ್ವ–ಬಿಜೆಪಿ

ಮಾನ್ಯರೆ,

ಕರ್ನಾಟಕದ ಉಪಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ ಸಂಡೂರು, ಶಿಗ್ಗಾಂವಿ ಹಾಗೂ ಚನ್ನಪಟ್ಟಣದ ಎನ್‌ಡಿಎ ಅಭ್ಯರ್ಥಿಗಳು ರಾಜ್ಯ ಸರ್ಕಾರದ ಚುಕ್ಕಾಣಿಯಿಡಿದಿರುವ ಕಾಂಗ್ರೆಸ್‌ನ ಅಭ್ಯರ್ಥಿಗಳ ವಿರುದ್ಧ ಮೂರು ಕ್ಷೇತ್ರಗಳಲ್ಲಿ ಯಾವುದೇ ಪ್ರಬಲ–ಪ್ರತಿರೋಧ ತೋರದೆ ಸುಲಭವಾಗಿ ಸೋತಿರುವ ಹಿಂದಿನ ಕಾರಣಗಳು ಹಾಗೂ ಕಾಂಗ್ರೆಸ್‌ನ ಗೆಲುವಿಗೆ ಉಪಯುಕ್ತವಾದಂತಹ ಅತೀ ಮುಖ್ಯವಾದ ವಿಚಾರ ಅಲ್ಪಸಂಖ್ಯಾತರ ಮತಗಳ ಕ್ರೋಢೀಕರಣ, ಸಂಪನ್ಮೂಲಗಳ ಸರಿಯಾದ ಬಳಕೆ ಹಾಗೂ ಕಾಂಗ್ರೆಸ್ಸಿನ ಕೆಲವು ಸುಳ್ಳು ವ್ಯಾಖ್ಯಾನಗಳು. ಕರ್ನಾಟಕದ ಬಿಜೆಪಿ, ಎನ್‌ಡಿಎ ಬಳಿ ವಕ್ಫ್‌ನ ಅರಾಜಕತೆ, ಭ್ರಷ್ಟಾಚಾರ, ಮುಡಾ ಹಗರಣ, ವಾಲ್ಮೀಕಿ ಹಗರಣ, ಬೆಲೆ ಏರಿಕೆ, ಬಿಟ್ಟಿ ಭಾಗ್ಯಗಳ ವಿಫಲತೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿಗಳ ಕುಂಠಿತ ಹೀಗೆ ಅನೇಕ ಸೂಕ್ಷ್ಮ ಹಾಗೂ ಅನುಕೂಲಕರ ವಿಚಾರಗಳಿದ್ದರೂ ಜನತೆಗೆ ಇದನ್ನು ತಲುಪಿಸಲು ಯಶಸ್ವಿ ಆಗದೆ ಇರುವ ಪಕ್ಷದ ನಾಯಕರು, ಸಂಘಟನೆ, ಹೊಂದಾಣಿಕೆಯ ವೈಫಲ್ಯ, ನಾಯಕ–ಕಾರ್ಯಕರ್ತರ ಮಧ್ಯೆ ಇಲ್ಲದ ನೇರ ಸಂಪರ್ಕ, ಮುಖ್ಯವಾಗಿ ಸ್ವಜನ ಪಕ್ಷಪಾತ, ಕುಟುಂಬ ರಾಜಕಾರಣ ಹೀಗೆ ಹಲವು ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಇದಕ್ಕೆ ಪೂರಕವಾಗಿ ಸಾಮಾನ್ಯ ಜನರ ಮನಸ್ಥಿತಿ ಕೂಡ ಇನ್ನೂ ಬಿಟ್ಟಿ ಭಾಗ್ಯಗಳಿಂದ ಹೊರಬರದೆ ಇರುವುದು, ಜಾತಿ–ಉಪ ಜಾತಿಗಳ ಕಿತ್ತಾಟ, ಒಗ್ಗಟ್ಟು ಇಲ್ಲದಿರುವುದು, ಅನ್ಯ ಧರ್ಮೀಯರಿಗೆ ಇರುವಂತಹ ಧರ್ಮದ ಮೇಲಿನ ಗೌರವ, ಪ್ರೀತಿ ನಮ್ಮಲ್ಲಿ ಕಾಣದಿರುವುದು ಹಾಗೂ ನೆರೆಯವರಿಗೆ ಕೇಡಾದರೇನು ಎಂಬ ಸ್ವಾರ್ಥ ಭಾವನೆ.

ಮಂಡ್ಯದ ಕಿರಗೂಡಿನಲ್ಲಿ ಹನುಮ ಧ್ವಜಕ್ಕಾದ ಅವಮಾನ, ಹೋರಾಟ ಕೆಲವೇ ತಿಂಗಳಲ್ಲಿ ಮರೆತ ಜನ, ಬೆಂಗಳೂರಿನ ಕೆಜಿ ಹಳ್ಳಿ, ಡಿಜೆ ಹಳ್ಳಿಯಲ್ಲಿ ಪೊಲೀಸ್ ಸ್ಟೇಷನ್‌ಗೇ ಬೆಂಕಿ ಹಚ್ಚಿ ನಮ್ಮದೇ ದಲಿತ ನಾಯಕನನ್ನು ಮೂಲೆ ಗುಂಪಾಗಿಸಿದ ವಿಚಾರವನ್ನು ನೆನಪಲ್ಲಿ ಇಟ್ಟುಕೊಳ್ಳದ ಜನ. 'ಹಿಂದೂ' ಎಂದು ಒಗ್ಗೂಡುವುದು ಕಷ್ಟ ಸಾಧ್ಯವೇ!... ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಬಡ ರೈತರ ಜಮೀನುಗಳನ್ನು ವಕ್ಫ್ ತನ್ನದೆಂದು ಏಕಾಏಕಿ ನೋಟೀಸ್ ನೀಡಿ RTC ಪಹಣಿಗಳಲ್ಲಿ ಮಾಲೀಕತ್ವವನ್ನು ಬದಲಾಯಿಸಿದರೂ ಅದೇ ರೈತರು ತಮ್ಮದಲ್ಲ ಎಂದು ಭಂಡತನ ತೋರಿಸಿರುವುದು ವಿಪರ್ಯಾಸ.

ಮಹಿಳೆಯರಿಗೆ 2000/–ರೂ., ಬಸ್ ಫ್ರೀ ಮಾಡಿ ಅದೇ ಮನೆಯ ಜಮೀನನ್ನು ಕಿತ್ತುಕೊಳ್ಳುವ, ರೇಷನ್ ಕಾರ್ಡ್‌ಗಳನ್ನು ರದ್ದು ಮಾಡುವ ಹುನ್ನಾರ ಅರಿಯದ ಜನ, ಅದನ್ನು ಅರಿವಿಗೆ ತರಲು ವಿಫಲವಾದ ವಿಪಕ್ಷಗಳು. ವಾಲ್ಮೀಕಿ ನಿಗಮದ ನೂರಾರು ಕೋಟಿಗಳು ಕಾಣೆಯಾದರೂ ಅದರ ಫಲಾನುಭವಿಗಳು ಅದನ್ನೇ ಮರೆತು ದ್ರೋಹಿಗಳ ಜೊತೆ ನಿಲ್ಲುವುದು, ಮಕ್ಕಳ ವಿದ್ಯಾರ್ಥಿವೇತನಗಳನ್ನು ತಿಂದವರೊಂದಿಗೆ ನಿಂತ ಮಕ್ಕಳ ಪೋಷಕರು, ಹಿಂದೂ ಎಂಬುದನ್ನು ಮರೆತು ಲಿಂಗಾಯಿತ, ಒಕ್ಕಲಿಗ, ಕುರುಬ, ನಾಯಕ ಎಂದು ತಮ್ಮತಮ್ಮಲ್ಲೇ ಹೊಡೆದಾಡುವ ಗುಂಪುಗಳು, ಇದನ್ನೆಲ್ಲಾ ತಿಳಿಹೇಳಿ, ಹಿಂದೂ ಕ್ರೋಢೀಕರಣ ಮಾಡಲು ಸೋತ ಹಿಂದೂ ನಾಯಕರು, ಸಂಘಟನೆ ಹಾಗೂ ತಿಳಿಸಲು ಸಹಕಾರಿಯಾಗುವ ಸಂಪನ್ಮೂಲಗಳ ಕೊರತೆ, ನಾಯಕರ ಸ್ವಾರ್ಥಗಳು, ಕುಟುಂಬವೇ ಸರ್ವಸ್ವವೆಂದರೆ ಧರ್ಮ, ದೇಶದ ಪರಿಸ್ಥಿತಿ ಭಗವಂತನೇ ಅರಿಯೇ...!

ಕರ್ನಾಟಕದ ಉಪಚುನಾವಣೆ ಫಲಿತಾಂಶದ ದಿನದಂದೇ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆ ಫಲಿತಾಂಶ ಹೊರಬಂದಿದ್ದು, ಹಿಂದೂಗಳು ಒಗ್ಗೂಡಿದ್ದು, ಫಾಲ್ಗರ್‌ನ ಸಾಧುಗಳ ಸಾವನ್ನು ಜನ ಮರೆಯದೆ ಸಾವಿಗೆ ಕಾರಣವಾದವರನ್ನು ಮುಖ ತೋರಿಸದಂತೆ ಸೋಲಿಸಿದ್ದಾರೆ.

ಕರ್ನಾಟಕದ ಬಿಜೆಪಿಗೆ, ಅದರ ನಾಯಕರಿಗೆ ಇದು ಪರಾಮರ್ಶೆಗೊಳ್ಳುವ ಬದಲಾಗುವ ಬಹು ದೊಡ್ಡದಾದ ಅವಕಾಶ. ನಾಯಕರ ಮಕ್ಕಳು–ಮೊಮ್ಮಕ್ಕಳನ್ನು ಬಿಟ್ಟು ಯಾವುದೇ ಹಿನ್ನೆಲೆ ಇಲ್ಲದೆ ಇರುವಂತ ಯುವಕರಿಗೆ ಅವಕಾಶ, ತಂತ್ರಗಾರಿಕೆ ಹೆಣೆಯುವಂತಹ ಕಾರ್ಯಕರ್ತರು, ಸಂಘಟನೆಗೆ ಮಹತ್ವ ಹಿಂದುತ್ವದ ವಿಚಾರ, ಸರ್ಕಾರದ ವಿಫಲತೆಗಳನ್ನು ಜನರಿಗೆ ತಲುಪಿಸುವುದು, ಸುಳ್ಳು ವ್ಯಾಖ್ಯಾನಗಳಿಗೆ ಸರಿಯಾದ ಪ್ರತಿದಾಳಿ ರೂಪಿಸುವುದು, ಜಾತಿ–ಜಾತಿ ಲೆಕ್ಕಗಳ ಪ್ರತಿಯಾಗಿ ಹಿಂದೂ ಎಂದು ಒಗ್ಗೂಡಿಸುವ, ರಾಷ್ಟ್ರವಾದದ ವಿಚಾರವಾಗಿ ಒಗ್ಗಟ್ಟು ಎಷ್ಟು ಮುಖ್ಯವೆಂದು ತಿಳಿಸುವ ಕಾರ್ಯಗಳು ಇಂದಿನಿಂದಲೇ ಶುರುವಾಗಬೇಕು. ಯಾವುದೇ ವಿಶ್ರಾಂತಿ ಇಲ್ಲದೆ ಪ್ರತಿದಿನವೂ ಈ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು ನಡೆಯಬೇಕು. 3 ವರ್ಷದಲ್ಲಿ ಹಿಂದೂಗಳು ಒಗ್ಗೂಡಿ ಯಾವುದೇ ಆಮಿಷಗಳಿಗೆ ಕಿವಿಕೊಡದೆ ರಾಷ್ಟ್ರ ಪರವಾದ ಹಿಂದೂ ಪರವಾದ ಜನಪ್ರತಿನಿಧಿಗಳು ಹಾಗೂ ಸರ್ಕಾರ ಆಯ್ಕೆ ಮಾಡುವಂತಾಗಬೇಕು.

–ಸಂಜಯ್ ಪಿ.ಮೂರ್ತಿ

ಟೊಮೆಟೊ ವೈನ್: ಬೆಲೆ ನಿಯಂತ್ರಣ ಸಾಧ್ಯವೇ?

ಮಾನ್ಯರೆ

ಚಿಲ್ಲರೆ ಮಾರುಕಟ್ಟೆಯ ದರ ಏರಿಳಿತದಿಂದ ಟೊಮೆಟೊ ಬೆಳೆಗಾರರು ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ ಟೊಮೆಟೊದಿಂದ ವೈನ್ ತಯಾರಿಕೆ ಸೇರಿ ಹೆಚ್ಚಿನ ಮೌಲ್ಯವರ್ಧನೆ ಮೂಲಕ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಕೇಂದ್ರ ಗ್ರಾಹಕ ವ್ಯವಹಾರ ಸಚಿವಾಲಯ ತಿಳಿಸಿದೆ ಎಂದು ವರದಿಯಾಗಿದೆ. ಇತ್ತೀಚಿಗೆ ಟೊಮೆಟೊ ಬೆಲೆ ನೂರರ ಗಡಿ ತಲುಪಿತ್ತು. ಆದರೆ ಹಲವು ವೇಳೆ ರೈತರು ಬೆಳೆದ ಟೊಮೆಟೊಗೆ ಬೆಲೆ ಸಿಗದೆ ರಸ್ತೆಯಲ್ಲಿ ಸುರಿದು, ರೋಲರ್ ಹತ್ತಿಸಿ ಆಕ್ರೋಶ ವ್ಯಕಪಡಿಸುವುದೂ ಆಗಾಗ ವರದಿಯಾಗುತ್ತಿರುತ್ತದೆ. ಸಾಸ್, ಕೆಚಪ್‌ಗಳ ತಯಾರಿಕೆಗೆ ಬಳಕೆಯಾಗುತ್ತಿದ್ದ ಟೊಮೆಟೊ ಈಗ ವೈನ್ ತಯಾರಿಕೆಯತ್ತ ದಾಪುಗಾಲು ಹಾಕುತ್ತಿರುವುದು ರೈತರಿಗೆ ಶುಭ ಸುದ್ದಿಯೇ. ಆದರೆ ಬೆಳೆ ನಾಶವಾಗಿ ಟೊಮೆಟೊ ತುಟ್ಟಿಯಾದಾಗ ಗ್ರಾಹಕರು ವೈನ್‌ಗೆ ಶಾಪ ಹಾಕುವಂತಾದರೆ ಕಷ್ಟ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.


ಹಿರಿಯ ನಾಗರಿಕರಿಗೆ ಉತ್ತಮ ಕಾರ್ಯಕ್ರಮ

ಮಾನ್ಯರೆ,

ಕಳೆದ ಭಾನುವಾರ ಸಂಜೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ದಿ.ಮೈಕ್ ಚಂದ್ರು ನೆನಪಿಗಾಗಿ ಭೂಮಿಕ ಅಸೋಸಿಯೇಟ್ಸ್‌ನವರು ಆಯೋಜಿಸಿದ್ದ ಸಂಗೀತ ಸಂಜೆ ಒಂದು ಅದ್ಭುತ ರಸಸಂಜೆ ಕಾರ್ಯಕ್ರಮವೆಂದೇ ಹೇಳಬೇಕು. 60–70ರ ದಶಕದ ಹಿಂದಿನ ಬಯಲು ದಾರಿ, ಗೌರಿ, ಸೀತಾ, ಪರೋಪಕಾರಿ, ಗಂಧದ ಗುಡಿ, ದೂರದ ಬೆಟ್ಟ, ನಾಗರಹಾವು, ಬಂಗಾರದ ಮನುಷ್ಯ, ಮಿಸ್.ಲೀಲಾವತಿ, ಭಲೇ ಹುಚ್ಚ – ಚಲನ ಚಿತ್ರಗಳ ಜನಪ್ರಿಯ ಹಾಡುಗಳನ್ನು, ಹಂಸಿನಿ, ರೇವತಿ, ಗೌರಿ, ನಿತೀನ್ ರಾಜಾರಾಂ ಶಾಸ್ತ್ರಿ ಮತ್ತು ಶ್ರೀಕಾಂತ್ ಅವರ ಸುಮಧುರ ಕಂಠದಿಂದ ಮೂಡಿಬಂದ ಸುಮಧುರ ಗೀತೆಗಳು ಮೂಲ ಗಾಯಕರನ್ನೇ ನೆನಪಿಸುವಂತಿತ್ತು, ಇವರ ಕಂಠಸಿರಿಗೆ ಪ್ರೇಕ್ಷಕರು ತಲೆದೂಗಿದರು.

ಶತಮಾನೋತ್ಸವ ಭವನದ ಬಾಲ್ಕನಿಯ ಪ್ರೇಕ್ಷಕರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಹಿರಿಯ ನಾಗರಿಕರೇ ಇದ್ದುದು ವಿಶೇಷ ಎನಿಸಿತು. ಯಾವುದೇ ಕಾರ್ಯಕ್ರಮ ಮಾಡಿದರೂ, ಪ್ರೇಕ್ಷಕರೇ ಬರುವುದಿಲ್ಲ ಎನ್ನುವ ಆಯೋಜಕರಿಗೆ, ಒಳ್ಳೆಯ ಕಾರ್ಯಕ್ರಮ ಮಾಡಿದರೆ ಜನ ತಾವಾಗಿಯೇ ಬರುತ್ತಾರೆ ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ ಎನ್ನಬಹುದು. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯಲಿ, ಹಿರಿಯ ನಾಗರಿಕರಿಗೂ ಮನರಂಜನೆ ಸಿಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸಿದ್ದರಾಮಯ್ಯನವರ ಶಿಕ್ಷಣ ಕುರಿತ ಭಾಷಣವನ್ನು ನೀವು ಕೇಳಿದ್ದೀರಾ?

ಕಳೆದ ಶುಕ್ರವಾರ, ನವೆಂಬರ್ 22ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನವ್ಮು ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್ ಅವರು ಮೈಸೂರಲ್ಲಿ ನೂತನವಾಗಿ ಆರಂಭಿಸಿರುವ 'ಕ್ವೆಸ್ಟ್' (QUEST) ಅಕಾಡೆಮಿ ವಿದ್ಯಾ ಸಂಸ್ಥೆಯನ್ನು ಉದ್ಘಾಟಿಸಿದರು. ಇದೇ ವೇಳೆ ಸುದೀರ್ಘ ಭಾಷಣವನ್ನು ಸಹ ಮಾಡಿದರು. ವಾಟ್ಸಾಪ್ ಗ್ರೂಪ್‌ವೊಂದರಲ್ಲಿ ಬಂದಿದ್ದ ಅವರ ಭಾಷಣವನ್ನು ನಾನೂ ಕೇಳಿದೆ. ಇದೊಂದು ಸರಳ, ಸಹಜ ರೀತಿಯ, ಈ ಕಾಲಘಟ್ಟಕ್ಕೆ ಅನುಗುಣವಾದ ಒಂದು ರೀತಿಯಲ್ಲಿ ಮಾರ್ಗದರ್ಶಿ ಮಾತುಗಳು ಅನ್ನಿಸಿತು.

ಅವರು, ನಮ್ಮ ಸಮಾಜ ಹಾಗೂ ರಾಜಕಾರಣದ ಇಂದಿನ ನೈಜ ಚಿತ್ರಣವನ್ನು ತಮ್ಮ ಸುದೀರ್ಘ ರಾಜಕೀಯ ಅನುಭವ ಆಧರಿಸಿ ಒಂದು ರೀತಿ ಜನರೊಂದಿಗಿನ ಸಂವಾದದ ರೀತಿ ಅನಾವರಣಗೊಳಿಸಿದ್ದಾರೆ.

ಜಾತಿ, ಮೌಢ್ಯ, ಕಂದಾಚಾರ, ತಮ್ಮದೆ ಸಿದ್ಧಾಂತ, ಹಣೇಬರಹ, ಜನ್ಮ, ಪುನರ್ಜನ್ಮ ಮೊದಲಾಗಿ, ಅದರಲ್ಲೂ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಸುದೀರ್ಘವಾಗಿ ವಿವರಿಸುತ್ತಾ ಹೋಗುತ್ತಾರೆ. ಅವರು ಹೇಳಿದ್ದರಲ್ಲಿ ಒಂದು ವಿಷಯದಲ್ಲಿ ನನ್ನ ಸಂಪೂರ್ಣ ನಂಬಿಕೆ ಹಾಗೂ ಸಹಮತವಿದೆ. ಅದೇನೆಂದರೆ, **'ಹಿಂದಿನ ಜನ್ಮವು ಇಲ್ಲ. ಮುಂದಿನ ಜನ್ಮವೂ ಇಲ್ಲ. ಈ ಜನ್ಮದಲ್ಲಿ ಏನಾಗಿದ್ದೇವೆಯೋ ಎಂಬುದಷ್ಟೆ ಮುಖ್ಯ'**. ನನ್ನ ವೈಯಕ್ತಿಕ ಅಭಿಪ್ರಾಯ, ನಂಬಿಕೆಯೂ ಇದೇ ಆಗಿದೆ. ಗಿಡ–ಮರಗಳ ಹಾಗೆ, ಪ್ರಾಣಿ–ಪಕ್ಷಿಗಳ ಹಾಗೆ, ಕೆಲ ಸಮಯ ಇಲ್ಲಿ ಇದ್ದು ಹೋಗುವವರು ನಾವೆಲ್ಲಾ. ದುರಂತವೆಂದರೆ ಹೀಗೆ ಇದ್ದು ಹೋಗಲು ಬಂದ ನಾವು, ನಾನಾ ಗೊಂದಲಗಳನ್ನು ಸೃಷ್ಟಿಸುತ್ತಿರುವುದು. ಸುಖಮಯ, ಸಂತೋಷಮಯ, ಸುಂದರ ಮಯವಾಗಿರಬೇಕಿದ್ದ ನಮ್ಮ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ಸಿದ್ದರಾಮಯ್ಯನವರಿಗೆ ಹೆಚ್ಚಿಗೆ ಅರಿವಿದೆ ಎಂಬುದು ಅವರ ಭಾಷಣದಿಂದ ಮನದಟ್ಟಾಗುತ್ತದೆ. ಹೇಳಿ–ಕೇಳಿ ಸಿದ್ದರಾಮಯ್ಯನವರು ಒಬ್ಬ ಅನುಭವಿ ರಾಜಕಾರಣಿ ಅಲ್ಲವೆ?. ಆದರೆ ವಿಪರ್ಯಾಸವೆಂದರೆ ಮುಖ್ಯಮಂತ್ರಿಯಾಗಿ ಅವರೇ ಅನೇಕ ಗೊಂದಲಗಳನ್ನು ಸೃಷ್ಟಿಸಿದ್ದಾರೆ.

ಅದೇನೇ ಇರಲಿ ಈಗಾಗಲೇ ಪತ್ರಿಕೆಗಳಲ್ಲಿ ಅವರ ಭಾಷಣದ ಆಯ್ದ, ಅಪೂರ್ಣ ಭಾಗ ವರದಿಯಾಗಿರಬಹುದು. ಆದರೆ, ನನಗೆ ದೊರೆತ ಭಾಷಣದ ಧ್ವನಿಸರಣಿಯಂತೆ ಪೂರ್ಣ ಭಾಷಣವನ್ನು ಇಲ್ಲಿ ಯಥಾವತ್ತಾಗಿ ಪ್ರಕಟಿಸುತ್ತಿದ್ದೇನೆ:



ಮುಖ್ಯಮಂತ್ರಿ ಸಿದ್ದರಾಮಯ್ಯ

ಗ್ರಾಮೀಣ ಪ್ರದೇಶದ ಬಡವರು, ಹಿಂದುಳಿದವರ ಮಕ್ಕಳು ಅಕ್ಷರ ಸಂಸ್ಕೃತಿಯಿಂದ ವಂಚಿತರಾದವರು ಸೇರಿದಂತೆ ದೇಶದ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗಬೇಕು. ಶಿಕ್ಷಣದಲ್ಲಿ ವೈಚಾರಿಕತೆ, ವೈಜ್ಞಾನಿಕತೆ ಇಲ್ಲದಿದ್ದರೆ ನಾವು ಮನುಷ್ಯರಾಗಿ ರೂಪುಗೊಳ್ಳಲು ಸಾಧ್ಯವಿಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕು. ಬಾಬಾ ಸಾಹೇಬ್ ಅಂಬೇಡ್ಕರ್, ವಿವೇಕಾನಂದರು ಶಿಕ್ಷಣ ಬಹಳ ಮುಖ್ಯ ಎಂದು ಹೇಳಿದ್ದಾರೆ. ನಮ್ಮ ವ್ಯಕ್ತಿತ್ವ, ನಮ್ಮ ಸುತ್ತಮುತ್ತಲಿನ ಪ್ರತಿಭೆಗಳು ವಿಕಸಿತವಾಗಬೇಕಾದರೆ ಶಿಕ್ಷಣ ಬೇಕೇ ಬೇಕಾಗುತ್ತದೆ ಎಂಬುದು ಅವರ ಸ್ಪಷ್ಟ ಅಭಿಪ್ರಾಯ.

ವಿದ್ಯೆ ಇದ್ದಾಗ ಮಾತ್ರ ಸ್ವಾಭಿಮಾನಿ ಮನುಷ್ಯರಾಗಿ ಬದುಕಲು ಸಾಧ್ಯ. ಬಹಳ ಜನ, ವಿದ್ಯಾವಂತರು, ಡಾಕ್ಟರ್‌ಗಳು, ಇಂಜಿನಿಯರ್‌ಗಳು ಆಗಿದ್ದರೂ ಮಾನವೀಯತೆ ಬೆಳೆಸಿಕೊಂಡಿಲ್ಲ. ಕಾರಣ, ಅವರಿಗೆ ಸಮಾಜಕ್ಕೆ ಸ್ಪಂದಿಸುವಂತಹ ಶಿಕ್ಷಣ ಸಿಕ್ಕಿರಲಿಕ್ಕಿಲ್ಲ.

ನಮ್ಮಲ್ಲಿ ಅಸಮಾನತೆಯಿಂದ, ಜಾತಿ ವ್ಯವಸ್ಥೆಯಿಂದ ಕೂಡಿರುವ, ಬಡವರು–ಬಲ್ಲಿದರು ಎಂಬ ಸಮಾಜವಿದೆ. ಇಂತಹ ಸಮಾಜಕ್ಕೆ ಸ್ಪಂದಿಸುವ ವಿದ್ಯೆ ಇರಬೇಕು. ಸಮಬಾಳು–ಸಮಪಾಲು ಎಂಬಂತೆ ದೇಶದ ಸಂಪತ್ತು ಎಲ್ಲರಿಗೂ ಹಂಚಿಕೆ ಆಗಬೇಕು. ಸ್ವಾತಂತ್ರ್ಯ ಬಂದಿರುವುದು ಕೆಲವೇ ಮಂದಿ ಅನುಭವಿಸುವುದಕ್ಕಾ? ಕೆಲವೇ ಮಂದಿ ಮಜಾ ಮಾಡಲಿಕ್ಕಾ? ಶಿಕ್ಷಣ ಕೆಲವರಿಗೆ ಮಾತ್ರವೇ? ಕೆಲವರೇ ಅದರ ಲಾಭ ಪಡೆಯಬೇಕೇ? ಇದು ಆಗಬಾರದು. ಕೆಳ ಸಮುದಾಯದವರೂ ಮುಖ್ಯವಾಹಿನಿಗೆ ಬರಬೇಕು. ಹಾಗೆ ಬರಬೇಕಾದರೆ ಅಸಮಾನತೆ ಹೋಗಬೇಕು. ಅಂಬೇಡ್ಕರ್ ಇದನ್ನೇ ಹೇಳಿದ್ದು. ಸ್ವಾತಂತ್ರ್ಯ ಯಶಸ್ವಿಯಾಗಬೇಕಾದರೆ ಅಸಮಾನತೆಯಿಂದ ತೊಂದರೆ ಆದವರಿಗೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಸಿಗಬೇಕು. ಆಗ ಮಾತ್ರ ಅವರು ಮುಖ್ಯವಾಹಿನಿಗೆ ಬರಲು ಸಾಧ್ಯ ಎನ್ನುತ್ತಾರೆ.

'ಇವನಾರವಾ... ಇವನಾರವಾ... ಎಂದು ಎಣಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ ಎಂದು ಎಣಿಸಯ್ಯ' ಎಂದು ಬಸವಣ್ಣನವರು 850 ವರ್ಷಗಳ ಹಿಂದೆಯೇ ಹೇಳಿದ್ದಾರೆ. ಇಷ್ಟಾದರೂ ನಮ್ಮವ... ನಮ್ಮವ... ಎಂಬ ಭಾವನೆ ಬಂದೇ... ಇಲ್ಲವಲ್ಲ. ಈಗ ನಮ್ಮಲ್ಲಿ ಶೇ.76ರಷ್ಟು ಜನರಿಗೆ ಶಿಕ್ಷಣ ಸಿಕ್ಕಿದೆ. ಇನ್ನೂ ಶೇ.24ರಷ್ಟು ಜನರಿಗೆ ಶಿಕ್ಷಣ ಸಿಕ್ಕಿಲ್ಲ. ವಿದ್ಯಾವಂತರು ಬಸವಣ್ಣನವರ ಈ ವಚನ ಹೇಳಿಬಿಟ್ಟು ಆಮೇಲೆ ನೀನು ಯಾವ ಜಾತಿಗೆ ಸೇರಿದವನು ಎಂದು ಕೇಳುವುದು ಶಿಕ್ಷಣವೇ...? ಇಂತಹ ಶಿಕ್ಷಣ ಬೇಕಾ...? ಎಂದು ಸಿದ್ದರಾಮಯ್ಯನವರು ಪ್ರಶ್ನಿಸುತ್ತಾರೆ.

ಬಹಳ ಡಾಕ್ಟರ್‌ಗಳು, ಇಂಜಿನಿಯರ್‌ಗಳು ಮೌಢ್ಯ ಬಿಡುವುದೇ ಇಲ್ಲ. ಇದು ಬಿಡದೇ ಹೋದರೆ ಅದೆಂತಹ ಶಿಕ್ಷಣ. ಮನುಷ್ಯ ಮನುಷ್ಯನನ್ನು ಪ್ರೀತಿಸುವ ಶಿಕ್ಷಣ ಬೇಕೇ ಹೊರತು, ದ್ವೇಷಿಸುವ ಶಿಕ್ಷಣ ಅಲ್ಲ. ಜಾತಿ ಆಧಾರದ ಮೇಲೆ ಆರ್ಥಿಕ ಶ್ರೀಮಂತಿಕೆಯ ಆಧಾರದಲ್ಲಿ ಪ್ರೀತಿಸುವುದಲ್ಲ. ಮನುಷ್ಯ ಮನುಷ್ಯನನ್ನು ಪ್ರೀತಿಸುವಂತಹ ಶಿಕ್ಷಣ ಬೇಕು ಎಂಬುದು ಅವರ ಬಲವಾದ ಪ್ರತಿಪಾದನೆ.

ಬಸವಣ್ಣನವರ ಕಾಲದಲ್ಲಿ ಮಹಿಳೆಯರಿಗೆ ಸಮಾನತೆ ಇರಲಿಲ್ಲ. ಶೂದ್ರರಂತೆ ಮಹಿಳೆಯರು ಕೂಡ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು. ನೂರಾರು ವರ್ಷ ಶೂದ್ರರು ಅಕ್ಷರ ಸಂಸ್ಕೃತಿಯಿಂದ ದೂರವಿದ್ದರು. ಏಕೆಂದರೆ ಆಗ ಶೂದ್ರರು ವಿದ್ಯೆ ಕಲಿಯುವಂತಿರಲಿಲ್ಲ, ಸಂಸ್ಕೃತ ಕಲಿಯುವಂತಿರಲಿಲ್ಲ. ಆ ಪದ್ಧತಿ ಬಹಳ ವರ್ಷವಿತ್ತು. **ಸ್ವಾತಂತ್ರ್ಯ ಬಂದ ಮೇಲೆ ಎಲ್ಲರೂ ವಿದ್ಯೆ ಕಲಿಯುವಂತಾಯಿತು. ವಿದ್ಯೆ**

> 'ಇವನಾರವಾ, ಇವನಾರವಾ ಎಂದು ಎಣಿಸದಿರಯ್ಯಾ, ಇವ ನಮ್ಮವ, ಇವ ನಮ್ಮವ ಎಂದು ಎಣಿಸಯ್ಯ' ಎಂದು ಬಸವಣ್ಣನವರು 850 ವರ್ಷಗಳ ಹಿಂದೆಯೇ ಹೇಳಿದ್ದಾರೆ. ಇಷ್ಟಾದರೂ ನಮ್ಮವ... ನಮ್ಮವ... ಎಂಬ ಭಾವನೆ ಬಂದೇ ಇಲ್ಲವಲ್ಲ. ಈಗ ನಮ್ಮಲ್ಲಿ ಶೇ.76ರಷ್ಟು ಜನರಿಗೆ ಶಿಕ್ಷಣ ಸಿಕ್ಕಿದೆ. ಇನ್ನೂ ಶೇ.24ರಷ್ಟು ಜನರಿಗೆ ಶಿಕ್ಷಣ ಸಿಕ್ಕಿಲ್ಲ. ವಿದ್ಯಾವಂತರು ಬಸವಣ್ಣನವರ ಈ ವಚನ ಹೇಳಿಬಿಟ್ಟು ಆಮೇಲೆ ನೀನು ಯಾವ ಜಾತಿಗೆ ಸೇರಿದವನು ಎಂದು ಕೇಳುವುದು ಶಿಕ್ಷಣವೇ...? ಇಂತಹ ಶಿಕ್ಷಣ ಬೇಕಾ...?

ಮೂಲಭೂತ ಹಕ್ಕೂ ಆಯಿತು. ಆದರೆ, ವೈಚಾರಿಕತೆ, ವೈಜ್ಞಾನಿಕತೆ ಇರುವ ವಿದ್ಯೆ ಕಲಿಯಬೇಕು. ಯಾರನ್ನಾದರೂ ಯಾಕಪ್ಪಾ ಹೀಗಿದ್ದೀಯಾ, ಏಕೆ ವಿದ್ಯೆ ಕಲಿಯಲಿಲ್ಲ ಎಂದು ಕೇಳಿದರೆ 'ಇದು ನಮ್ಮ ಹಣೇಬರಹ ಸ್ವಾಮಿ' ಎಂದು ಹೇಳುತ್ತಾರೆ. ಇದನ್ನು ಯಾರು ಹೇಳಿಕೊಟ್ಟರು. ದೇವರು ಹಣೆಯಲ್ಲಿ ಬರೆದಿದ್ದಾನಾ?

ಕರ್ಮ ಸಿದ್ಧಾಂತ ಬಿಡಬೇಕು ಎಂದು ಬಸವಣ್ಣ ಹೇಳಿದ್ದಾರೆ. ಅಂದರೆ, ಹಿಂದಿನ ಜನ್ಮದಲ್ಲಿ ಕರ್ಮ ಮಾಡಿ ಬಿಟ್ಟೆ ಅದಕ್ಕೆ ಈ ಜನ್ಮದಲ್ಲಿ ಹೀಗೆ ಹುಟ್ಟಿಬಿಟ್ಟೆ ಎನ್ನುವರು. ಯಾರಿಗಾದರೂ ಗೊತ್ತಿತ್ತಾ ಹಿಂದಿನ ಜನ್ಮದಲ್ಲಿ ಏನಾಗಿದ್ದೆವು ಎಂದು? ಹಿಂದಿನ ಜನ್ಮವೂ ಇಲ್ಲ, ಮುಂದಿನ ಜನ್ಮವೂ ಇಲ್ಲ. ಈ ಜನ್ಮದಲ್ಲಿ ಮನುಷ್ಯನಾಗಿರುವುದೇ ಮುಖ್ಯ. **ನನಗೆ ನಾಲ್ಕು ಜನ ಅಣ್ಣ–ತಮ್ಮಂದಿರು. ಮೂರು ಜನ ಹೊಲ ಉಳುತ್ತಾರೆ. ನಾನು ಮಾತ್ರ ಮುಖ್ಯಮಂತ್ರಿಯಾಗಿಬಿಟ್ಟೆ ನಾವು ಒಂದೇ ತಾಯಿ ಮಕ್ಕಳು. ನನ್ನ ಹಣೇಲಿ ಮುಖ್ಯಮಂತ್ರಿ ಆಗು ಎಂದು, ಅವರ ಹಣೇಲಿ ಹೊಲ ಉಳು ಎಂದು ದೇವರು ಬರೆದು ಬಿಟ್ನಾ?** ಅದಕ್ಕೇ ವೈಚಾರಿಕತೆ, ವೈಜ್ಞಾನಿಕತೆ ಶಿಕ್ಷಣ ಇರಬೇಕು.

ಕರ್ಮ ಎನ್ನುವುದನ್ನೆಲ್ಲಾ ನಮಗೆ ಚಿಕ್ಕ ವಯಸ್ಸಿನಲ್ಲಿ ಮನೆಯಲ್ಲಿ ಹೇಳಿಕೊಡುತ್ತಿದ್ದರು. ನಾವು ಪ್ರೈಮರಿ ಮತ್ತು ಹೈಸ್ಕೂಲ್‌ನಲ್ಲಿ ಕಲಿತದ್ದು, ಶಿಕ್ಷಕರು ಹೇಳಿಕೊಟ್ಟದ್ದು ತಲೆಯಲ್ಲಿ ಉಳಿಯುತ್ತದೆ. ಕಾಲೇಜಿನಲ್ಲಿ ಓದಿದ್ದು ತಲೆಯಲ್ಲಿ ಉಳಿಯುವುದಿಲ್ಲ. ಆದ್ದರಿಂದ ಶಾಲೆಯಲ್ಲಿ ಶಿಕ್ಷಕರು, ಮನೆಯಲ್ಲಿ ಪೋಷಕರು ಮಕ್ಕಳಿಗೆ ಕರ್ಮ–ಕಂದಾಚಾರ ಹೇಳಿ ಕೊಡಬಾರದು. ವೈಚಾರಿಕತೆ ಮತ್ತು ವೈಜ್ಞಾನಿಕತೆ ಹೇಳಿಕೊಡಬೇಕು. ಕರ್ಮ–ಕಂದಾಚಾರ ಹೇಳಿಕೊಟ್ಟರೆ ಮಕ್ಕಳು ಮನುಷ್ಯರಾಗುವುದೇ ಇಲ್ಲ.

ನಾವು ರಾಜಕೀಯದಲ್ಲಿರುವುದರಿಂದ ಎಷ್ಟು ಜನ ವಿದ್ಯಾವಂತರು ಜಾತಿ ಮಾಡುತ್ತಾರೆ ಎಂದು ಗೊತ್ತಾಯಿತು. ಇವನು ನಮ್ಮವನಲ್ಲ **ವೋಟ್ ಹಾಕಲ್ಲ, ಇವನು ನಮ್ಮವನು ವೋಟ್ ಹಾಕೋಣ** ಎನ್ನುತ್ತಾರೆ. ಅವನು ಜನಪರವಾಗಿದ್ದಾನಾ? ಅವನಿಗೆ ರಾಜಕಾರಣ ಗೊತ್ತಿದೆಯಾ? ಏನನ್ನೂ ನೋಡುವುದಿಲ್ಲ. ಅವನು ನಮ್ಮವನು ವೋಟ್ ಹಾಕೋಣ ಎನ್ನುತ್ತಾರೆ.

ನಮ್ಮಲ್ಲಿ ಒಬ್ಬ ಎಂಎಲ್‌ಎ ಇದ್ದ. ಅವನಿಗೆ ಎಷ್ಟು ಮೂಢನಂಬಿಕೆ ಎಂದರೆ, ಸಿದ್ದರಾಮಯ್ಯನವರೇ ನಾನು ರಾತ್ರಿ ಹೊತ್ತು ಕೈಮುಗಿದೇ ಮಲಗಿಕೊಳ್ಳುತ್ತೀನಿ ಅಂತಿದ್ದ. ಯಾಕಪ್ಪಾ ಅಂದರೆ, ಕೈಮುಗಿದು ಮುಗಿದು ಅಭ್ಯಾಸ ಆಗಿಬಿಟ್ಟಿದೆ ಎನ್ನುತ್ತಿದ್ದ. ಇಂತಹವರು ರಾಜಕಾರಣಕ್ಕೆ ಬರಲು ಶುರುವಾಗಿದ್ದಾರೆ. **ಅದಕ್ಕೆ ನಮ್ಮ ಶಿಕ್ಷಣ ಜನಪರ, ಸಮಾಜದ ಪರ, ಜೊತೆಗೆ ಸಮಾಜಕ್ಕೆ ಸ್ಪಂದಿಸುವಂತಿರಬೇಕು. ಸಮಾಜದ ಏರುಪೇರುಗಳನ್ನು ಸರಿಪಡಿಸುವಂತಿರಬೇಕು.** ಅಂತಹ ವಿದ್ಯೆ ಇರಬೇಕೇ ಹೊರತು ಜಾತಿ ಮಾಡುವಂತಹ, ಮೌಢ್ಯ ಬಿತ್ತುವಂತಹ, ಕರ್ಮ ಸಿದ್ಧಾಂತ ಪೋಷಿಸುವಂತಹ ವಿದ್ಯೆ ಇರಬಾರದು.

ಫುಡ್ ಸೆಕ್ಯೂರಿಟಿ ಕಾಯ್ದೆ ತಂದದ್ದು ಬಿಜೆಪಿ ಅಲ್ಲ, ಮನಮೋಹನ್‌ಸಿಂಗ್ ಅವರು ತಂದದ್ದು. **ಆಗ ಬಿಜೆಪಿ ನಾಯಕ ಮುರುಳಿ ಮನೋಹರ್ ಜೋಷಿಯವರು ರಾಜ್ಯಸಭೆಯಲ್ಲಿ ಅದನ್ನು ವಿರೋಧಿಸಿದರು. 'ದಿಸ್ ಇಸ್ ನಾಟ್ ಫುಡ್ ಸೆಕ್ಯೂರಿಟಿ ಆಕ್ಟ್, ದಿಸ್ ಇಸ್ ವೋಟ್ ಸೆಕ್ಯೂರಿಟಿ ಆಕ್ಟ್'** ಎಂದು ದೂರಿದ್ದರು.

ನಮ್ಮಲ್ಲಿ ಎಂತಹ ಪರಿಸ್ಥಿತಿ ಇದೆ ಎಂದರೆ ಇದೆಲ್ಲವನ್ನೂ ತಿಳಿದುಕೊಳ್ಳುವುದೇ ಇಲ್ಲ. **ಅದಕ್ಕೇ ಅಂಬೇಡ್ಕರ್ ಹೇಳಿದ್ದು ಇತಿಹಾಸ ತಿಳಿಯದವನು, ಇತಿಹಾಸ ನಿರ್ಮಿಸಲಾರ ಎಂದು.** ನಾವು ಇತಿಹಾಸ ತಿಳಿದುಕೊಳ್ಳಬೇಕು. ಹಿಂದೆ ಏನಾಗಿದ್ದೆವು, ಈಗ ಏನಾಗಿದ್ದೇವೆ, ಮುಂದೆ ಏನಾಗಬೇಕು ಎಂಬುದನ್ನು ಅರ್ಥ ಮಾಡಿಕೊಂಡರೆ ಶಿಕ್ಷಣ ಪಡೆದದ್ದಕ್ಕೆ ಸಾರ್ಥಕವಾಗುತ್ತದೆ.

ರಾಜಕಾರಣಿಯಾಗಿ ಸಿದ್ದರಾಮಯ್ಯನವರನ್ನು ಒಂದು ಕಡೆ ಇಡೋಣ. ಈ ಭಾಷಣ ಕೇಳಿದ ಮೇಲೆ ಅವರು 'ಸಮಾಜ ಮುಖಿ' ಎಂದು ಹೇಳದೇ ಇರಲಾಗುತ್ತಾ ಹೇಳಿ?


email:
voice@starofmysore.com

* * *

ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿ: ಪರ್ತ್‌ನಲ್ಲಿ ಆಸೀಸ್ ವಿರುದ್ಧ ಗೆದ್ದ ಭಾರತ ಶುಭಾರಂಭ

ಪರ್ತ್, ನ.25– ನಾಯಕ ಜಸ್ಪ್ರೀತ್ ಬುಮ್ರಾ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ ಅವರ ಶತಕಗಳ ನೆರವಿನಿಂದ ಅತಿಥೇಯ ಆಸ್ಟ್ರೇಲಿಯಾ ವಿರುದ್ಧ ಭಾರತ 295 ರನ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ 5 ಪಂದ್ಯಗಳ ಬಾರ್ಡರ್–ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಭಾರತ 1–0 ಮುನ್ನಡೆ ಸಾಧಿಸಿದೆ. ಅಲ್ಲದೇ ಶೇ.61.11 ಅಂಕಗಳೊಂದಿಗೆ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿದೆ.

ಐಸಿಸಿ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಿಸಬೇಕಾದರೆ ಸರಣಿಯಲ್ಲಿ 4–0 ಅಂತರದಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆ ಎದುರಿಸುತ್ತಿರುವ ಭಾರತ ಮೊದಲ ಟೆಸ್ಟ್‌ನಲ್ಲಿ ಸರ್ವಾಂಗೀಣ ಪ್ರದರ್ಶನ ನೀಡುವ ಮೂಲಕ ಬಲಿಷ್ಠ ಆಸ್ಟ್ರೇಲಿಯಾವನ್ನು ದಿಗ್ಭಮೆಗೊಳಿಸಿದೆ.



534 ರನ್‌ಗಳ ಅಸಾಧಾರಣ ಗುರಿ ಬೆನ್ನಟಿದ ಆಸೀಸ್ 3ನೇ ದಿನದ ಅಂತ್ಯಕ್ಕೆ 12 ರನ್‌ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡಿತ್ತು. 522 ರನ್‌ಗಳ ಹಿನ್ನಡೆಯೊಂದಿಗೆ 4ನೇ ದಿನದ ಆಟ ಆರಂಭಿಸಿದ ಆಸ್ಟ್ರೇಲಿಯಾ ರಕ್ಷಣಾತ್ಮಕ ಆಟಕ್ಕೆ ಮೊರೆ ಹೋಯಿತು. ಆದರೆ ಆರಂಭಿಕ ಬ್ಯಾಟರ್ ಉಸ್ಮಾನ್ ಖವಾಜ ಅವರನ್ನು ಸಿರಾಜ್ ಆರಂಭ ದಲ್ಲೇ ಪೆವಿಲಿಯನ್ನಿಗಟ್ಟುವ ಮೂಲಕ ಮೊದಲ ಶಾಕ್ ನೀಡಿದರು. ಇನ್ನು ಸ್ಮಿತ್ ಕೇವಲ 17 ರನ್ ಗಳಿಸಿ ಸಿರಾಜ್‌ಗೆ ಮೂರನೇ ಬಲಿಯಾದರು. ಇನ್ನು ಮಧ್ಯಮ ಕ್ರಮಾಂಕದಲ್ಲಿ ಟ್ರಾವಿಸ್ ಹೆಡ್ 89, ಮಿಚೆಲ್ ಮಾರ್ಷ್ 47 ಹಾಗೂ ಅಲೆಕ್ಸ್ ಕ್ಯಾರಿ 36 ರನ್ ಗಳಿಸಿ ಕೊಂಚ ಪ್ರತಿ ರೋಧ ತೋರಿದರಾದರೂ ತಂಡವನ್ನು ಸೋಲಿನಿಂದ ಪಾರು ಮಾಡಲು ಸಾಧ್ಯವಾಗಲಿಲ್ಲ. ಅಂತಿಮವಾಗಿ ಆಸ್ಟ್ರೇಲಿಯಾ 238 ರನ್‌ಗಳಿಗೆ ಆಲೌಟ್ ಆಗಿ ಸೋಲು ಅನುಭವಿಸಿತು. ಭಾರತದ ಪರ ನಾಯಕನ ಆಟವಾಡಿದ ಜಸ್ಪ್ರೀತ್ ಬುಮ್ರಾ ಹಾಗೂ ಮೊಹಮ್ಮದ್ ಸಿರಾಜ್ ತಲಾ 3, ವಾಷಿಂಗ್‌ಟನ್ ಸುಂದರ್ 2 ಮತ್ತು ಹರ್ಷಿತ್ ರಾಣಾ, ನಿತೀಶ್ ರೆಡ್ಡಿ ತಲಾ ಒಂದೊಂದು ವಿಕೆಟ್ ಪಡೆದರು.

ಪರ್ತ್‌ನಲ್ಲಿ ಮೊದಲ ಸೋಲು: ಪರ್ತ್‌ನ ಐತಿಹಾಸಿಕ ಆಪ್ಟಸ್ ಮೈದಾನದಲ್ಲಿ ಆಸ್ಟ್ರೇಲಿಯಾವನ್ನು ಸೋಲಿಸಿದ ಮೊದಲ ಪ್ರವಾಸಿ ತಂಡ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಆಸ್ಟ್ರೇಲಿಯಾ ತಂಡ ಪರ್ತ್‌ಲ್ಲಿ ಪ್ರವಾಸಿ ತಂಡದೆದುರು ಒಂದೂ ಸೋಲು ಕಂಡಿರಲಿಲ್ಲ. ಇದೀಗ ಜಸ್‌ಪ್ರಿತ್ ಬುಮ್ರಾ ನೇತೃತ್ವದ ತಂಡ ಆಸ್ಟ್ರೇಲಿಯಾವನ್ನು ಭಾರಿ ಅಂತರದಿಂದ ಸೋಲಿಸುವಲ್ಲಿ ಯಶಸ್ವಿಯಾಗಿದೆ.

ಅತಿ ದೊಡ್ಡ ಅಂತರದ ಗೆಲುವು: ಭಾರತ ಪರ್ತ್ ಟೆಸ್ಟ್‌ನಲ್ಲಿ 295 ರನ್‌ಗಳ ಗೆಲುವು ದಾಖಲಿಸುವ ಮೂಲಕ ಟೆಸ್ಟ್ ಪಂದ್ಯವೊಂದರಲ್ಲಿ ಆಸ್ಟ್ರೇಲಿಯಾ ಎದುರು ಅವರದ್ದೇ ನೆಲದಲ್ಲಿ ಅತಿದೊಡ್ಡ ಅಂತರದ ಗೆಲುವು ದಾಖಲಿಸಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಿರಿಯ ಶಾಸಕ ಜಿ.ಟಿ.ದೇವೇಗೌಡರಿಗೆ ಪಕ್ಷಾತೀತವಾಗಿ ಶುಭಾಶಯ ಕೋರಿಕೆ


ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ಶಾಸಕ ಜಿ.ಟಿ.ದೇವೇಗೌಡರನ್ನು ಮಾಜಿ ಡಿಸಿಎಂ ಅಶ್ವಥ್ ನಾರಾಯಣ್, ಮಾಜಿ ಶಾಸಕ ಎಲ್.ನಾಗೇಂದ್ರ, ಪುನೀತ್, ಸದಾನಂದ ಇತರರು ಅಭಿನಂದಿಸಿ, ಶುಭಕೋರಿದರು.


ಮೈಸೂರಿನ ವಿಜಯನಗರದಲ್ಲಿರುವ ಶಾಸಕ ಜಿ.ಟಿ.ದೇವೇಗೌಡರ ನಿವಾಸದಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಶುಭ ಕೋರಿದರು.


ಶಾಸಕ ಜಿ.ಟಿ.ದೇವೇಗೌಡರಿಗೆ ಜೆಡಿಎಸ್ ಮುಖಂಡ ರಮೇಶ್, ಬಸಪ್ಪ, ಇತರರು ಹುಟ್ಟುಹಬ್ಬದ ಶುಭಾಶಯ ಕೋರಿದರು. ಚಿತ್ರದಲ್ಲಿ ಜಿಟಿಡಿ ಅವರ ಕುಟುಂಬವರ್ಗವಿದೆ


ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿರುವ ತಮ್ಮ ಕಚೇರಿ ಮುಂಭಾಗ ಸೋಮವಾರ ಶಾಸಕ ಜಿ.ಟಿ.ದೇವೇಗೌಡರು ವಿಶೇಷಚೇತನರಿಗೆ ಸಿಹಿ ನೀಡಿ, ತ್ರಿಚಕ್ರ ವಾಹನಗಳ ಕೀಲಿ ನೀಡುವ ಮೂಲಕ ಹಸ್ತಾಂತರಿಸಿದರು.


ಮಾಜಿ ಸಚಿವರು, ಶಾಸಕರಾದ ಜಿ.ಟಿ.ದೇವೇಗೌಡರ ಹುಟ್ಟುಹಬ್ಬಕ್ಕೆ ಬೋಗಾದಿ 2ನೇ ಹಂತದ ದುರ್ಗಾ ಗ್ರೂಪ್ ಗೆಳೆಯರ ಬಳಗದಿಂದ ಶುಭಾಶಯ ಕೋರಲಾಯಿತು. ಈ ವೇಳೆ ಜೆಡಿಎಸ್ ಮುಖಂಡರಾದ ಚಂದ್ರಶೇಖರ್, ಸುರೇಶ್, ಬೋಗಾದಿ ಆನಂದ್, ವಕೀಲ ಸಿದ್ದರಾಜು, ರವಿ, ಆನಂದ್ ರಾಜು, ಶಿವು, ಶಂಬೇಗೌಡ ಟೆಂಟ್ ರವಿ, ಮಂಜು, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರಾದ ಪಡುವಾರಹಳ್ಳಿ ಶಿವು ಇನ್ನಿತರರಿದ್ದರು.

ಮೈಸೂರು, ನ.25(ಜಿಎ)-ಮಾಜಿ ಸಚಿವ ಹಾಗೂ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಜಿ.ಟಿ. ದೇವೇಗೌಡ 75ನೇ ಹುಟ್ಟು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹುಟ್ಟುಹಬ್ಬದ ಅಂಗವಾಗಿ ನಂಜನಗೂಡಿನ ತಗಡೂರಿನಲ್ಲಿರುವ ಅಂಕನಾಥೇಶ್ವರ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿ ದೇವಿ ದರ್ಶನ ಪಡೆದುಕೊಂಡರು. ವಿಜಯನಗರದಲ್ಲಿರುವ ತಮ್ಮ ನಿವಾಸದಲ್ಲಿ ಅಭಿಮಾನಿಗಳು, ಕಾರ್ಯಕರ್ತರನ್ನು ಭೇಟಿ ಮಾಡಿದರು. ತದನಂತರ ದಡಕನಹಳ್ಳಿ ಆಯೋಜಿಸಿದ್ದ ವಿಶೇಷ ಹೋಮದಲ್ಲಿ ಪಾಲ್ಗೊಂಡರು.

ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಚಾಮುಂಡೇಶ್ವರಿ ಕ್ಷೇತ್ರದ 16 ಮಂದಿ ವಿಶೇಷ ಚೇತನರಿಗೆ ಮಂಜೂರಾಗಿದ್ದ ತ್ರಿಚಕ್ರ ವಾಹನವನ್ನು ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದ ಆವರಣದಲ್ಲಿರುವ ತಮ್ಮ ಕಚೇರಿ ಮುಂಭಾಗ ವಿಶೇಷಚೇತನರಿಗೆ ಸಿಹಿ ನೀಡಿ, ವಾಹನಗಳ ಕೀಲಿ ನೀಡುವ ಮೂಲಕ ಹಸ್ತಾಂತರಿಸಿದರು. ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿ ಶಂಕರಗೌಡ ಪಾಟೀಲ್, ಶ್ರೀಧರ್ ದೀಕ್ಷಿತ್ ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಅಂಗವಾಗಿ ಪಕ್ಷಾತೀತವಾಗಿ ರಾಜಕೀಯ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ವಿವಿಧ ಸಂಘ-ಸಂಸ್ಥೆ, ಹಾಗೂ ಉದ್ಯಮಿಗಳು ಕೇಕ್ ಕತ್ತರಿಸುವ ಮೂಲಕ ಶುಭ ಕೋರಿದರು. ಮಾಜಿ ಡಿಸಿಎಂ ಅಶ್ವಥ್ ನಾರಾಯಣ್, ಮಾಜಿ ಸಚಿವ ಸಿ.ಎಂ. ಇಬ್ರಾಹಿಂ, ಮಾಜಿ ಶಾಸಕ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಮಾಜಿ ಸದಸ್ಯ ಮಹದೇಶ್ ಮತ್ತಿತರರು ಅವರಿಗೆ ಶುಭಾಶಯ ಕೋರಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹುಟ್ಟುಹಬ್ಬದಂದು 16 ಮಂದಿ ವಿಶೇಷಚೇತನರಿಗೆ ತ್ರಿಚಕ್ರ ವಾಹನವನ್ನು ನೀಡುತ್ತಿರುವುದು ಮತ್ತಷ್ಟು ಸಂತಸ ಮೂಡಿಸಿದ್ದು, ಅವರು ತಮ್ಮ ಕಾಲಿನ ಮೇಲೆ ನಿಲ್ಲಲು ಇದು ಸಹಕಾರಿಯಾಗಲಿದೆ. ಇಂದಿನಿಂದ ಅವರು ಸಹ ಎಲ್ಲರಂತೆ ಕೆಲಸದಲ್ಲಿ ತೊಡಗಿಕೊಳ್ಳುತ್ತಾರೆ. ಎಲ್ಲರೂ ಎಚ್ಚರಿಕೆಯಿಂದ ವಾಹನ ಚಲಾಯಿಸಿ, ಸಂಚಾರಿ ನಿಯಮ ಪಾಲಿಸಿ ಎಂದು ಸಲಹೆ ನೀಡಿದರು.

ಈ ವರ್ಷ ಸರಳವಾಗಿ ನನ್ನ ಹುಟ್ಟುಹಬ್ಬವನ್ನು ಕಾರ್ಯಕರ್ತರು, ಅಭಿಮಾನಿಗಳು ಆಚರಿಸುತ್ತಿದ್ದಾರೆ. ಎಲ್ಲರಿಗೂ ಸುಖ, ಶಾಂತಿ, ಸಂತೋಷವನ್ನು ತಾಯಿ ಚಾಮುಂಡೇಶ್ವರಿ ನೀಡಲಿ ಎಂದರು. ಚುನಾವಣೆ ನಂತರ ಪಕ್ಷವಿರಲ್ಲ. ತಾವು ಸಹಕಾರ ಕ್ಷೇತ್ರದಲ್ಲಿ ಬೆಳೆದಿರುವುದರಿಂದ ಜನರು ಇಷ್ಟು ಪ್ರೀತಿ ನೀಡುತ್ತಿದ್ದಾರೆ. ಯಾವುದೇ ಪಕ್ಷದವರಿಗೆ ಏನೇ ಸಮಸ್ಯೆ ಆದರೂ ನಾನು ಪಕ್ಷವನ್ನು ಲೆಕ್ಕಿಸದೇ ಅವರ ಪರವಾಗಿ ಕೆಲಸ ಮಾಡುತ್ತೇನೆ. ಆದ್ದರಿಂದ ಪಕ್ಷಾತೀತವಾಗಿ ಎಲ್ಲರೂ ಶುಭ ಹಾರೈಸುತ್ತಿದ್ದಾರೆ ಎಂದು ಜಿ.ಟಿ.ದೇವೇಗೌಡರು ಸಂತಸಪಟ್ಟರು.


ಸೋಮವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಜಿ.ಟಿ. ದೇವೇಗೌಡರನ್ನು ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಜಿಟಿಡಿ ಅವರ ನಿವಾಸದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ತಾಲೂಕು ಜೆಡಿಎಸ್ ಎಸ್‌ಸಿ ಘಟಕದ ಅಧ್ಯಕ್ಷ ಅರಸೀಕೆರೆ ಸಿದ್ದರಾಜು, ತಾಪಂ ಮಾಜಿ ಸದಸ್ಯ ರೇವಣ್ಣ, ಗ್ರಾಪಂ ಮಾಜಿ ಉಪಾಧ್ಯಕ್ಷ ಉಮಾಪತಿ ಇತರರಿದ್ದರು.

ಸೌದಿ ಅರೇಬಿಯಾದ ಜೆದ್ದಾದಲ್ಲಿ ಐಪಿಎಲ್ ಮೆಗಾ ಹರಾಜು

ಕೋಟಿ ಕೋಟಿ ಹಣ ಸುರಿದು ಆಟಗಾರರ ಖರೀದಿ

ಅತೀ ಹೆಚ್ಚು 27 ಕೋಟಿಗೆ ಮಾರಾಟವಾದ ರಿಷಬ್ ಪಂತ್





ಮೈಸೂರು, ನ.25- ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್-2025ಕ್ಕೆ (ಐಪಿಎಲ್) ಈಗಾಗಲೇ ವೇದಿಕೆ ಸಿದ್ಧವಾಗಿದ್ದು, ಸೌದಿ ಅರೇಬಿಯಾದ ಜೆದ್ದಾದಲ್ಲಿ ನಡೆದ ಆಟಗಾರರ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಲೀಗ್‌ನ 10 ಫ್ರಾಂಚೈಸಿಗಳು ಕೋಟಿ ಕೋಟಿ ಹಣ ಸುರಿದು ಆಟಗಾರರನ್ನು ಖರೀದಿಸಿದ್ದಾರೆ. ಆ ಮೂಲಕ ಪ್ರತಿ ತಂಡಗಳು ಬಲಿಷ್ಠ ತಂಡಗಳನ್ನು ಕಟ್ಟಿವೆ. 2 ದಿನಗಳ ಕಾಲ ನಡೆದ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ 10 ತಂಡಗಳೂ ದೇಶಿ ಸೇರಿದಂತೆ ವಿದೇಶಿ ಆಟಗಾರರನ್ನು ಖರೀದಿಸಿದ್ದು, ರಿಷಬ್ ಪಂತ್ ಹಾಗೂ ಶ್ರೇಯಸ್ ಅಯ್ಯರ್ ಕ್ರಮವಾಗಿ ದಾಖಲೆಯ 27 ಕೋಟಿ ರೂ. ಹಾಗೂ 26.75 ಕೋಟಿ ರೂ. ಮೊತ್ತಕ್ಕೆ ಬಿಕರಿಯಾಗಿದ್ದಾರೆ. ಈ ಬಾರಿ ಹರಾಜಿನಲ್ಲಿ ಕನ್ನಡಿಗ ಕೆ.ಎಲ್.ರಾಹುಲ್ ಹಾಗೂ ವಿಲ್ ಜಾಕ್ಸ್ ಅವರನ್ನು ಆರ್‌ಸಿಬಿ ಬಿಡ್ ಮಾಡಲಿದ್ದಾರೆ ಎಂದು ಅಭಿಮಾನಿಗಳು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಆರ್‌ಸಿಬಿ ಫ್ರಾಂಚೈಸಿ ಅವರನ್ನು ಖರೀದಿಸದೇ ಅಭಿಮಾನಿಗಳ ಆಸೆಗೆ ತಣ್ಣೀರೆರಚಿದೆ. ಇದೀಗ ರಾಹುಲ್ 14 ಕೋಟಿಗೆ ಡೆಲ್ಲಿ ಪಾಲಾದರೇ, ಜಾಕ್ಸ್ 5.25 ಕೋಟಿಗೆ ಮುಂಬೈ ಸೇರ್ಪಡೆಗೊಂಡಿದ್ದಾರೆ. ಮೆಗಾ ಹರಾಜಿನ ಬಳಿಕ ತಂಡಗಳ ಬಲಾಬಲವೇ ಬದಲಾಗಿದ್ದು, ಈಗ ಯಾವ ತಂಡದಲ್ಲಿ ಯಾರಿದ್ದಾರೆ? ತಂಡಗಳ ಬಲಾಬಲ ಹೇಗಿದೆ? ಎಂಬುದರ ಸಂಪೂರ್ಣ ಪಟ್ಟಿ ಇಲ್ಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು

ವಿರಾಟ್ ಕೊಹ್ಲಿ 21 ಕೋಟಿ ರೂ., ರಜತ್ ಪಾಟಿದಾರ್ 11 ಕೋಟಿ ರೂ. ಯಶ್ ದಯಾಳ್ 5 ಕೋಟಿ ರೂ., ಫಿಲಿಪ್ ಸಾಲ್ಟ್ 11.5 ಕೋಟಿ ರೂ., ಜಿತೇಶ್ ಶರ್ಮಾ 11 ಕೋಟಿ ರೂ., ಸ್ವಪ್ನಿಲ್ ಸಿಂಗ್ 50 ಲಕ್ಷ ರೂ., ಜಾಕೋಬ್ ಬೇತೆಲ್ 2.6 ಕೋಟಿ ರೂ., ರೋಮಾರಿಯೋ ಶೆಫರ್ಡ್ 1.5 ಕೋಟಿ ರೂ., ಲಿಯಾಮ್ ಲಿವಿಂಗ್‌ಸ್ಟೋನ್ 8.75 ಕೋಟಿ ರೂ., ಕೃನಾಲ್ ಪಾಂಡ್ಯ 5.75 ಕೋಟಿ ರೂ., ಟಿಮ್ ಡೇವಿಡ್ 3 ಕೋಟಿ ರೂ., ಮನೋಜ್ ಭಾಂಡಗೆ 30 ಲಕ್ಷ ರೂ.,, ರಸಿಖ್ ಧರ್ ಸಲಾಂ 6 ಕೋಟಿ ರೂ., ಸುಯಶ್ ಶರ್ಮಾ 2.6 ಕೋಟಿ ರೂ., ನುವಾನ್ ತುಷಾರ 1.6 ಕೋಟಿ ರೂ., ಜೋಸ್ ಹ್ಯಾಜಲ್‌ವುಡ್ 12.5 ಕೋಟಿ ರೂ., ಭುವನೇಶ್ವರ್ ಕುಮಾರ್ 10.75 ಕೋಟಿ ರೂ., ದೇವದತ್ತ ಪಡಿಕ್ಕಲ್ 2 ಕೋಟಿ ರೂ., ಸ್ವಸ್ತಿಕ್ ಚಾಕರ್ 30 ಲಕ್ಷ ರೂ., ಲುಂಗಿ ಎನ್‌ಗಿಡಿ 1 ಕೋಟಿ ರೂ., ಮೋಹಿತ್ ರಾತಿ 30 ಲಕ್ಷ ರೂ., ಅಭಿನಂದನ್ ಸಿಂಗ್ 30 ಲಕ್ಷ ರೂ.

ಒಟ್ಟು 22 ಆಟಗಾರರು: ಭಾರತೀಯರು 14, ವಿದೇಶಿ ಆಟಗಾರರು 8

ಚೆನ್ನೈ ಸೂಪರ್ ಕಿಂಗ್ಸ್

ಋತುರಾಜ್ ಗಾಯಕ್ವಾಡ್ 18 ಕೋಟಿ ರೂ., ರವೀಂದ್ರ ಜಡೇಜಾ 18 ಕೋಟಿ ರೂ., ಮತೀಷ ಪತಿರಾಣಾ 13 ಕೋಟಿ ರೂ., ಶಿವಂ ದುಬೆ 12 ಕೋಟಿ ರೂ., ಎಂ.ಎಸ್.ಧೋನಿ 4 ಕೋಟಿ ರೂ., ಶೇಖ್ ರಶೀದ್ 30 ಲಕ್ಷ ರೂ., ರಾಹುಲ್ ತ್ರಿಪಾಠಿ 3.40 ಕೋಟಿ ರೂ., ಡೇವನ್ ಕಾನ್ವೆ 6.25 ಕೋಟಿ ರೂ., ವಿಜಯ್ ಶಂಕರ್ 1.20 ಕೋಟಿ ರೂ., ದೀಪಕ್ ಹೂಡಾ 1.7 ಕೋಟಿ ರೂ., ಅನ್ಸುಲ್ ಕಾಂಬೋಜ್ 3.40 ಕೋಟಿ ರೂ., ರಚಿನ್ ರವೀಂದ್ರ 4 ಕೋಟಿ ರೂ., ರವಿಚಂದ್ರ ಅಶ್ವಿನ್ 9.75 ಕೋಟಿ ರೂ., ಸ್ಯಾಮ್ ಕರನ್ 2.40 ಕೋಟಿ ರೂ., ಮುಖೇಶ್ ಚೌಧರಿ 30 ಲಕ್ಷ ರೂ., ನಾಥನ್ ಎಲ್ಲಿಸ್ 2 ಕೋಟಿ ರೂ., ಗುರ್ಜಪ್ನಿತ್ ಸಿಂಗ್ 2.2 ಕೋಟಿ ರೂ., ನೂರ್ ಅಹ್ಮದ್ 10 ಕೋಟಿ ರೂ., ಖಲೀಲ್ ಅಹ್ಮದ್ 4.8 ಕೋಟಿ ರೂ., ಕಮಲೇಶ್ ನಾಗರಕೋಟಿ 30 ಲಕ್ಷ ರೂ., ಜಾಮಿ ಒವರ್‌ಟನ್ 1.5 ಕೋಟಿ ರೂ., ಆಂಡ್ರೆ ಸಿದ್ದಾರ್ಥ್ ಸಿ 30 ಲಕ್ಷ ರೂ., ವಂಶ ಬೇಡಿ 55 ಲಕ್ಷ ರೂ., ರಾಮಕೃಷ್ಣ ಘೋಷ್ 30 ಲಕ್ಷ ರೂ., ಶ್ರೇಯಸ್ ಗೋಪಾಲ್ 30 ಲಕ್ಷ ರೂ.,

ಒಟ್ಟು 25 ಆಟಗಾರರು: ಭಾರತೀಯರು 18, ವಿದೇಶಿ ಆಟಗಾರರು 7

ಲಖನೌ ಸೂಪರ್ ಜೇಂಟ್ಸ್

ನಿಕೋಲಸ್ ಪೂರನ್ 21 ಕೋಟಿ ರೂ., ರವಿ ಬಿಷ್ಣೋಯ್ 11 ಕೋಟಿ ರೂ., ಮಯಾಂಕ್ ಯಾದವ್ 11 ಕೋಟಿ ರೂ. ಮೋಷಿನ್ ಖಾನ್ 4 ಕೋಟಿ ರೂ., ಆಯುಷ್ ಬದೋನಿ 4 ಕೋಟಿ ರೂ., ಹಿಮ್ಮತ್ ಸಿಂಗ್ 30 ಲಕ್ಷ ರೂ., ಡೇವಿಡ್ ಮಿಲ್ಲರ್ 7.50 ಕೋಟಿ ರೂ., ಆರ್ಯನ್ ಜುಯಲ್ 30 ಲಕ್ಷ ರೂ. ರಿಷಬ್ ಪಂತ್ 27 ಕೋಟಿ ರೂ., ಶಹಬಾಜ್ ಅಹ್ಮದ್ 2.40 ಕೋಟಿ ರೂ., ಅಬ್ದುಲ್ ಸಮದ್ 4.20 ಕೋಟಿ ರೂ. ಯುವರಾಜ್ ಚೌಧರಿ 30 ಲಕ್ಷ ರೂ., ಮಿಚೆಲ್ ಮಾರ್ಷ್ 3.40 ಕೋಟಿ ರೂ., ಆಕಾಶ್ ದೀಪ್ 8 ಕೋಟಿ ರೂ., ಆಕಾಶ್ ಸಿಂಗ್ 30 ಲಕ್ಷ ರೂ., ಮಣಿಮರನ್ ಸಿದ್ದಾರ್ಥ್ 75 ಲಕ್ಷ ರೂ., ದಿಗ್ವೇಶ್ ಸಿಂಗ್ 30 ಲಕ್ಷ ರೂ., ಶಮರ್ ಜೋಸೆಫ್ 75 ಲಕ್ಷ ರೂ., ಆವೇಶ್ ಖಾನ್ 9.75 ಕೋಟಿ ರೂ., ಪ್ರಿನ್ಸ್ ಯಾದವ್ 30 ಲಕ್ಷ ರೂ., ಆಡಂ ಮರ್ಕರಂ 2 ಕೋಟಿ ರೂ., ಮ್ಯಾಥ್ಯೂ ಬ್ರಿಟ್ಜೇಕ್ 75 ಲಕ್ಷ ರೂ., ಆರ್ ಎಸ್ ಹಂಗ್ರೇಕರ್ 30 ಲಕ್ಷ ರೂ., ಆಶೀಶ್ ಕುಲಕರ್ಣಿ 30 ಲಕ್ಷ ರೂ.

ಒಟ್ಟು 24 ಆಟಗಾರರು: ಭಾರತೀಯರು 18 ವಿದೇಶಿ ಆಟಗಾರರು 6.

ಮುಂಬೈ ಇಂಡಿಯನ್ಸ್

ಜಸ್ಪ್ರೀತ್ ಬೂಮ್ರಾ 18 ಕೋಟಿ ರೂ., ಹಾರ್ದಿಕ್ ಪಾಂಡ್ಯ 16.35 ಕೋಟಿ ರೂ., ಸೂರ್ಯಕುಮಾರ್ ಯಾದವ್ 16.35 ಕೋಟಿ ರೂ., ರೋಹಿತ್ ಶರ್ಮಾ 16.30 ಕೋಟಿ ರೂ., ತಿಲಕ್ ವರ್ಮಾ 8 ಕೋಟಿ ರೂ., ರಿಯಾನ್ ರಿಕಲ್ಟನ್ 1 ಕೋಟಿ ರೂ., ರಾಬಿನ್ ಮಿಂಜ್ 65 ಲಕ್ಷ ರೂ., ಕೃಷ್ಣನ್ ಶ್ರೀಜಿತ್ 30 ಲಕ್ಷ ರೂ., ನಮನ್ ಧೀರ್ 5.25 ಕೋಟಿ ರೂ., ರಾಜ್ ಭಾವಾ 30 ಲಕ್ಷ ರೂ., ವಿಲ್ ಜಾಕ್ಸ್ 5.25 ಕೋಟಿ ರೂ., ಮಿಚೆಲ್ ಸ್ಯಾಂಟ್ನರ್ 2 ಕೋಟಿ ರೂ., ಅಶ್ವಿನ್ ಕುಮಾರ್ 30 ಲಕ್ಷ ರೂ., ಅಲ್ಲಾ ಘಾಜನ್‌ಫರ್ 4.8 ಕೋಟಿ ರೂ., ರೀಸ್ ಟೋಪ್ಲಿ 75 ಲಕ್ಷ ರೂ., ಕರಣ್ ಶರ್ಮಾ 50 ಲಕ್ಷ ರೂ., ಟ್ರೆಂಟ್ ಬೋಲ್ಟ್ 12.50 ಕೋಟಿ ರೂ., ದೀಪಕ್ ಚಹರ್ 9.25 ಕೋಟಿ ರೂ., ಸತ್ಯನಾರಾಯಣ ರಾಜು 30 ಲಕ್ಷ ರೂ., 20ಬೆವನ್ ಜಾಕೋಬ್ಸ್ 30 ಲಕ್ಷ ರೂ., ವಿಗ್ನೇಶ್ ಪುತ್ತೂರು 30 ಲಕ್ಷ ರೂ., ಅರ್ಜುನ್ ತೆಂಡೂಲ್ಕರ್ 30 ಲಕ್ಷ ರೂ., ಲಿಜಾರ್ಡ್ ವಿಲಿಯಮ್ಸ್ 75 ಲಕ್ಷ ರೂ.

ಒಟ್ಟು 23 ಆಟಗಾರರು: ಭಾರತೀಯರು 15, ವಿದೇಶಿ ಆಟಗಾರರು 8

ಡೆಲ್ಲಿ ಕ್ಯಾಪಿಟಲ್ಸ್

ಅಕ್ಷರ್ ಪಟೇಲ್ 16.50 ಕೋಟಿ ರೂ., ಕುಲದೀಪ್ ಯಾದವ್ 13.25 ಕೋಟಿ ರೂ., ಟ್ರಿಸ್ಟನ್ ಸ್ಟಬ್ಸ್ 10 ಕೋಟಿ ರೂ., ಅಭಿಷೇಕ್ ಪೋರೆಲ್ 4 ಕೋಟಿ ರೂ., ಕೆ.ಎಲ್.ರಾಹುಲ್ 14 ಕೋಟಿ ರೂ., ಕರುಣ್ ನಾಯರ್ 4 ಕೋಟಿ ರೂ., ಹ್ಯಾರಿ ಬ್ರೂಕ್ 6.25 ಕೋಟಿ ರೂ., ಜೇಕ್ ಫ್ರೆಸರ್ ಮೆಗರ್ಕ್ 9 ಕೋಟಿ ರೂ., ಫಾಪ್ ಡು ಪ್ಲೆಸಿಸ್ 2 ಕೋಟಿ ರೂ., ಸಮೀರ್ ರಿಜ್ವಿ 95 ಲಕ್ಷ ರೂ., ಅಶುತೋಶ್ ಶರ್ಮಾ 3.80 ಕೋಟಿ ರೂ., ದರ್ಶನ್ ನಾಲ್ಕಂಡೆ 30 ಲಕ್ಷ ರೂ., ವಿಪ್ರಾಜ್ ನಿಗಮ್ 50 ಲಕ್ಷ ರೂ., ದುಶ್ಮಂತ ಚಮೀರಾ 75 ಲಕ್ಷ ರೂ. 15 , ಮಿಚೆಲ್ ಸ್ಟಾರ್ಕ್ 11.75 ಕೋಟಿ ರೂ., ಮೋಹಿತ್ ಶರ್ಮಾ 2.20 ಕೋಟಿ ರೂ., ಟಿ ನಟರಾಜನ್ 10.75 ಕೋಟಿ ರೂ., ಮುಖೇಶ್ ಕುಮಾರ್ 8 ಕೋಟಿ ರೂ., ಡೊನೊವಿನ್ ಫೆರೇರಾ 75 ಲಕ್ಷ ರೂ., ಅಜಯ್ ಜಾಧವ್ ಮಂಡಲ್ 30 ಲಕ್ಷ ರೂ., ಮನ್ವಂತ್ ಕುಮಾರ್ ಎಲ್ 30 ಲಕ್ಷ ರೂ., ತ್ರಿಪುರನ ವಿಜಯ್ 30 ಲಕ್ಷ ರೂ. ಮಾಧವ್ ತಿವಾರಿ 40 ಲಕ್ಷ ರೂ.

ಒಟ್ಟು 23 ಆಟಗಾರರು: ಭಾರತೀಯರು 16 ವಿದೇಶಿ ಆಟಗಾರರು 7

ಪಂಜಾಬ್ ಕಿಂಗ್ಸ್

ಶಶಾಂಕ್ ಸಿಂಗ್ 5.50 ಕೋಟಿ ರೂ., ಪ್ರಭುಶಿಮ್ರನ್ ಸಿಂಗ್ 4 ಕೋಟಿ ರೂ., ಶ್ರೇಯಸ್ ಅಯ್ಯರ್ 26.75 ಕೋಟಿ ರೂ., ನೇಹಲ್ ವಡೇರಾ 4.20 ಕೋಟಿ ರೂ., ಹರ್ನೂರ್ ಸಿಂಗ್ 30 ಲಕ್ಷ ರೂ., ಮುಶೀರ್ ಖಾನ್ 30 ಲಕ್ಷ ರೂ., ಪೈಲಾ ಅವಿನಾಶ್ 30 ಲಕ್ಷ ರೂ., ವಿಷ್ಣು ವಿನೋದ್ 95 ಲಕ್ಷ ರೂ., ಜೋಶ್ ಇಂಗ್ಲಿಸ್ 2.60 ಕೋಟಿ ರೂ., ಸೂರ್ಯಂಶ ಶೆಡ್ಗೆ30 ಲಕ್ಷ ರೂ., ಹರ್‌ಪ್ರೀತ್ ಬ್ರಾರ್ 1.50 ಕೋಟಿ ರೂ., ಮಾರ್ಕೋ ಜಾನ್ಸನ್ 7 ಕೋಟಿ ರೂ., ಆರನ್ ಹರ್ದಿ 1.25 ಕೋಟಿ ರೂ. ಅಜ್ಮತ್‌ಉಲ್ಲಾ ಒಮರ್‌ಜಾಯ್ 2.40 ಕೋಟಿ ರೂ., ಪ್ರಿಯಾಂಶ್ ಆರ್ಯ 3.80 ಕೋಟಿ ರೂ., ಗ್ಲೇನ್ ಮ್ಯಾಕ್ಸ್‌ವೆಲ್ 4.20 ಕೋಟಿ ರೂ., ಮಾರ್ಕಸ್ ಸ್ಟೋಯ್ನಿಸ್ 11 ಕೋಟಿ ರೂ., ಯಶ್ ಠಾಕೂರ್ 1.6 ಕೋಟಿ ರೂ., ವಿಜಯ್ ಕುಮಾರ್ ವೈಶಾಖ್ 1.8 ಕೋಟಿ ರೂ., ಕುಲದೀಪ್ ಸೇನ್ 80 ಲಕ್ಷ ರೂ., ಕ್ಷೇವಿಯರ್ ಬಾರ್ಟ್‌ಲೆಟ್ 80 ಲಕ್ಷ ರೂ., ಅರ್ಶದೀಪ್ ಸಿಂಗ್ 18 ಕೋಟಿ ರೂ., ಯಜುವೇಂದ್ರ ಚಹಲ್ 18 ಕೋಟಿ ರೂ., ಲೂಕಿ ಫರ್ಗುಸನ್ 2 ಕೋಟಿ ರೂ., ಪ್ರವೀಣ್ ದುಬೆ 30 ಲಕ್ಷ ರೂ.

ಒಟ್ಟು 25 ಆಟಗಾರರು: ಭಾರತೀಯರು 17 ವಿದೇಶಿ ಆಟಗಾರರು 8.

ಕೋಲ್ಕತ್ತಾ ನೈಟ್ ರೈಡರ್ಸ್

ರಿಂಕು ಸಿಂಗ್ 13 ಕೋಟಿ ರೂ., ಸುನೀಲ್ ನರೇನ್ 12 ಕೋಟಿ ರೂ., ಆಂಡ್ರೆ ರಸೆಲ್ 12 ಕೋಟಿ ರೂ., ವರುಣ್ ಚಕ್ರವರ್ತಿ 12 ಕೋಟಿ ರೂ., ಹರ್ಷಿತ್ ರಾಣಾ 4 ಕೋಟಿ ರೂ., ರಮಣ್‌ದೀಪ್ ಸಿಂಗ್ 4 ಕೋಟಿ ರೂ., ಅಂಕ್ರಿಷ್ ರಘುವಂಶಿ 3 ಕೋಟಿ ರೂ., ಮನಿಷ್ ಪಾಂಡೆ 75 ಲಕ್ಷ ರೂ., ಕ್ವಿಂಟನ್ ಡಿಕಾಕ್3.60 ಕೋಟಿ ರೂ., ರಹಮನುಲ್ಲಾ ಗುರ್ಬಾಜ್ 2 ಕೋಟಿ ರೂ., ರೋಮೆನ್ ಪೋವೆಲ್ 1.50 ಕೋಟಿ ರೂ., 12 ವೆಂಕಟೇಶ್ ಅಯ್ಯರ್ 23.75 ಕೋಟಿ ರೂ., ವೈಭವ್ ಅರೋರಾ 1.80 ಕೋಟಿ ರೂ., ಮಯಾಂಕ್ ಮಾರ್ಕಂಡೆ 30 ಲಕ್ಷ ರೂ., ಆನ್ರಿಚ್ ನೋರ್ಕಿಯಾ 6.5 ಕೋಟಿ ರೂ., ಸ್ಪೆನ್ಸರ್ ಜಾನ್ಸನ್ 2.8 ಕೋಟಿ ರೂ., ಅಜಿಂಕ್ಯ ರಹಾನೆ 1.5 ಕೋಟಿ ರೂ., ಲುವ್ನಿತ್ ಸಿಸೋಡಿಯಾ 30 ಲಕ್ಷ ರೂ. ಅನುಕುಲ್ ರಾಯ್ 40 ಲಕ್ಷ ರೂ., ಮೋಹಿನ್ ಅಲಿ 2 ಕೋಟಿ ರೂ., ಉಮ್ರಾನ್ ಮಲಿಕ್ 75 ಲಕ್ಷ ರೂ.

ಒಟ್ಟು 21 ಆಟಗಾರರು: ಭಾರತೀಯರು 13 ವಿದೇಶಿ ಆಟಗಾರರು 8.

ರಾಜಸ್ಥಾನ ರಾಯಲ್ಸ್

ಸಂಜು ಸ್ಯಾಮ್ಸನ್ 18 ಕೋಟಿ ರೂ., ಯಶಸ್ವಿ ಜೈಸ್ವಾಲ್ 18 ಕೋಟಿ ರೂ., ರಿಯಾನ್ ಪರಾಗ್ 14 ಕೋಟಿ ರೂ., ಧ್ರುವ್ ಜುರೇಲ್ 14 ಕೋಟಿ ರೂ., ಶಿಮ್ರಾನ್ ಹೆಟ್ಮೇಯರ್ 11 ಕೋಟಿ ರೂ., ಸಂದೀಪ್ ಶರ್ಮಾ 4 ಕೋಟಿ ರೂ., ಶುಭಂ ದುಬೆ 80 ಲಕ್ಷ ರೂ., ಯುದ್ವೀರ್ ಸಿಂಗ್ ಚರಕ್ 35 ಲಕ್ಷ ರೂ., ನಿತೀಶ್ ರಾಣಾ 4.20 ಕೋಟಿ ರೂ., ತುಷಾರ್ ದೇಶಪಾಂಡೆ 6.5 ಕೋಟಿ ರೂ., ಆಕಾಶ್ ಮದ್ವಾಲ್ 1.20 ಕೋಟಿ ರೂ., ಕುಮಾರ್ ಕಾರ್ತಿಕೇಯ 30 ಲಕ್ಷ ರೂ., ವನಿಂದು ಹಸರಂಗ 5.25 ಕೋಟಿ ರೂ., ಮಹೀಶ್ ತೀಕ್ಷಣ 4.40 ಕೋಟಿ ರೂ., ಫಜಲಾಕ್ ಫಾರೂಕಿ 2 ಕೋಟಿ ರೂ., ಜೋಫ್ರಾ ಆರ್ಚರ್ 12.50 ಕೋಟಿ ರೂ.,ವೈಭವ್ ಸೂರ್ಯವಂಶಿ 1.10 ಕೋಟಿ ರೂ., ಕ್ವೆನಾ ಮಫಾಕಾ 1.50 ಕೋಟಿ ರೂ., ಕುನಾಲ್ ಸಿಂಗ್ ರಾಥೋರ್ 3 0 ಲಕ್ಷ ರೂ., ಅಶೋಕ್ ಶರ್ಮಾ 30 ಲಕ್ಷ ರೂ.

ಒಟ್ಟು 20 ಆಟಗಾರರು: ಭಾರತೀಯರು 14, ವಿದೇಶಿ ಆಟಗಾರರು 6.

ಸನ್‌ರೈಸರ್ಸ್ ಹೈದ್ರಾಬಾದ್

ಹೆನ್ರಿಚ್ ಕ್ಲಾಸೆನ್ 23 ಕೋಟಿ ರೂ., ಪ್ಯಾಟ್ ಕಮ್ಮಿನ್ಸ್ 18 ಕೋಟಿ ರೂ., ಅಭಿಷೇಕ್ ಶರ್ಮಾ 14 ಕೋಟಿ ರೂ., ಟ್ರಾವಿಸ್ ಹೆಡ್ 14 ಕೋಟಿ ರೂ., ನಿತೀಶ್ ರೆಡ್ಡಿ 6 ಕೋಟಿ ರೂ., ಅಭಿನವ್ ಮನೋಹರ್ 3.20 ಕೋಟಿ ರೂ., ಅಥರ್ವ ಥಾಯ್ಡೆ 30 ಲಕ್ಷ ರೂ., ಅನಿಕೇತ್ ವರ್ಮಾ 30 ಲಕ್ಷ ರೂ., ಇಶಾನ್ ಕಿಶನ್ 11.25 ಕೋಟಿ ರೂ., ಬ್ರಿಡನ್ ಕಾರ್ಸ್ 1 ಕೋಟಿ ರೂ., ಕಮಿಂದು ಮೆಂಡಿಸ್ 75 ಲಕ್ಷ ರೂ., ಹರ್ಷಲ್ ಪಟೇಲ್ 8 ಕೋಟಿ ರೂ., ರಾಹುಲ್ ಚಹರ್ 3.20 ಕೋಟಿ ರೂ., ಜಯದೇವ್ ಉನಾದ್ಕತ್ 1 ಕೋಟಿ ರೂ., ಸಿಮರ್ಜಿತ್ ಸಿಂಗ್ 1.50 ಕೋಟಿ ರೂ., ಜೀಶನ್ ಅನ್ಸಾರಿ 40 ಲಕ್ಷ ರೂ., ಮೊಹಮದ್ ಶಮಿ 10 ಕೋಟಿ ರೂ., ಆಡಂ ಜಂಪಾ 2.40 ಕೋಟಿ ರೂ., ಇಷನ್ ಮಾಲಿಂಗ 1.20 ಕೋಟಿ ರೂ., ಸಚಿನ್ ಬೇಬಿ 30 ಲಕ್ಷ ರೂ.

ಒಟ್ಟು 20 ಆಟಗಾರರು: ಭಾರತೀಯರು 13 ವಿದೇಶಿ ಆಟಗಾರರು 7.

ಗುಜರಾತ್ ಟೈಟಾನ್ಸ್

ರಶೀದ್ ಖಾನ್ 18 ಕೋಟಿ ರೂ., ಶುಭಮನ್ ಗಿಲ್ 16.50 ಕೋಟಿ ರೂ., ಸಾಯಿ ಸುದರ್ಶನ್ 8.50 ಕೋಟಿ ರೂ., ರಾಹುಲ್ ತೇವಾಟಿಯಾ 4 ಕೋಟಿ ರೂ., ಶಾರುಕ್ ಖಾನ್ 4 ಕೋಟಿ ರೂ., ಕುಮಾರ್ ಕುಶಗ್ರಾ 65 ಲಕ್ಷ ರೂ., ಅನುಜ್ ರಾವತ್ 30 ಲಕ್ಷ ರೂ., ಜೋಸ್ ಬಟ್ಲರ್ 15.75 ಕೋಟಿ ರೂ., ನಿಶಾಂತ್ ಸಿಂಧು 30 ಲಕ್ಷ ರೂ., ರವಿಶ್ರೀನಿವಾಸನ್ ಸಾಯಿ ಕಿಶೋರ್ 2 ಕೋಟಿ ರೂ., ಗೆರಾಲ್ಡ್ ಕೊಯಿಟ್ಜಿ 2.40 ಕೋಟಿ ರೂ., ಜಯಂತ್ ಯಾದವ್ 75 ಲಕ್ಷ ರೂ., ಅರ್ಶದ್ ಖಾನ್ 1.30 ಕೋಟಿ ರೂ., ಶೇರ್ಫೆನ್ ರುಥರ್‌ಫೋರ್ಡ್ 2.60 ಕೋಟಿ ರೂ., ಮಹಿಪಾಲ್ ಲೋಮರೊರ್ 1.70 ಕೋಟಿ ರೂ., ವಾಷಿಂಗ್ಟನ್ ಸುಂದರ್ 3.20 ಕೋಟಿ ರೂ., ಮಾನವ್ ಸುತಾರ್ 30 ಲಕ್ಷ ರೂ., ಗರ್ನೂರು ಬ್ರಾರ್ 1.30 ಕೋಟಿ ರೂ., ಇಶಾಂತ್ ಶರ್ಮಾ 75 ಲಕ್ಷ ರೂ., ಕಗಿಸೋ ರಬಾಡ 10.75 ಕೋಟಿ ರೂ., ಪ್ರಸಿದ್ಧ ಕೃಷ್ಣ 9.50 ಕೋಟಿ ರೂ., ಮೊಹಮದ್ ಸಿರಾಜ್ 12.25 ಕೋಟಿ ರೂ., ಗ್ಲೆನ್ ಫಿಲಿಪ್ಸ್ 2 ಕೋಟಿ ರೂ., ಕರೀಂ ಜನ್ನತ್ 75 ಲಕ್ಷ ರೂ., ಕುಲವಂತ್ ಕೇಜ್ರೋಲಿಯಾ 30 ಲಕ್ಷ ರೂ.

ಒಟ್ಟು 25 ಆಟಗಾರರು: ಭಾರತೀಯರು 18 ವಿದೇಶಿ ಆಟಗಾರರು7

ಐಪಿಎಲ್ ಪ್ರವೇಶಿಸಿದ ಮೈಸೂರಿನ ಯುವ ಕ್ರಿಕೆಟಿಗ ಮನ್ವಂತ್‌ಕುಮಾರ್ ಪುಟ 9

ಸಮ್ಮೇಳನದ ಇತಿಹಾಸದಲ್ಲೇ ಮೊದಲ ಬಾರಿಗೆ ಗಾಯಕರ ಆಯ್ಕೆ

ಕಸಾಪ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ



ಡಾ.ಮಹೇಶ್ ಜೋಶಿ

ಮಂಡ್ಯ,ನ.25– ಪ್ರತಿಭೆಯನ್ನು ಹೊರ ತರುವ ಉದ್ದೇಶದಿಂದ ಮತ್ತು ಹಾಡುಗಾರರಿಗೆ ವೇದಿಕೆ ಕಲ್ಪಿಸಲು ಸಮ್ಮೇಳನಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಂಗೀತ ಮತ್ತು ಧ್ವನಿ ಪರೀಕ್ಷೆ ನಡೆಸಿ ಗಾಯಕರನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಶಿ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್, ದೂರದರ್ಶನ ಚಂದನ ವಾಹಿನಿ, ಕರ್ನಾಟಕ ಸರ್ಕಾರದ ವತಿಯಿಂದ ಭಾನುವಾರ ಆಯೋಜಿಸಿದ್ದ 'ಮಧುರ ಮಧುರವೀ ಮಂಜುಳಾ ಗಾನ' ಹಾಗೂ 'ನಾವಾಡುವ ನುಡಿಯೇ ಕನ್ನಡ ನುಡಿ' ಧ್ವನಿ ಪರೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕನ್ನಡದ ನೆಲ, ಜಲ, ಭಾಷೆ, ಸಂಸ್ಕೃತಿ, ಇತಿಹಾಸ ಕನ್ನಡತನದ ನಮ್ಮತನವನ್ನು ಬಹಳ ಹೆಮ್ಮೆಯಿಂದ ಹೇಳುವ ಚಲನಚಿತ್ರ ಗೀತೆಗಳು ಮತ್ತು ಕವಿಗಳ ಜನಪ್ರಿಯ ಗೀತೆಗಳನ್ನು ಪ್ರಥಮ ಬಾರಿಗೆ ಮಂಡ್ಯದ ಈ ಸಮ್ಮೇಳನದಲ್ಲಿ ಚಂದನ ವಾಹಿನಿ ಜೊತೆ ಆಯೋಜಿಸಲಾಗುತ್ತಿದೆ ನಾವಾಡುವ ನುಡಿಯೇ ಕನ್ನಡ ನುಡಿ ಗಾಯಕರು ಮಾತ್ರ ಹಾಡುವುದಲ್ಲ ಎಲ್ಲರೂ ಹಾಡುವಂತೆ ಪ್ರೇರೇಪಿಸಲಾಗುವುದು. ಆಸಕ್ತಿ ಹೊಂದಿರುವ ಎಲ್ಲರಿಗೂ ಅವಕಾಶ ಕೊಡಬೇಕೆಂಬ ಆಸೆ ಇದೆ. ಸಮಯದ ಮಿತಿ ಇರುವುದರಿಂದ ಧ್ವನಿ ಪರೀಕ್ಷೆ ನಡೆಸಿ ಆಯ್ಕೆ ಮಾಡಲಾಗುತ್ತಿದೆ ಎಂದು ಹೇಳಿದರು.

ಕೆಲವು ಗಾಯನಗಳಿಗೆ ನೃತ್ಯ ಸಂಯೋಜನೆ ಮಾಡಿ ಅವುಗಳನ್ನು ವೇದಿಕೆಯ ಮೂಲಕ ಪ್ರದರ್ಶಿಸಲಾಗುವುದು. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಹಾಡುಗಳು ಪ್ರತಿಧ್ವನಿಸುವಂತೆ ಮಾಡಲಾಗುವುದು. ಜನರಿಗೆ ಸಾಹಿತಿಗಳು, ಕವಿಗಳ ಪರಿಚಯ ಮಾಡಿಸುತ್ತೇವೆ. ನಾವು ಪ್ರಚಾರಕ್ಕಾಗಿ ಕೆಲಸ ಮಾಡುವುದಿಲ್ಲ. ಬದಲಿಗೆ ಕನ್ನಡದ ಕಂಪು ಹರಡಲು ಕೆಲಸ ಮಾಡುತ್ತೇವೆ. ಇದಕ್ಕೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಮನವಿ ಮಾಡಿದರು.

ಕನ್ನಡ ನಮ್ಮ ಇತಿಹಾಸವೇ ನಮ್ಮತನವಾಗಿರುವುದರಿಂದ ದೂರದರ್ಶನ ಕಾರ್ಯಕ್ರಮಗಳು ಬೇರೆ ಕಾರ್ಯಕ್ರಮಗಳಿಗಿಂತ ವಿಭಿನ್ನವಾಗಿರುತ್ತವೆ. ಇಲ್ಲಿ ಮಾನದಂಡಗಳ ಮೇಲೆ ಕಲೆ ಪ್ರಸ್ತುತವಾಗುತ್ತದೆ. ಹಾಡುವುದಕ್ಕೆ ಎಲ್ಲರಿಗೂ ಅವಕಾಶ ನೀಡಬೇಕೆಂಬ ಆಸೆಯಿದೆ. ಸಮಯದ ಮಿತಿ ಇರುವುದರಿಂದ ಹಾಡುಗಳ ಗಂಭೀರತೆಯನ್ನು ಕಾಯ್ದುಕೊಳ್ಳಬೇಕಿರುವುದರಿಂದ ಸುಮಾರು 20 ಕನ್ನಡ ಭಾಷೆ ಮತ್ತು ಸಂಸ್ಕೃತಿ ಬಿಂಬಿಸುವ ಹಾಡುಗಳನ್ನು ಹಾಡಿಸಲಾಗುವುದು ಎಂದು ವಿವರಿಸಿದರು.

ಗಾಯಕರಾದ ಶ್ರೀಧರ್, ರಾಧಿಕಾರಾವ್, ಡೇವಿಡ್ ಅವರು ತೀರ್ಪುಗಾರರಾಗಿದ್ದರು. ಕಾರ್ಯಕ್ರಮದಲ್ಲಿ ಚಂದನ ವಾಹಿನಿಯ ಸುಧಾಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಂದೀಶ್, ಕೇಂದ್ರ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯರಾದ ಎಚ್.ಎಸ್.ಮುದ್ದೇಗೌಡ, ಶ್ರೀಧರಮೂರ್ತಿ, ಪದಾಧಿಕಾರಿಗಳಾದ ಹರ್ಷ, ಅಪ್ಪಾಜಪ್ಪ, ಧನಂಜಯ ದರಸಗುಪ್ಪೆ, ಹೊಳಲು ಶ್ರೀಧರ್, ಎಲ್.ಕೃಷ್ಣ, ಎಂ.ಸಿ.ಭಾಸ್ಕರ್, ಸುಜಾತಾ ಭಾಗವಹಿಸಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆಯಾಗದಂತೆ ಎಚ್ಚರಿಕೆ ವಹಿಸಬೇಕು

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ

ಮಂಡ್ಯ,ನ.25– ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯದಂತೆ, ಸ್ಕ್ಯಾನಿಂಗ್ ಸೆಂಟರ್ ಹಾಗೂ ಮೆಡಿಕಲ್ ಸ್ಟೋರ್‌ಗಳ ಮೇಲೆ ತೀವ್ರ ನಿಗಾ ಇಟ್ಟು ಆಗಾಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರ (ದುರ್ಬಳಕೆ ಮತ್ತು ತಡೆ) ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಸಭೆ ಹಾಗೂ ಜಿಲ್ಲಾ ತಪಾಸಣಾ ಮೇಲ್ವಿಚಾರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಇದುವರೆಗೂ ಭ್ರೂಣಹತ್ಯೆಗೆ ಸಂಬಂಧಿಸಿದಂತೆ ದಾಳಿ ನಡೆಸಿದಾಗ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಹೆಚ್ಚುವರಿ ಸ್ಕ್ಯಾನಿಂಗ್ ಯಂತ್ರಗಳು ಇರುವುದು ಕಂಡುಬಂದಿದ್ದು, ಹೆಚ್ಚುವರಿ ಸ್ಕ್ಯಾನಿಂಗ್ ಯಂತ್ರಗಳನ್ನು ವಶಪಡಿಸಿಕೊಂಡು ಸ್ಕ್ಯಾನಿಂಗ್ ಸೆಂಟರ್ ಮಾಲೀಕರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಯಾವುದೇ ಭ್ರೂಣ ಹತ್ಯೆ ಮತ್ತು ಭ್ರೂಣ ಪತ್ತೆಯಂತಹ ಕಾನೂನುಬಾಹಿರ ಚಟುವಟಿಕೆಗಳು ಕಂಡು ಬಂದಲ್ಲಿ ಕೂಡಲೇ ಪಿಸಿ ಹಾಗೂ ಪಿಎನ್‌ಡಿಟಿ ಕಾಯ್ದೆಯಡಿ ಕಠಿಣ ಕ್ರಮ ಕೈಗೊಂಡು ಉತ್ತಮ ಸಮಾಜದ ನಿರ್ಮಾಣಕ್ಕೆ ಮುಂದಾಗಿ ಎಂದರು.



ಜಿಲ್ಲಾ ಮಟ್ಟದ ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ತಂತ್ರ ಕಾಯ್ದೆಯ ಜಿಲ್ಲಾ ಸಲಹಾ ಸಮಿತಿ ಸಭೆ ಹಾಗೂ ಜಿಲ್ಲಾ ತಪಾಸಣಾ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡುತ್ತಿರುವುದು.

ವೈದ್ಯರ ಸಲಹೆ ಇಲ್ಲದೆ ಮೆಡಿಕಲ್ ಸ್ಟೋರ್‌ಗಳಲ್ಲಿ ಸಿಗುವ ಮಾತ್ರೆಗಳನ್ನು ಖರೀದಿಸಿ ಅಕ್ರಮ ಗರ್ಭಪಾತ ನಡೆಯುತ್ತಿವೆ ಎಂಬ ದೂರು ಕೇಳಿ ಬರುತ್ತಿದೆ. ಎಲ್ಲಾ ಮೆಡಿಕಲ್ ಸ್ಟೋರ್‌ಗಳ ಮೇಲೆ ತೀವ್ರ ನಿಗಾ ಇಟ್ಟು ಪರಿಶೀಲನೆ ನಡೆಸಿ ಔಷಧಿ ಮಾರಾಟಗಾರರಿಗೆ ಸೂಕ್ತ ಕಾರ್ಯಾಗಾರವನ್ನು ಏರ್ಪಡಿಸಿ ತಿಳುವಳಿಕೆ ಮೂಡಿಸುವಂತೆ ತಿಳಿಸಿದರು.

ಪ್ರತಿ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ದಿಢೀರ್ ಭೇಟಿ ನೀಡಿ ತಪಾಸಣೆ ಮಾಡಬೇಕು ಹಾಗೂ ಯಾವುದೇ ರೀತಿಯ ಅನುಮಾನ ಬಂದಲ್ಲಿ ಅವರ ಮೇಲೆ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಿ. ಭ್ರೂಣ ಹತ್ಯೆ ತಡೆಗಟ್ಟುವ ಬಗ್ಗೆ ಪ್ರತಿ ಗ್ರಾಮ ಸಭೆಗಳಲ್ಲಿ ಚರ್ಚೆ ನಡೆಸಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಬೇಕು. ಡಿಸೆಂಬರ್ 20, 21, 22 ರಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಸಮ್ಮೇಳನದಲ್ಲಿ ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ ವಿಶೇಷ ವಿಚಾರ ಗೋಷ್ಠಿಯನ್ನು ಆಯೋಜಿಸಲಾಗಿದೆ ಎಂದರು.

ಸಭೆಯಲ್ಲಿ ಡಿಎಚ್‌ಓ ಡಾ.ಮೋಹನ್, ಜಿಲ್ಲಾ ಹಿರಿಯ ನಾಗರಿಕರು ಹಾಗೂ ಅಂಗವಿಕಲರ ಕಲ್ಯಾಣಾಧಿಕಾರಿ ಕೋಮಲ್‌ಕುಮಾರ್, ವೈದ್ಯರಾದ ಡಾ.ಜ್ಯೋತಿ, ಡಾ.ಮನೋಹರ್, ಡಾ.ಮರೀಗೌಡ, ಮುಖಂಡರುಗಳಾದ ಜಯಲಕ್ಷ್ಮಿ, ಜನಾರ್ಧನ್, ಡಾ.ದೇವಿಕಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಐವರ ಮೇಲೆ ಮಾರಣಾಂತಿಕ ಹಲ್ಲೆ: ಮೂವರ ಬಂಧನ, ಉಳಿದವರಿಗೆ ಶೋಧ

ಕೆ.ಆರ್.ಪೇಟೆ,ನ.25–ಹಳೆಯ ದ್ವೇಷದ ಹಿನ್ನೆಲೆಯಲ್ಲಿ 11 ಮಂದಿಯ ಗುಂಪೊಂದು ಆಟೋ ಅಡ್ಡಗಟ್ಟಿ ಐದು ಮಂದಿ ರೈತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಕಸಬಾ ಹೋಬಳಿಯ ಚಿಕ್ಕೋಸಹಳ್ಳಿ ಗ್ರಾಮದಲ್ಲಿ ನಡೆದಿದೆ.

ಚಿಕ್ಕೋಸಹಳ್ಳಿ ಗ್ರಾಮದ ಸೌಂದರ್ಯ, ಪ್ರಸನ್ನ, ಸತೀಶ್, ಸಿ.ಎಸ್.ದೇವರಾಜು, ಯೋಗೇಶ್ ಗಂಭೀರವಾಗಿ ಗಾಯಗೊಂಡಿದ್ದು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಾಗಿರುತ್ತಾರೆ.

ಇದೇ ಚಿಕ್ಕೋಸಹಳ್ಳಿ ಗ್ರಾಮದ ಪ್ರವೀಣ ಅಲಿಯಾಸ್ ಗಣೇಶ, ಮನೀತ್, ರಾಜೇಗೌಡ, ಚಂದ್ರೇಗೌಡ, ನಾಗೇಗೌಡ, ಶಶಿ, ಕಿರಣ್, ಚರಣ್, ಮೀನಾಕ್ಷಮ್ಮ, ಸುಶ್ಮಿತಾ, ಗಣೇಶ ಎಂಬುವವರು ಹಲ್ಲೆ ಮಾಡಿದ ಆರೋಪಿಗಳಾಗಿದ್ದಾರೆ.

ಘಟನೆ ವಿವರ: ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಆಟೋದಲ್ಲಿ ಕೆ.ಆರ್. ಪೇಟೆಯಿಂದ ಬರುತ್ತಿದ್ದಾಗ ಚಿಕ್ಕೋಸಹಳ್ಳಿ ಗ್ರಾಮದ ಬಳಿ ಇರುವ ಪೆಟ್ರೋಲ್ ಬಂಕ್ ಹತ್ತಿರ ಆಟೋವನ್ನು ಅಡ್ಡಗಟ್ಟಿದ ಆರೋಪಿಗಳು ಆಟೋದಲ್ಲಿದ್ದ ಪ್ರಸನ್ನ, ಸತೀಶ್, ಸಿ.ಎಸ್.ದೇವರಾಜು, ಯೋಗೇಶ್, ಸೌಂದರ್ಯ ಅವರುಗಳ ಮೇಲೆ ಮಾರಕಾಸ್ತ್ರಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿರುವ ಸೌಂದರ್ಯ, ಪ್ರಸನ್ನ, ಸತೀಶ್, ಸಿ.ಎಸ್.ದೇವರಾಜು, ಯೋಗೇಶ್ ಅವರು ಕೆ.ಆರ್.ಪೇಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವೈದ್ಯರ ಸಲಹೆಯ ಮೇರೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿರುತ್ತಾರೆ.

ಘಟನೆ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್.ಪೇಟೆ ಟೌನ್ ಠಾಣೆಯ ಪೊಲೀಸರು ಪ್ರವೀಣ್, ಮನೀತ್ ಹಾಗೂ ರಾಜೇಗೌಡ ಎಂಬುವವರನ್ನು ಬಂಧಿಸಿದ್ದು, ಉಳಿದ ಆರೋಪಿಗಳು ನಾಪತ್ತೆಯಾಗಿದ್ದು ಅವರ ಪತ್ತೆಗಾಗಿ ಪೊಲೀಸರು ಶೋಧ ಕಾರ್ಯ ಕೈಗೊಂಡಿದ್ದಾರೆ.

ಭಾರತೀನಗರದಲ್ಲಿ ತಾಲೂಕು ಮಟ್ಟದ ಬೃಹತ್ ರೈತರ ಸಮಾವೇಶ

ರೈತರಿಗೆ ಬೆಲೆ ಸಿಗಬೇಕಾದರೆ ಒಗ್ಗಟ್ಟು ಪ್ರದರ್ಶನ ಅಗತ್ಯ: ಬಡಗಲಪುರ ನಾಗೇಂದ್ರ

ಭಾರತೀನಗರ.ನ.25– ಶೋಷಣೆಗೆ ಒಳಗಾಗುತ್ತಿರುವುದರಿಂದ ರೈತರು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಇಲ್ಲಿಯ ಕಾವೇರಿ ನೀರಾವರಿ ನಿಗಮದ ಕಚೇರಿ ಮುಂಭಾಗ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ನಡೆದ ಗೆಜ್ಜಲಗೆರೆ ಗೋಲಿಬಾರ್‌ನಲ್ಲಿ ಮಡಿದ ರೈತರ ಹುತಾತ್ಮ ದಿನಾಚರಣೆ ಅಂಗವಾಗಿ ತಾಲೂಕು ಮಟ್ಟದ ಬೃಹತ್ ರೈತರ ಸಮಾವೇಶವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಪ್ರಸ್ತುತ ದಿನದಲ್ಲಿ ರೈತರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಮನ್ನಣೆ ನೀಡುತ್ತಿಲ್ಲ. ರೈತರನ್ನು ಶೋಷಣೆ ಮಾಡಿ ರಾಜಕಾರಣಿಗಳು ಬದುಕುತ್ತಿದ್ದಾರೆ.

ಹುತಾತ್ಮರಾದ ಎಲ್ಲಾ ರೈತ ನಾಯಕರು, ರೈತಪರ ಹೋರಾಟಗಾರರ ದಾಖಲೆಗಳನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಸಲುವಾಗಿ ಯೋಜನೆ ರೂಪಿಸಲಾಗಿದೆ. ರಾಜ್ಯಾದ್ಯಂತ ಪ್ರತೀ ವಾರ್ಡ್‌ನಲ್ಲೂ ರೈತ ಕಾರ್ಯಕರ್ತರನ್ನು ಹುಟ್ಟುಹಾಕಲು ಸದಸ್ಯತ್ವ ನೋಂದಣಿ ಮಾಡಲಾಗುವುದು ಎಂದು ಹೇಳಿದರು.



ಸಮಾವೇಶವನ್ನು ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಧ್ವಜಾರೋಹಣವನ್ನು ಕಾವೇರಿ ನೀರಾವರಿ ನಿಗಮದ ಕಚೇರಿಯ ಎದುರು ರಾಜ್ಯ ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ಯಧುಶೈಲ ಸಂಪತ್ ಅವರು ನೆರವೇರಿಸಿದರು.

ನಂತರ ಹುತಾತ್ಮ ರೈತರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಚಾಮರಾಜನಗರ ಜಿಲ್ಲಾ ಘಟಕದ ಉಪಾಧ್ಯಕ್ಷ ಮಹೇಶ್‌ಪ್ರಭು, ಮಂಡ್ಯ ಜಿಲ್ಲಾ ಘಟಕದ ಅಧ್ಯಕ್ಷ ಎ.ಎಲ್.ಕೆಂಪೂಗೌಡ ಸೇರಿದಂತೆ ಮತ್ತಿತರರು ಮಾತನಾಡಿದರು. ಸಭೆಗೂ ಮುನ್ನ ರೈತ ಸಂಘದಿಂದ ಹಲಗೂರು ರಸ್ತೆ, ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ವೇದಿಕೆಯಲ್ಲಿ ರಾಜ್ಯ ಹಾಗೂ ವಿವಿಧ ಜಿಲ್ಲಾ ಘಟಕದ ಪದಾಧಿಕಾರಿಗಳಾದ ಎಂ.ವಿ.ರಾಜೇಗೌಡ, ವಿ.ಸಿ.ಉಮೇಶ್, ಶೈಲೇಂದ್ರ, ಮಲ್ಲಿಗೆರೆ ಅಣ್ಣಯ್ಯ, ಭಾಸ್ಕರ್, ರತ್ನಮ್ಮ, ಶಂಭೂಗೌಡ, ಬಾಲರಾಜು, ಕ್ಯಾತನಹಳ್ಳಿ ಗೋವಿಂದೇಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಭೆಯ ನಿರ್ಣಯಗಳು: ಕೇಂದ್ರ ಸರ್ಕಾರ ಕಬ್ಬಿಗೆ ಎಫ್‌ಆರ್‌ಪಿ ಬೆಲೆ ನಿಗದಿ ಪಡಿಸುವಾಗ 8.5 ಇಳುವರಿಯ ಮಾನದಂಡ ಅನುಸರಿಸಿ ಬೆಲೆ ನಿಗದಿಪಡಿಸಬೇಕು. ಪ್ರಸಕ್ತ ಸಾಲಿಗೆ ಕನಿಷ್ಠ 4.5 ಸಾವಿರ ರೂ.ಗಳನ್ನು ಟನ್ ಕಬ್ಬಿಗೆ ನಿಗದಿಪಡಿಸಬೇಕು. ಡಾ.ಸ್ವಾಮೀನಾಥನ್ ಆಯೋಗದ ವರದಿಯನ್ನು ಜಾರಿಗೆ ತಂದು ಕಬ್ಬು, ಭತ್ತ, ರಾಗಿ, ತೆಂಗು, ರೇಷ್ಮೆ ಮುಂತಾದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕಾನೂನಾತ್ಮಕವಾಗಿ ಶಾಸನಗೊಳಿಸಬೇಕು. ಖಾಯಂ ಆಗಿ ಭತ್ತ ರಾಗಿ ಖರೀದಿ ಕೇಂದ್ರಗಳನ್ನು ತೆರೆದು ರೈತರು ಬೆಳೆದ ಎಲ್ಲಾ ಬೆಳೆಗಳನ್ನು ಪೂರ್ಣ ಪ್ರಮಾಣದಲ್ಲಿ ಖರೀದಿಸಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಸಂಪರ್ಕವನ್ನು ಸಕ್ರಮಗೊಳಿಸಲು ಅಥವಾ ಹೊಸ ವಿದ್ಯುತ್ ಸಂಪರ್ಕವನ್ನು ಪಡೆಯಲು ರೈತರೇ ವೆಚ್ಚವನ್ನು ಭರಿಸಬೇಕೆಂಬ ಸರ್ಕಾರದ ತೀರ್ಮಾನವನ್ನು ವಾಪಸ್ ಪಡೆಯಬೇಕು. ಕೇಂದ್ರ ಸರ್ಕಾರ ತರಲು ಹೊರಟಿರುವ ವಿದ್ಯುತ್ ತಿದ್ದುಪಡಿ ಕಾಯ್ದೆಯನ್ನು ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ತರಬಾರದು. ರೈತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಮತ್ತು ಜಾನುವಾರು ಹತ್ಯೆ ನಿಷೇಧ ಹಾಗೂ ಸಂರಕ್ಷಣಾ ಕಾಯ್ದೆಯನ್ನು ವಾಪಸ್ ಪಡೆಯಬೇಕು ಸೇರಿದಂತೆ ಹಲವಾರು ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಮೂರನೇ ಪುಟದಿಂದ

ನಿಂತ ಬಸವಿಯಂತಾಗಿದೆ!

ಈಗಲಾದರೂ ಬುದ್ಧಿ ಕಲಿಯಬೇಕು ಎಂದು ಅವರು ತಿಳಿಸಿದರು. ಜೆಡಿಎಸ್ ಅನ್ನು ಫ್ಯಾಮಿಲಿ ಕಂಪನಿ ಮಾಡುವುದನ್ನು ಬಿಡಬೇಕು. ಆಗ ಮಾತ್ರ ಜೆಡಿಎಸ್ ಮೂಲ ಅಸ್ತಿತ್ವ ಉಳಿಯಲು ಸಾಧ್ಯ ಎಂದ ಇಬ್ರಾಹಿಂ, ಜೆಡಿಎಸ್ ಪರಿಸ್ಥಿತಿ ಬಸ್ ನಿಲ್ದಾಣದಲ್ಲಿ ನಿಂತ ಬಸವಿ ತರಹ ಆಗಿದೆ. ಬಿಜೆಪಿ ಯನ್ನು ಲವ್ ಮಾಡಿದ್ದಾಯಿತು. ಈಗ ಅವರನ್ನು ಅಲ್ಲೇ ಬಿಡಬೇಕು ಎಂದರು.

ಚನ್ನಪಟ್ಟಣ ಉಪ ಚುನಾವಣೆ ಫಲಿತಾಂಶದಿಂದ ಪಕ್ಷದ ನಿಲುವಿನ ವಿಚಾರದಲ್ಲಿ ಜೆಡಿಎಸ್‌ನ 12ರಿಂದ 13 ಶಾಸಕರು ಬೇಸರಗೊಂಡಿದ್ದಾರೆ. ಜಿ.ಟಿ. ದೇವೇಗೌಡ ರಂತೆ ಹಲವರು ನೋವು ನುಂಗಿದ್ದಾರೆ. ಈಗ ಅವರನ್ನೆಲ್ಲಾ ಒಗ್ಗೂಡಿಸುವ ಕೆಲಸ ಆರಂಭಿಸಿದ್ದೇನೆ ಎಂದು ಇಬ್ರಾಹಿಂ ನುಡಿದರು.

ಈಗಲೂ ನಾನು ಜೆಡಿಎಸ್ ರಾಜ್ಯಾ ಧ್ಯಕ್ಷ. ನಮ್ಮ ಶಾಸಕರ ನೋವು ನಿವಾರಿಸುವ ಜವಾಬ್ದಾರಿ ನನ್ನದಾಗಿದೆ. ಮುಂದೆ ಏನಾಗುತ್ತೋ ನೋಡೋಣ. ಜೆಡಿಎಸ್ ಹೆಸರಿನಲ್ಲೇ ನಾವು ಇರಬೇಕಾ, ತೃತೀಯ ರಂಗಕ್ಕೆ ಬೇರೆ ಹೆಸರು ಕೊಡಬೇಕಾ ಎಂಬುದರ ಬಗ್ಗೆ ಮುಂದೆ ಚರ್ಚೆ ಮಾಡುತ್ತೇನೆ ಎಂದು ಅವರು ನುಡಿದರು.

ನಾನು ಜೊತೆಯಲ್ಲಿದ್ದಾಗ ಕುಮಾರ ಸ್ವಾಮಿ ಚನ್ನಪಟ್ಟಣದಲ್ಲಿ 4 ಕೋಟಿ ಖರ್ಚು ಮಾಡಿ 20 ಸಾವಿರ ಮತಗಳ ಅಂತರ ದಿಂದ ಗೆದ್ದಿದ್ದರು. ಈಗ ನಾನು ಅವರೊಂದಿಗಿಲ್ಲ. 150 ಕೋಟಿ ರೂ. ಖರ್ಚು ಮಾಡಿಯೂ 25,000 ಮತಗಳಿಂದ ಸೋತಿದ್ದಾರೆ. ಮುಸ್ಲಿಮರಿಲ್ಲದಿದ್ದರೆ ಜೆಡಿಎಸ್‌ಗೆ ಒಂದು ಸ್ಥಾನವೂ ಬರುವುದಿಲ್ಲ. ಆವತ್ತು 19 ಮಂದಿ ಗೆದ್ದಿದ್ದು ಮುಸ್ಲಿಮರಿಂದ ಎಂಬುದು ಚನ್ನಪಟ್ಟಣ ಉಪಚುನಾವಣೆಯಿಂದ ಸಾಬೀತಾಗಿದೆ ಈಗ ನಾವೇನೂ ಕಾಂಗ್ರೆಸ್ ಜೊತೆ ಹೋಗಲು ನಿರ್ಧಾರ ಮಾಡಿಲ್ಲ. ತೃತೀಯ ರಂಗ ಸ್ಥಾಪನೆ ಬಗ್ಗೆ ಮನಸ್ಸು ಮಾಡುತ್ತಿದ್ದೇವೆ ಅಷ್ಟೇ ಎಂದು ಇಬ್ರಾಹಿಂ ತಿಳಿಸಿದರು. ಕಳೆದ ಚುನಾವಣೆ ವೇಳೆ ಕಾಂಗ್ರೆಸ್‌ಗೆ ಹೋಗಿದ್ದರೆ ಜಿ.ಟಿ. ದೇವೇಗೌಡರು ಇವತ್ತು ಸಚಿವರಾಗಿರುತ್ತಿದ್ದರು. ನಾವೇ ಪಕ್ಷ ಬಲಪಡಿಸಲು ಅವರನ್ನು ಉಳಿಸಿಕೊಂಡಿದ್ದೆವು. ಈಗ ಎಲ್ಲಾ ವಿಷಯ ಗಳ ಬಗ್ಗೆ ಜಿಟಿಡಿಯೊಂದಿಗೆ ಚರ್ಚಿಸಿದ್ದೇನೆ. ಮೂಲ ಜೆಡಿಎಸ್ ನಮ್ಮದೇ. ಅದರ ಖಾತೆ, ಪಹಣಿ ಎಲ್ಲಾ ನಮ್ಮ ಹೆಸರಲ್ಲಿದೆ. ಈಗಲೂ ಹೆಚ್.ಡಿ. ದೇವೇಗೌಡರು ಬಿಜೆಪಿ ಸಹವಾಸ ಬಿಟ್ಟು ಬರಲಿ. ಜೆಡಿಎಸ್ ಅನ್ನು ಕಟ್ಟುತ್ತೇವೆ ಎಂದು ಇಬ್ರಾಹಿಂ ಇದೇ ವೇಳೆ ನುಡಿದರು.

ಮಾಜಿ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸೇರಿದಂತೆ ಹಲವು ಗಣ್ಯರು ಜಿ.ಟಿ. ದೇವೇಗೌಡರನ್ನು ಭೇಟಿ ಮಾಡಿ ಹುಟ್ಟುಹಬ್ಬದ ಶುಭ ಕೋರಿದರು.

ಮನವಿ ಮಾಡುವ ಸಾಧ್ಯತೆ

ಮುಂದಿಟ್ಟುಕೊಂಡು ತಮ್ಮ ಕುಟುಂಬದ ತೇಜೋವಧೆ ಮಾಡುತ್ತಿರುವುದಲ್ಲದೆ, ಸರ್ಕಾರ ಉರುಳಿಸಲು ಹೊರಟಿರುವ ಎನ್‌ಡಿಎ ಮೈತ್ರಿ ಪಕ್ಷಗಳಿಗೆ ಈ ಸಮಾವೇಶಗಳಲ್ಲಿ ಎಚ್ಚರಿಕೆ ನೀಡುವುದೂ ಸೇರಿದೆ. ಉಪಚುನಾವಣೆಯಲ್ಲಿ ಸರ್ಕಾರಕ್ಕೆ ಜನರ ಬೆಂಬಲ ದೊರೆತಿರುವುದರಿಂದ ಮುಖ್ಯಮಂತ್ರಿ ಅವರು ಇದೀಗ ಸಾರ್ವಜನಿಕವಾಗಿ ಹೋರಾಟಕ್ಕಿಳಿಯುತ್ತಿದ್ದಾರೆ.

ಹೋರಾಟ ಆರಂಭ

ಮುಸ್ಲಿಮರ ಕೈಯಲ್ಲೇ ಎಲ್ಲಾ ಅಧಿಕಾರ ಇದ್ದರೆ ಹಿಂದುಗಳಿಗೆ ನ್ಯಾಯ ಸಿಗುತ್ತಾ, ವಕ್ಫ್ ವಿರುದ್ಧ ಹೋರಾಟ ಮಾಡಬೇಕಾದರೆ ತಹ ಶೀಲ್ದಾರ್, ಎಸಿ, ಡಿಸಿ, ಕೋರ್ಟ್, ಹೈಕೋರ್ಟ್, ಸುಪ್ರೀಂ ಕೋರ್ಟ್ ಯಾವುದು ನಡೆಯಲ್ಲ. ವಕ್ಫ್ ಬೋರ್ಡ್‌ನಲ್ಲಿಯೇ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ವಕ್ಫ್ ಬೋರ್ಡ್ ಸಿಇಓ, ಅಧ್ಯಕ್ಷರು ಮುಸ್ಲಿಂಮರು. ಹೀಗಿರುವಾಗ ವಕ್ಫ್ ಬೋರ್ಡ್‌ಗೆ ಹೋದರೆ ಹಿಂದೂಗಳಿಗೆ ನ್ಯಾಯ ಸಿಗುತ್ತದಾ ಎಂದು ಪ್ರಶ್ನಿಸಿದರು.

ವಕ್ಫ್ ಬೋರ್ಡ್ ಕಾನೂನು ತಿದ್ದುಪಡಿ ಮಾಡಲು ಬಿಜೆಪಿ ಹೊರಟಿದೆ, ಆದರೆ ಅದಕ್ಕೆ ಕಾಂಗ್ರೆಸ್ ಸಂಸದರು ವಿರೋಧ ಮಾಡುತ್ತಿದ್ದಾರೆ. ಕಾಂಗ್ರೆಸ್ ಸಂಸದರು ಇರುವ ಕಡೆ, ಎಲ್ಲಾ ಜನರು ವಕ್ಫ್ ತಿದ್ದುಪಡಿ ಮಸೂದೆಗೆ ಯಾಕೆ ವಿರೋಧ ಮಾಡುತ್ತಿದ್ದೀರಿ ಎಂದು ಪ್ರಶ್ನೆ ಮಾಡಿ ಎಂದು ಹೇಳಿದರು.

ನಮ್ಮ ರಾಜ್ಯದಲ್ಲಿ ಅನ್ವರ್ ಮಾಣಿಪ್ಪಾಡಿ ಅವರು ವಕ್ಫ್ ಬಗ್ಗೆ ವರದಿ ನೀಡಿದ್ದಾರೆ. ಅವರ ವರದಿ ಪ್ರಕಾರ ಕಾಗ್ರೆಸ್ಸಿಗರು ಸಾವಿರಾರು ಕೋಟಿ ಆಸ್ತಿ ನುಂಗಿ ನೀರು ಕುಡಿದಿದ್ದಾರೆ ಎಂದು ಹೇಳಲಾಗಿದೆ ಎಂದು ಕಿಡಿಕಾರಿದ್ದಾರೆ.

ಜಾಯಿಂಟ್ ಪಾರ್ಲಿಮೆಂಟರಿ ಬೋರ್ಡ್‌ನಲ್ಲಿ 32 ಸಾವಿರ ಕೋಟಿ ಎಕರೆ ವಕ್ಫ್ ಭೂಮಿ ಇದೆ ಎಂದು ಹೇಳುತ್ತಾರೆ. ಅವರು ರಾಜ್ಯಗಳನ್ನೇ ವಕ್ಫ್ ಮಾಡಲು ಹೊರಟಿದ್ದಾರೆ. ವಕ್ಫ್ ಹೆಸರೇಳಿ ಗುಡಿ, ಮಠ, ಮಂದಿರಗಳನ್ನೇ ಗುಡಿಸಿ ಗುಂಡಾಂತರ ಮಾಡಲು ಹೊರಟಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಆರು ಸಾವಿರ ಎಕರೆ ವಕ್ಫ್ ಆಸ್ತಿ ಇದೆ ಎಂದು ಮಾಡಿದ್ದಾರೆ. ಇನ್ನು ಬೀದರ್ ಜಿಲ್ಲೆಯಲ್ಲಿ ಹಳ್ಳಿಯನ್ನೇ ವಕ್ಫ್ ಮಾಡಿದ್ದಾರೆ. ಆದ್ದರಿಂದ ವಕ್ಫ್ ಟ್ರಿಬ್ಯುನಲ್ ಅನ್ನೇ ವಜಾ ಮಾಡಬೇಕು ಎಂದು ಅವರು ಗುಡುಗಿದ್ದಾರೆ. ನಾವು ಡಿಸಿಗೆ, ತಹಸೀಲ್ದಾರ್‌ಗೆ ಮನವಿ ಕೊಡೋದಕ್ಕೆ ಬಂದಿಲ್ಲ. ಪಾರ್ಲಿಮೆಂಟರಿ ಬೋರ್ಡಿಗೆ ಸಲಹೆ ಕೊಡಲು ಬಂದಿದ್ದೇವೆ. ವಕ್ಫ್ ಕಾನೂನೇ ರದ್ದಾಗಬೇಕು ಅನ್ನೋದೆ ನಮ್ಮ ಡಿಮ್ಯಾಂಡ್. ಎಲ್ಲೆಲ್ಲೋ ಕೂತು ಯಾರ್‍ಯಾರೋ ಹೇಳ್ತಾರೆ, ವಿಧಾನಸೌಧ, ಪಾರ್ಲಿಮೆಂಟ್, ಪೊಲೀಸ್ ಸ್ಟೇಷನ್, ಸರ್ಕಾರದ ಜಮೀನು ಎಲ್ಲಾ ವಕ್ಫ್ ಅಂತಾರೆ. ಈ ಸಂಬಂಧ ನಾವು ದೊಡ್ಡ ಹೋರಾಟ ಮಾಡೋಣ ಎಂದು ಶಾಸಕ ಯತ್ನಾಳ್ ಕರೆ ನೀಡಿದರು.

ಈ ನಡುವೇ ಬೀದರ್ ತಾಲೂಕಿನ ಧರ್ಮಾಪುರ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಬೆಂಬಲಿಗರು ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬೆಂಬಲಿಗರ ಮಧ್ಯೆ ಗಲಾಟೆ ನಡೆದಿದೆ. ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರ ಬೆಂಬಲಿಗರು ಮಾತನಾಡಿ, ಶಾಸಕ ಯತ್ನಾಳ್ ನೇತೃತ್ವದ ಬಿಜೆಪಿ ನಾಯಕರ ತಂಡ ವಕ್ಫ್ ವಿರುದ್ಧ ಹೋರಾಟ ನಡೆಸುತ್ತಿರುವುದಕ್ಕೆ ನಮ್ಮ ಬೆಂಬಲವಿದೆ, ಆದರೆ, ಸ್ಥಳೀಯ ಶಾಸಕ ಸೇರಿದಂತೆ ಮುಖಂಡರು, ಕಾರ್ಯಕರ್ತರಿಗೆ ಮಾಹಿತಿ ನೀಡದೆ ಹೋರಾಟ ಮಾಡಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ಪೊಲೀಸರಿಗೆ ದೂರು

ಯಾವುದೇ ಮಾಹಿತಿ ನೀಡದೇ ಬಿಜೆಪಿ ಚಿಹ್ನೆ ಬಳಸಿಕೊಂಡಿದ್ದಾರೆ. ನಗರದಲ್ಲಿ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಹಾಕಲು ನಗರ ಸಭೆಯಿಂದ ಅನುಮತಿ ನೀಡದೇ ಇದ್ದರೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ದೂರಿನಲ್ಲಿ ಮನವಿ ಮಾಡಲಾಗಿದೆ. ಇತ್ತ ಯತ್ನಾಳ್ ವಿರುದ್ಧದ ಪೊಲೀಸ್ ದೂರನ್ನು ಪಕ್ಷವೂ ಸಮರ್ಥಿಸಿಕೊಂಡಿದೆ. ಜತೆಗೆ ಯತ್ನಾಳ್ ಅಂಡ್ ಟೀಮ್ ವಿರುದ್ಧ ಬಿಜೆಪಿ ಪಕ್ಷದಿಂದಲೂ ಕ್ರಮಕ್ಕೆ ಕೋರಿ ರಾಷ್ಟ್ರೀಯ ಬಿಜೆಪಿಗೆ ದೂರು ಕೊಡಲು ನಿರ್ಧರಿಸಲಾಗಿದೆ. ಈ ಸಂಬಂಧ ಇಂದು ಮಾತಾಡಿದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ ರಾಜೀವ್, ಯತ್ನಾಳ್ ತಂಡದ ವಕ್ಫ್ ವಿರುದ್ಧ ಹೋರಾಟಕ್ಕೆ ಕೇಂದ್ರದ ಬಿಜೆಪಿ ಹಾಗೂ ರಾಜ್ಯದ ಬಿಜೆಪಿಗೆ ಸಂಬಂಧವಿಲ್ಲ. ಇದು ಪಕ್ಷ ವಿರೋಧಿ ನಡೆ, ಪಕ್ಷದ ಶಿಸ್ತು ಉಲ್ಲಂಘನೆ. ಬೀದರ್‌ನಲ್ಲಿ ದೂರು ದಾಖಲಾಗಿರುವುದು ಸರಿಯಿದೆ. ರಾಷ್ಟ್ರೀಯ ಬಿಜೆಪಿಗೂ ಯತ್ನಾಳ್ ತಂಡದ ವಿರುದ್ಧ ವರದಿ ಕಳಿಸಲಾಗುತ್ತದೆ ಎಂದರು.

ಬಿಜೆಪಿ ಚಿಹ್ನೆಯಡಿಯಲ್ಲಿ ಯತ್ನಾಳ್ ಟೀಂ ಜನಜಾಗೃತಿ ಹೋರಾಟದ ಬ್ಯಾನರ್‌ನಲ್ಲೇ ರಾಜ್ಯ ನಾಯಕರ ಫೋಟೋಗೆ ಕೊಕ್ ಕೊಡಲಾಗಿದೆ. ಕೇಂದ್ರ ನಾಯಕರ ಫೋಟೋ ಬಳಸಿಕೊಂಡು ಬೀದರ್‌ನಿಂದ ಹೋರಾಟದ ಅಖಾಡಕ್ಕೆ ಯತ್ನಾಳ್ ತಂಡ ಎಂಟ್ರಿಯಾಗಿದೆ. ಯತ್ನಾಳ್ ತಂಡದ ಈ ವಕ್ಫ್ ವಿರೋಧಿ ಹೋರಾಟಕ್ಕೆ ಬೀದರ್‌ನ ವಿಜಯೇಂದ್ರ ತಂಡದ ನಾಲ್ವರು ಬಿಜೆಪಿ ಶಾಸಕರು ಗೈರಾಗುವ ಮೂಲಕ ಟಕ್ಕರ್ ಕೊಟ್ಟಿದ್ದಾರೆ.

ಜೆಡಿಎಸ್ ಕಾರ್ಯಕರ್ತರಿಗೂ ಅರಿವಾಗಿದೆ

ನಾನು ಅದನ್ನು ಪರಿಶೀಲಿಸಿದಾಗ 2020ರಲ್ಲಿ ಅವರ ಪಹಣಿ ತಿದ್ದುಪಡಿಯಾಗಿದೆ, ಈಗ ಅದನ್ನು ಮನೆ ಮನೆಗೆ ತೋರಿಸುತ್ತಿದ್ದಾರೆ. ಬಿಜೆಪಿಯವರು ತಮ್ಮ ಆಂತರಿಕ ಹುಳುಕು ಮುಚ್ಚಿಕೊಳ್ಳಲು ಈ ವಿಚಾರವಾಗಿ ಹೋರಾಟ ಮಾಡುತ್ತಿದ್ದಾರೆ. ಜನ ಅವರಿಗೆ ತಕ್ಕಪಾಠ ಕಲಿಸಿದ್ದಾರೆ.

ಬಿಜೆಪಿಯಲ್ಲಿ ಬಣ ರಾಜಕೀಯ ಹೆಚ್ಚಾಗಿದ್ದು, ಅವರವರೇ ಪರಸ್ಪರ ದೂರು ನೀಡುತ್ತಿದ್ದಾರೆ. ಅವರೇ ಈ ಬಗ್ಗೆ ತೀರ್ಮಾನ ಮಾಡಿಕೊಳ್ಳಬೇಕು. ಅವರ ಪಕ್ಷದಲ್ಲಿ ಎಷ್ಟೇ ಗುಂಪಿದ್ದರೂ ನಮ್ಮ ಲೆಕ್ಕಕ್ಕೆ ಅವರು ಒಂದೇ ಗುಂಪು. ಜೆಡಿಎಸ್ ಚಿಹ್ನೆ ಬೇರೆಯಾದರೂ ಅವರೂ ಅದೇ ಗುಂಪು. ಜೆಡಿಎಸ್ ಅವರು ಕೂಡ ಅದೇ ಪ್ರಯತ್ನದಲ್ಲಿದ್ದಾರೆ, ಅವರು ಹೋರಾಟ ಮಾಡಿ ನಮಗೆ ಪ್ರಚಾರ ನೀಡುತ್ತಿದ್ದಾರೆ. ಕುಮಾರಸ್ವಾಮಿ ಬಿಜೆಪಿಯವರ ಜತೆ ಸೇರಿದರೆ ಮುಸಲ್ಮಾನರು ಹೇಗೆ ಮತ ಹಾಕುತ್ತಾರೆ. ಮುಸಲ್ಮಾನರನ್ನು ಎನ್‌ಡಿಎ ಮೈತ್ರಿಕೂಟ ವಿಶ್ವಾಸಕ್ಕೆ ಪಡೆದಿಲ್ಲ. ಎನ್‌ಡಿಎ ವತಿಯಿಂದ ಮುಸಲ್ಮಾನರಿಗೆ ಟಿಕೆಟ್ ನೀಡಿದ್ದಾರಾ, ಮಂತ್ರಿ ಮಾಡಿದ್ದಾರಾ, ಅವರಿಗಾಗಿ ಕಾರ್ಯಕ್ರಮ ಕೊಟ್ಟಿದ್ದಾರಾ, ಅವರಿಗಿದ್ದ 4% ಮೀಸಲಾತಿ ಕಿತ್ತುಕೊಂಡಿದ್ದೀರಿ. ನಿಮಗೆ ಅವರ ಮತ ಕೇಳುವ ನೈತಿಕತೆಯೇ ಇಲ್ಲ, ನಿಖಿಲ್ ಪಾಪ ಚಿಕ್ಕ ಹುಡುಗ, ಅವನ ಅನುಭವದ ಬಗ್ಗೆ ನಾನು ಮಾತನಾಡುವುದಿಲ್ಲ. ಈ ವಿಚಾರವಾಗಿ ದೊಡ್ಡ ಗೌಡರು ಮಾತನಾಡಬೇಕು ಎಂದರು.

ಜೆಡಿಎಸ್ ತಮ್ಮ ಪರಿಸ್ಥಿತಿ ಬಗ್ಗೆ ನೋಡಿಕೊಳ್ಳಲಿ, ನಾನು ಇಲ್ಲವಾದರೂ ಕಾಂಗ್ರೆಸ್‌ಗೆ ಏನೂ ಆಗುವುದಿಲ್ಲ. ಯಾರೇ ಹೋದರೂ ಕಾಂಗ್ರೆಸ್ ಪಕ್ಷಕ್ಕೆ ಏನೂ ಆಗುವುದಿಲ್ಲ. ಕಾಂಗ್ರೆಸ್ ಹೈಕಮಾಂಡ್ ಅನುಮತಿ ಕೊಟ್ಟರೆ ಒಂದು ತಿಂಗಳಲ್ಲಿ ಜೆಡಿಎಸ್ ಶಾಸಕರನ್ನು ಕರೆ ತರುತ್ತೇನೆ ಎಂಬ ಯೋಗೇಶ್ವರ್ ಅವರ ಹೇಳಿಕೆ ವಿಚಾರ ಗೊತ್ತಿಲ್ಲ ಎಂದರು.

ಜಿಟಿಡಿ ನೊಂದಿದ್ದಾರೆ: ಜಿ.ಟಿ. ದೇವೇಗೌಡ ಹಿರಿಯ ನಾಯಕರು, ಅವರ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾಗಿದ್ದಾರೆ. ಅವರು ಜೆಡಿಎಸ್ ಪಕ್ಷಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ನಾವು ಈ ಹಿಂದೆ ಕಾಂಗ್ರೆಸ್ ಪಕ್ಷಕ್ಕೆ ಬನ್ನಿ ಎಂದು ಆಹ್ವಾನ ನೀಡಿದ್ದೆವು. ಆದರೆ ಅವರು ಕುಮಾರಣ್ಣ ಅವರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ನಮ್ಮ ಆಹ್ವಾನ ತಿರಸ್ಕರಿಸಿದರು. ಈಗ ಅವರನ್ನು ನಡೆಸಿಕೊಳ್ಳುತ್ತಿರುವ ರೀತಿಗೆ ಅವರು ನೊಂದಿದ್ದಾರೆ. ಜೆಡಿಎಸ್ ನೊಂದ ಶಾಸಕರು ಕಾಂಗ್ರೆಸ್ ಸೇರುವ ವಿಚಾರವಾಗಿ ನನ್ನ ಬಳಿ ಯಾರೂ ಚರ್ಚೆ ಮಾಡಿಲ್ಲ ಎಂದರು.

ಮುಡಾ ಫೈಲ್ ಎಲ್ಲೂ ಹೋಗಿಲ್ಲ: ಮುಡಾ ಪ್ರಕರಣದ 144 ಫೈಲ್‌ಗಳು ಪತ್ತೆಯಾಗಿಲ್ಲ ಎಂಬ ಲೋಕಾಯುಕ್ತ ಹೇಳಿಕೆ ವಿಚಾರ ಗೊತ್ತಿಲ್ಲ. ಆ ರೀತಿ ಫೈಲ್‌ಗಳನ್ನು ಯಾರು ಎತ್ತಿಕೊಂಡು ಹೋಗಲು ಸಾಧ್ಯ, ಕಚೇರಿಯಲ್ಲೇ ಇರುತ್ತವೆ ಅಥವಾ ಯಾರಾದರೂ ಸರ್ಕಾರಕ್ಕೆ ಅದನ್ನು ತೋರಿಸಲು ತೆಗೆದುಕೊಂಡು ಹೋಗಿರುತ್ತಾರೆ. ನನ್ನ ಪ್ರಕಾರ ಪ್ರತಿ ಫೈಲ್‌ಗಳ ಚಲನವಲನಗಳ ಮೇಲೂ ನಿಗಾ ಇಡಲಾಗುವುದು. ಹೀಗಾಗಿ ಈ ರೀತಿ ನಡೆದಿರುವ ಸಾಧ್ಯತೆ ಇಲ್ಲ ಎಂದರು.

ವರದಿ ಸಲ್ಲಿಸುತ್ತೇವೆ

ಅರ್ಜಿ ವಿಚಾರಣೆ ಸಂಬಂಧ ದೂರುದಾರ ಸ್ನೇಹಮಯಿ ಕೃಷ್ಣ ಪ್ರತಿಕ್ರಿಯಿಸಿ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ತೀರ್ಪು ನೀಡುವಂತೆ ನ್ಯಾಯಾಲಯವನ್ನು ಕೋರಲಾಗುವುದು. ಲೋಕಾಯುಕ್ತ ವರದಿ ಸಲ್ಲಿಕೆಗೆ ಮತ್ತೊಂದು ಅವಕಾಶ ನೀಡಿ ವಿಚಾರಣೆಯನ್ನು ಮುಂದೂಡಿದರೆ ಮತ್ತಷ್ಟು ಸಾಕ್ಷ್ಯ ನಾಶ ಮಾಡಬಹುದು ಎಂಬ ವಿಚಾರವನ್ನು ನ್ಯಾಯಾಲಯದ ಗಮನಕ್ಕೆ ತರುತ್ತೇವೆ. ಈವರೆಗೆ ತನಿಖಾ ವರದಿಯನ್ನಷ್ಟೇ ನ್ಯಾಯಾಲಯ ಕೇಳಿದೆ. ಆದರೆ ಲೋಕಾಯುಕ್ತರು ಮತ್ತೆ ಸಮಯಾವಕಾಶ ಕೋರಿದರೆ ಅದು ಉದ್ದೇಶಪೂರ್ವಕವಾಗುತ್ತದೆ. ಇಂದೇ ತೀರ್ಪು ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳುತ್ತೇವೆ ಎಂದರು.

ಅಕ್ರಮ, ಅಪರಾಧ: ಮೈಸೂರಿನ ಕೆಸರೆ ಸರ್ವೆ ನಂಬರ್ 464ರ 3.16 ಎಕರೆಯ ಪರಿಹಾರದ ಹಣ ನೀಡಿಲ್ಲವೆಂದು ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರು 14 ನಿವೇಶನ ಪಡೆದಿರುವುದು ಅಕ್ರಮ ಹಾಗೂ ಅಪರಾಧ. ಕೆಸರೆ ಜಮೀನು ಭೂಸ್ವಾಧೀನವಾದ ಮೇಲೆ ಫೆಬ್ರವರಿ 15, 1999 ರಂದು ಮುಡಾ ವೈಯಕ್ತಿಕ ಅವಾರ್ಡ್ ಆದೇಶ ಘೋಷಣೆ ಮಾಡಿ ಪರಿಹಾರದ ಹಣವನ್ನು ನ್ಯಾಯಾಲಯದ ಠೇವಣಿಯಲ್ಲಿ ಇರಿಸಿದೆ. ಹೈಕೋರ್ಟ್‌ಗೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಈ ವಿಚಾರವನ್ನು ಉಲ್ಲೇಖಿಸಲಾಗಿದೆ ಎಂದು ತಿಳಿಸಿದರು.

ಸಚಿವರು ಕೊಂಡೊಯ್ದಿದ್ದಾರೆ: ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದ ಬಗ್ಗೆ ದಾಖಲಾತಿ ಪರಿಶೀಲನೆ ನಡೆಸಲು ಸರ್ಚ್ ವಾರೆಂಟ್ ಪಡೆದಿರುವ ವಿಚಾರವನ್ನು ಲೋಕಾಯುಕ್ತರು ತಿಳಿಸಿದ್ದರಿಂದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮೈಸೂರಿಗೆ ದೌಡಾಯಿಸಿ, ಮುಡಾದಲ್ಲಿದ್ದ ಕಡತಗಳನ್ನು ಕೊಂಡೊಯ್ದಿದ್ದಾರೆ. ಜೂ.28ರಂದು ಲೋಕಾಯುಕ್ತರು ಸರ್ಚ್ ವಾರೆಂಟ್‌ಗೆ ಆದೇಶ ಮಾಡಿದ್ದು, ಮರುದಿನ ಮೈಸೂರು ಲೋಕಾಯುಕ್ತ ಎಸ್ಪಿಗೆ ತಲುಪಿದೆ. ಜೂ.30 ಭಾನುವಾರವಾದ ಕಾರಣ ಜುಲೈ 1 ರಂದು ದಿಢೀರ್ ಮೈಸೂರಿಗೆ ಬಂದ ಭೈರತಿ ಸುರೇಶ್, ಮುಡಾದಲ್ಲಿದ್ದ ಕಡತಗಳನ್ನು ಹೆಲಿಕಾಪ್ಟರ್‌ನಲ್ಲಿ ಕೊಂಡೊಯ್ದಿದ್ದಾರೆ. ಈ ಕಾರಣಗಳನ್ನು ಇಟ್ಟುಕೊಂಡು ಲೋಕಾಯುಕ್ತರು ತನಿಖೆ ನಡೆಸದೆ ಪ್ರಕರಣ ಮುಕ್ತಾಯ ಮಾಡಿದ್ದಾರೆ. ಇದನ್ನೆಲ್ಲಾ ಗಮನಿಸಿದಾಗ ಲೋಕಾಯುಕ್ತ ಸಂಸ್ಥೆ ಮೇಲೆ ಅನುಮಾನ ಬರುತ್ತದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ನಾನೇನು ತಪ್ಪು ಮಾಡಿಲ್ಲ, ಐ ಡೋಂಟ್ ಕೇರ್



ಸುರೇಶ್

ಬೆಂಗಳೂರು: ಲೋಕಾಯುಕ್ತ ಸರ್ಚ್ ವಾರಂಟ್ ವಿಚಾರದಲ್ಲಿ ನಾನೇನು ತಪ್ಪು ಮಾಡಿಲ್ಲ. ಐ ಡೋಂಟ್ ಕೇರ್ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದ್ದಾರೆ. ಮುಡಾ ವಿಚಾರವಾಗಿ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸರ್ಚ್ ವಾರಂಟ್ ಕೊಟ್ಟವರು ಯಾರು? ದಾಳಿ ಮಾಡಬೇಡಿ ಎಂದು ಲೋಕಾಯುಕ್ತವನ್ನು ತಡೆದವರು ಯಾರು? ಲೋಕಾಯುಕ್ತ ಮೇಲೆ ಯಾರಾದರೂ ಪ್ರೆಷರ್ ಹಾಕಲು ಆಗುತ್ತಾ? ಸಿಎಂಗೆ ಲೋಕಾಯುಕ್ತ ನೋಟಿಸ್ ಕೊಟ್ಟಿಲ್ವಾ? ಸಿಎಂ ಪತ್ನಿ ಪಾರ್ವತಿಗೆ, ಬಾಮೈದನಿಗೆ, ಅಧಿಕಾರಿಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಿಲ್ವಾ? ಏನು ನಡೆಯುತ್ತಿದೆ ನನಗೆ ಅರ್ಥವಾಗುತ್ತಿಲ್ಲ ಎಂದರು.

ನಮ್ಮ ಕೆಳಗಡೆ ಲೋಕಾಯುಕ್ತ ಇದೆಯಾ. ಯಾವ ಐಎಎಸ್ ಅಧಿಕಾರಿ ಯಾಕೆ ಫೈಲ್ ತೆಗೆದುಕೊಂಡು ಹೋಗಿದ್ದಾರೆ. ಅದಕ್ಕೇನಾದರೂ ಸಾಕ್ಷಿ ಇದೆಯಾ. ಲೋಕಾಯುಕ್ತ ಸರಿಯಾಗಿ ಕೆಲಸ ಮಾಡಿಲ್ಲ ಅಂದರೆ ಅವರನ್ನು ಹೋಗಿ ಕೇಳಲಿ. ದಿನ ಬೆಳಗಾದರೆ ತನಿಖೆಯೊಳಗೆ ಮೂಗು ತೂರಿಸೋದು ಸರಿಯಾ? ನಮ್ಮದೇ ಅಧಿಕಾರಿ ಮೇಲೆ ನಂಬಿಕೆ ಇಲ್ಲ ಅಂದರೆ ಇನ್ಯಾರಿಂದ ತನಿಖೆ ಮಾಡಿಸಬೇಕು. ನಾನೇನು ತಪ್ಪು ಮಾಡಿಲ್ಲ, ಐ ಡೋಂಟ್ ಕೇರ್. ಲೋಕಾಯುಕ್ತವೇ ಸರಿ ಇಲ್ಲ ಅಂದರೆ ತನಿಖೆ ಯಾರಿಗೆ ಕೊಡೋಣ. ಇದು ಕೊನೆ ಇಲ್ಲದ ಪ್ರಶ್ನೆ. ದೂರುದಾರರೇ ಎಲ್ಲವನ್ನೂ ಊಹೆ ಮಾಡಿಕೊಂಡು ಮಾತನಾಡಿದರೆ ಹೇಗೆ ಎಂದು ಪ್ರಶ್ನಿಸಿದರು.

ಲೋಕಾಯುಕ್ತಕ್ಕೆ ಅವರದ್ದೇ ಆದ ನಿಯಮವಿದೆ. ಯಾರಿಗೆ ಶಿಕ್ಷೆ ಕೊಡಬೇಕು ಎಂಬುದು ಅವರಿಗೆ ಗೊತ್ತಿದೆ. ಹಿಂದೆ ಮಾಜಿ ಸಿಎಂ ಅವರನ್ನು ಜೈಲಿಗೆ ಕಳಹಿಸಿದ್ದು ಅದೇ ಲೋಕಾಯುಕ್ತ ಅಲ್ವಾ? ದೂರುದಾರ ಅನುಮಾನಪಟ್ಟರೆ ಅವರು ಪಕ್ಷಪಾತಿಯಾಗಿದ್ದಾರೆ ಎಂದು ಅರ್ಥ. ಇದರಲ್ಲಿ ನನ್ನ ಹೆಸರು ಯಾಕೆ ಬರುತ್ತದೆ. ನಾನು ಮುಡಾ ಸಚಿವ. ನಮ್ಮ ಇಲಾಖೆಯ ನಮ್ಮ ಕಚೇರಿಗೆ ಹೋಗಲು ಯಾರದ್ದೋ ಅನುಮತಿ ತೆಗೆದುಕೊಂಡು ಹೋಗಬೇಕಾ? ಮುಡಾದಲ್ಲಿ ಏನೋ ಆಯ್ತು ಎಂದು ದೊಡ್ಡ ಸೀನ್ ಆಯಿತು. ಅದಕ್ಕಾಗಿ ನಾನು ಮುಡಾ ಕಚೇರಿಗೆ ಹೋದೆ. ನಾನು ನನ್ನ ಕಚೇರಿಗೆ ಹೋಗಲು ನನಗೆ ಯೋಗ್ಯತೆ ಇಲ್ವಾ. ಯಾರನ್ನೋ ಕೇಳಿಕೊಂಡು ಹೋಗಬೇಕಾ. ಸುಮ್ಮನೆ ನಮ್ಮ ಮೇಲೆ ಆರೋಪ ಮಾಡಿದರೆ ನಮಗೂ ಉತ್ತರ ಕೊಡಲು ಬರುತ್ತದೆ. ಅದು ಯಾರೇ ಆಗಿರಲಿ ನನಗೂ ಸ್ವಾಭಿಮಾನ ಇದೆ. ಐ ಡೋಂಟ್ ಕೇರ್ ಎಂದು ಹರಿಹಾಯ್ದರು. ಅಕ್ರಮ ಆಗಿದೆ ಎಂದು ಅಧಿಕಾರಿಯನ್ನು ವಿಚಾರಣೆಗೆ ಒಳಪಡಿಸಿದ್ದು ನನ್ನ ತಪ್ಪಾ. ಯಾರನ್ನು ಕೇಳಿ ಮಾಡಬೇಕಿತ್ತು. ನಾನು 2021ರಲ್ಲಿ ಮಂತ್ರಿಯೇ ಅಲ್ಲ. ಕೆಲವರು ಪ್ರೆಸ್ ಮುಂದೆ ದೊಡ್ಡದಾಗಿ ಹೀರೋ ತರಹ ಬಿಲ್ಡಪ್ ಕೊಡುತ್ತಿದ್ದಾರೆ. ಅವರು ಹೋಗಿ ಲೋಕಾಯುಕ್ತ ಮುಖ್ಯಸ್ಥರ ಮುಂದೆ ದೂರು ಕೊಡಲಿ. ಅವರಿಗೆ ಏನು ಮಾಡಬೇಕೋ ಲೋಕಾಯುಕ್ತದವರೇ ಮಾಡುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಮಹಾರಾಣಿ ಕಾಲೇಜಲ್ಲಿ ಪುಸ್ತಕ ಪ್ರದರ್ಶನ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನಲ್ಲಿ ಪುಸ್ತಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು, ನ.25(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಸೋಮವಾರ ಪುಸ್ತಕ ಪ್ರದರ್ಶನ ಆಯೋಜಿಸಲಾಗಿತ್ತು. ಕಾಲೇಜಿನ ಪ್ರಾಂಶುಪಾಲ ಡಾ.ಅಬ್ದುಲ್ ರಹಿಮಾನ್ ಮತ್ತು ಅಧ್ಯಾಪಕರು ವಿದ್ಯಾರ್ಥಿಗಳ ಎದುರು ಕೆಲವು ಪುಸ್ತಕಗಳ ಆಯ್ದ ಭಾಗವನ್ನು ಓದಿದರು. ಪುಸ್ತಕಗಳನ್ನು ಓದುವುದರಿಂದ ಜ್ಞಾನವೃದ್ಧಿಯ ಜೊತೆಗೆ ಉತ್ತಮ ಭವಿಷ್ಯಕ್ಕೆ ಬುನಾದಿಯಾಗಲಿದೆ ಎಂದು ಕಿವಿಮಾತು ಹೇಳಿದರು.ಈ ವೇಳೆ ಗ್ರಂಥಪಾಲ ಹೆಚ್.ಎಲ್.ಜಯಪ್ರಕಾಶ್, ಐಕ್ಯೂಎಸಿ ಸಂಚಾಲಕ ಡಾ.ವಿ.ನಂದಕುಮಾರ್, ಅಧ್ಯಾಪಕರಾದ ಡಾ.ಪರಶುರಾಮ್ ಮೂರ್ತಿ, ಡಾ.ತೋಯಜಾಕ್ಷ, ಡಾ.ರಾಮಚಂದ್ರ, ಡಾ.ರಮೇಶ್‌ಬಾಬು, ಡಾ.ರಮೇಶ್, ಡಾ.ಮಾದೇಸ್ವಾಮಿ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರಲ್ಲಿ ಎನ್‌ಸಿಸಿ ಮಹತ್ವ ಸಾರಿದ ಕೆಡೆಟ್‌ಗಳ ಬೈಕ್ ರ್‍ಯಾಲಿ

ಮೈಸೂರು, ನ.25(ಜಿಎ)– 76ನೇ ಎನ್‌ಸಿಸಿ ದಿನಾಚರಣೆ ಅಂಗವಾಗಿ ಮೈಸೂರು ಎನ್‌ಸಿಸಿ 4 ಕೆಎಆರ್–ಏರ್ ಸ್ಕ್ವಾಡ್ರನ್ ಅಲುಮ್ನಿ ಸಂಘದ ವತಿಯಿಂದ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ ಎನ್‌ಸಿಸಿ ಕೆಡೆಟ್‌ಗಳು ಎನ್‌ಸಿಸಿ ಮಹತ್ವ ಬಗ್ಗೆ ಸಾರಿದರು.

ಮೈಸೂರಿನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಸಂಚಾರ ಪೊಲೀಸ್ ವಿಭಾಗದ ಸಹಾಯಕ ಆಯುಕ್ತ ಪರಶುರಾಮಪ್ಪ ಚಾಲನೆ ನೀಡಿದರು. ಎನ್‌ಸಿಸಿ ವಿದ್ಯಾರ್ಥಿಗಳು ಎಂದಿನಂತೆ ಶಿಸ್ತಿನ ಸಿಪಾಯಿಗಳಂತೆ ಸಮವಸ್ತ್ರ ಧರಿಸಿ ಹೆಲ್ಮೆಟ್ ಹಾಕಿಕೊಂಡು ಕೈಯ್ಯಲ್ಲಿ ತ್ರಿವರ್ಣ ಧ್ವಜದ ಬಾವುಟ ಹಿಡಿದು ಎನ್‌ಸಿಸಿಗೆ ಜೈಕಾರ ಕೂಗಿದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾದ ರ್‍ಯಾಲಿಯು 10ನೇ ಜಯಚಾಮರಾಜೇಂದ್ರ ಒಡೆಯರ್ ವೃತ್ತದ ಮೂಲಕ ಸಾಗಿ ಹಾರ್ಡಿಂಜ್ ವೃತ್ತ, ಶಿವರಾತ್ರಿ ರಾಜೇಂದ್ರ ವೃತ್ತ, ಚಾಮರಾಜ ಜೋಡಿ ರಸ್ತೆ ಮೂಲಕ ರಾಮಸ್ವಾಮಿ ವೃತ್ತ ತಲುಪಿ, ಮುಡಾ ಕಚೇರಿ ಮುಂಭಾಗ ಸಾಗಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪುತ್ಥಳಿಗೆ ನಮನ ಸಲ್ಲಿಸಿ, ನಂತರ ನಗರ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮ ಸೇರಿಕೊಂಡಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರು ಎನ್‌ಸಿಸಿ ಗ್ರೂಪ್ ಕಮಾಂಡರ್ ರೋಹಿತ್ ಠಾಕೂರ್, ಭೌಗೋಳಿಕ ರಾಜಕಾರಣದಲ್ಲಿ ಮಿಲಿಟರಿ ಶಕ್ತಿ ಅತ್ಯಂತ ಅಗತ್ಯ. ಸಮಾಜದ ಉಳಿದೆಲ್ಲ ವೃತ್ತಿಗಿಂತ ಯೋಧರ ಅಗತ್ಯತೆ ಒಂದು ಹೆಜ್ಜೆ ಮುಂದಿದ್ದು, ನಮ್ಮ ಸಾಂಸ್ಕೃತಿಕ ವೈಭವ, ಆರ್ಥಿಕತೆಯ ರಕ್ಷಣೆಗೆ ಅವರು ಬೇಕು. ಅಂಥ ಯೋಧರ ಸೃಷ್ಟಿಯಲ್ಲಿ ಎನ್‌ಸಿಸಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಚೀನಾ, ಅಮೆರಿಕಾ ಉತ್ತಮ ಯುದ್ಧ ಶಸ್ತ್ರಾಸ್ತ್ರಗಳ ಜೊತೆಗೆ ತಾಂತ್ರಿಕವಾಗಿ ಸೇನಾ ಮುನ್ನಡೆ ಸಾಧಿಸುತ್ತಿವೆ. ಮತ್ತೊಂದೆಡೆ ರಷ್ಯಾದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ದಕ್ಷಿಣ ಕೊರಿಯಾ ಸಹಾಯ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಎನ್‌ಸಿಸಿ ಕೆಡೆಟ್‌ಗಳ ಮೇಲೆ ಬಂದೂಕು ಇಟ್ಟರೇ ಅದನ್ನು ಬಳಸುವಷ್ಟು ಮಟ್ಟಿಗೆ ಸರ್ವ ಸನ್ನದ್ಧರಾಗಬೇಕು. ಸೈನ್ಯಕ್ಕೆ ಮಾನವ ಸಂಪನ್ಮೂಲದ ಅಗತ್ಯತೆ ಇದ್ದು, ಅಕಾಡೆಮಿಗಳಿಂದ ಇದು ಸಾಧ್ಯ ಎಂದು ನುಡಿದರು.

ಮೈಸೂರಿನ ಆಲನಹಳ್ಳಿ ಸಮೀಪ ಎನ್‌ಸಿಸಿ ಅಕಾಡೆಮಿ ನಿರ್ಮಾಣಕ್ಕೆ 3.5 ಎಕರೆ ಸ್ಥಳ ಲಭ್ಯವಿದ್ದು, ಮೂಲ ಸೌಲಭ್ಯ ಕಲ್ಪಿಸಲು ಸುಮಾರು 25 ಕೋಟಿ ಅಗತ್ಯವಿದೆ. ಇದರ ಅನುಷ್ಠಾನಕ್ಕೆ ರಾಜ್ಯ, ಕೇಂದ್ರ ಸರ್ಕಾರ ಅನುದಾನ ನೀಡಬೇಕು ಎಂದ ಅವರು, ಈ ಅಕಾಡೆಮಿಯು 500 ಕೆಡೆಟ್‌ಗಳ ತರಬೇತಿಗೆ ಅಗತ್ಯ ಸೌಲಭ್ಯವನ್ನು ಹೊಂದುವಂತೆ ನಿರ್ಮಾಣವಾಗಬೇಕಿದೆ. ಇಂದು ಡ್ರೋನ್ ತರಬೇತಿಯೂ ರಕ್ಷಣಾ ವಿಭಾಗದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಮೈಸೂರು ಭಾಗಕ್ಕೆ ಡ್ರೋನ್ ಸ್ಕೂಲ್ ನಿರ್ಮಾಣಕ್ಕೆ ಅವಕಾಶ ದೊರೆತಿದ್ದು, ಇದರ ಮೂಲಸೌಕರ್ಯವೂ ಅಕಾಡೆಮಿಯಲ್ಲಿ ನಿರ್ಮಾಣವಾದರೆ ಈ ರಾಜ್ಯಕ್ಕೆ ಒಂದು ಉತ್ತಮ ಸಂಸ್ಥೆ ದೊರೆತಂತಾಗುತ್ತದೆ. ಈ ಎಲ್ಲಾ ವ್ಯವಸ್ಥೆ ಅನುಷ್ಠಾನಕ್ಕೆ ಬರಬೇಕಾದರೆ ರಾಜಕೀಯ ಇಚ್ಛಾಶಕ್ತಿ ಅವಶ್ಯವಿದೆ ಎಂದು ತಿಳಿಸಿದರು.

ಅಕಾಡೆಮಿಗೆ ಮೂಲ ಸೌಲಭ್ಯ ಕಲ್ಪಿಸುವ ಬಗ್ಗೆ ಸುತ್ತೂರು ಶ್ರೀಗಳ ಬಳಿ ಚರ್ಚಿಸಿದ್ದಾಗ ಅವರು, ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿಯಾಗಲು ಸೂಚಿಸಿದರು. ಸಚಿವರನ್ನು ಭೇಟಿಯಾದರೂ ಯಾವುದೇ ಉತ್ತರ ಬಂದಿಲ್ಲ. ನಂತರ ಕರ್ನಾಟಕ ಡಿಜಿಟಲ್ ಎಕನಾಮಿಕ್ ಮಿಷನ್ ಅವರ ಬಳಿಯೂ ಮನವಿ ಮಾಡಿದ್ದು, ಪ್ರತಿಕ್ರಿಯೆ ಬಂದಿಲ್ಲ. ಆದ್ದರಿಂದ ಅಲುಮ್ನಿ ಸಂಘದವರೂ ಈ ಬಗ್ಗೆ ರಾಜಕೀಯ ಒತ್ತಡ ತರಬೇಕು ಎಂದು ಮನವಿ ಮಾಡಿ ಎಂದರು.

ಕಾರ್ಯಕ್ರಮದಲ್ಲಿ ವಿಂಗ್ ಕಮಾಂಡರ್ ಆಶೀಸ್, ಗ್ರೂಪ್ ಕ್ಯಾಪ್ಟನ್ ಅಭಿನವ್ ಚತುರ್ವೇದಿ, ಏರೋ ಮಾಡಲಿಂಗ್ ನಿವೃತ್ತ ಬೋಧಕ ನಾಗರಾಜು, ಸಂಶೋಧಕ ಸೋಮೆಂದ್ರ ಸಿಂಗ್, ಲೆಫ್ಟಿನೆಂಟ್ ಕರ್ನಲ್ ಪ್ರಭಾಕರ್, ಮಾಜಿ ಕೆಡೆಟ್ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅನಿಲ್ ಥಾಮಸ್, ಉಪಾಧ್ಯಕ್ಷ ಡಾ.ಮಾಧವ ದೇಶಪಾಂಡೆ, ಸಂಸ್ಥಾಪಕಿ ಉಮಾ ವೆಂಕಟೇಶ್, ಖಜಾಂಚಿ ಅನಿತಾ ಬಂಸಿ ಲಾಲ್, ಜಂಟಿ ಖಜಾಂಚಿ ಶಂಕರ ಧನಗೌಡ, ಲಕ್ಷ್ಮೀ ವಲ್ಲಭ ಉಪಸ್ಥಿತರಿದ್ದರು.



ಮೈಸೂರಿನಲ್ಲಿ 76ನೇ ಎನ್‌ಸಿಸಿ ದಿನಾಚರಣೆ ಅಂಗವಾಗಿ ಮೈಸೂರು ಎನ್‌ಸಿಸಿ 4 ಕೆಎಆರ್–ಏರ್ ಸ್ಕ್ವಾಡ್ರನ್ ಅಲುಮ್ನಿ ಸಂಘದ ವತಿಯಿಂದ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ ಎನ್‌ಸಿಸಿ ಕೆಡೆಟ್‌ಗಳು ಎನ್‌ಸಿಸಿ ಮಹತ್ವ ಬಗ್ಗೆ ಸಾರಿದರು.

ಯೋಧರ ಸೃಷ್ಟಿಯಲ್ಲಿ ಎನ್‌ಸಿಸಿ ಪಾತ್ರ ಪ್ರಮುಖ: ರೋಹಿತ್ ಠಾಕೂರ್



ಎನ್‌ಸಿಸಿ 4 ಕೆಎಆರ್–ಏರ್ ಸ್ಕ್ವಾಡ್ರನ್ ಅಲುಮ್ನಿ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮವನ್ನು ಮೈಸೂರು ಎನ್‌ಸಿಸಿ ಗ್ರೂಪ್ ಕಮಾಂಡರ್ ರೋಹಿತ್ ಠಾಕೂರ್ ಉದ್ಘಾಟಿಸಿದರು.

ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ 'ಹ್ಯಾಂಗರ್'ಗೆ ಹಾನಿ

ಮಂಡಕಳ್ಳಿ ವಿಮಾನ ನಿಲ್ದಾಣ ಬಳಿ ಇರುವ ಎನ್‌ಸಿಸಿ ಏರ್ ಸ್ಕ್ವಾಡ್ರನ್‌ಗೆ ಸಂಬಂಧಿಸಿದ ತರಬೇತಿ ವಿಮಾನ ಇರಿಸುವ 'ಹ್ಯಾಂಗರ್'ಗೆ ಹಾನಿಯಾಗಿದ್ದು, ಕೂಡಲೇ ಸರಿಪಡಿಸಬೇಕು ಎಂಬ ಒತ್ತಾಯ ಕಾರ್ಯಕ್ರಮದಲ್ಲಿ ಕೇಳಿಬಂತು. ಹ್ಯಾಂಗರ್ ನಿರ್ಮಾಣಕ್ಕೆ 2.5 ಕೋಟಿ ರೂ. ಅನುದಾನ ಅಗತ್ಯವಿದೆ ಎಂದು ರೋಹಿತ್ ಠಾಕೂರ್ ತಿಳಿಸಿದರು.

ಇದೇ ವೇಳೆ ಕಾರ್ಯಕ್ರಮದಲ್ಲಿದ್ದ ನಿವೃತ್ತ ಎನ್‌ಸಿಸಿ ಅಧಿಕಾರಿಗಳು, ಕೆಡೆಟ್‌ಗಳು ತಾವೇ ಹಣವನ್ನು ಒಗ್ಗೂಡಿಸುವುದಾಗಿ ತಿಳಿಸಿದರು. ಇನ್ನು ಕೆಲವರು ಇದು ಸರ್ಕಾರವೇ ಮಾಡಬೇಕಾದ ಕೆಲಸ. ನಾವು ಅಲ್ಲಿ ತೊಡಗಲು ಕಾನೂನಾತ್ಮಕ ಸಮಸ್ಯೆ ಎದುರಾಗಬಹುದು. ಬಾಹ್ಯ ಒತ್ತಡ ಹಾಕೋಣ ಎಂಬ ಮಾತುಗಳು ಕೇಳಿ ಬಂದಿತು.

ಪೈಲಟ್ ಆಗಲು ಎನ್‌ಸಿಸಿ ಮುಖ್ಯ ಪಾತ್ರ ವಹಿಸಿದೆ

ಮೈಸೂರಿನ ಮೊದಲ ಪೈಲಟ್ ಪುಣ್ಯ ನಂಜಪ್ಪ ಮಾತನಾಡಿ, ನನಗೆ ಫೈಟರ್ ಪೈಲಟ್ ಏನು ಎಂಬುದರ ಬಗ್ಗೆ ತಿಳಿದಿರಲಿಲ್ಲ. ಒಮ್ಮೆ ತಂದೆಯೊಟ್ಟಿಗೆ ಬೆಂಗಳೂರಿನ ಏರ್ ಷೋಗೆ ಭೇಟಿ ನೀಡಿದಾಗ ಫೈಟರ್ ಪೈಲಟ್ ನೋಡಿ ಪೈಲಟ್ ಆಗಬೇಕು ಎಂಬ ಕನಸು ಕಂಡೆ. ಅದಕ್ಕೆ ಎನ್‌ಸಿಸಿ ಮುಖ್ಯ ಪಾತ್ರ ವಹಿಸಿದೆ. ಎನ್‌ಸಿಸಿಯಿಂದ ಹೇಗೆ ಸಮಯವನ್ನು ನಿಭಾಯಿಸಬೇಕು ಎಂಬುದನ್ನು ಅರಿತುಕೊಂಡೆ. ನಂತರ ಎನ್‌ಸಿಸಿಯಲ್ಲಿ ಸೇರ್ಪಡೆಗೊಂಡು ಆ ಮೂಲಕ ಫೈಟರ್ ಪೈಲಟ್, ಇಂಜಿನಿಯರ್ ಆದೆ ಎಂದು ತಾವು ಪೈಲಟ್ ಆದ ಬಗ್ಗೆ ವಿವರಿಸಿದರು.

ಜೀವನದಲ್ಲಿ ಪ್ರತಿಯೊಂದು ಸಣ್ಣ, ಸಣ್ಣ ವಿಷಯವೂ ಮುಖ್ಯವಾಗಿದ್ದು, ಎಲ್ಲದರ ಬಗ್ಗೆಯು ಗಮನವಹಿಸಬೇಕು. ಅದು ನಮ್ಮ ಜೀವನದ ಏಳಿಗೆಗೆ ಗುರಿಯನ್ನು ತಲುಪಲು ಸಹಕಾರಿಯಾಗಲಿದೆ. ನಾನು ಕನಸು ಕಂಡಾಗ ಯಾರೂ ಈ ರೀತಿ ಸಲಹೆ ಕೊಡಲಿಲ್ಲ. ಕಷ್ಟ ಪಟ್ಟು ಆಗಿನ ಕಾಲದ ಇಂಟರ್‌ನೆಟ್ ವೇಗ ಕಡಿಮೆ ಇದ್ದಾಗ ಗೂಗಲ್ ಮೂಲಕ ಮಾಹಿತಿ ಪಡೆದುಕೊಂಡೇ. ಆದ್ದರಿಂದ ನೀವು ಎಲ್ಲವನ್ನು ಆಲಿಸಿ ಜೀವನದಲ್ಲಿ ಮುನ್ನುಗ್ಗಿ ಎಂದು ತಿಳಿಸಿದರು.

ಕನ್ನಡ ರಾಜ್ಯೋತ್ಸವ...



ಮೈಸೂರಿನ ಮಹದೇವಪುರದ ಟೋಲ್‌ಗೇಟ್ ಬಳಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಶ್ರೀರಾಂಪುರ ಪಪಂ ಪೌರಕಾರ್ಮಿಕರು ಧ್ವಜಾರೋಹಣ ಮಾಡಿ, ಕನ್ನಡ ರಾಜ್ಯೋತ್ಸವ ಆಚರಿಸಿದರು. ಕಪಿನಿಗೌಡ, ಎಸ್.ಬಾಲಕೃಷ್ಣ, ಶಿವಣ್ಣ, ನಾಗರಾಜು, ಶಿವು, ಮಧು ವಿಲ್ಸನ್ ಮತ್ತಿತರರು ಉಪಸ್ಥಿತರಿದ್ದರು.

ಡಿ.1, ಹಾಸ್ಯ ರಸಮಂಜರಿ: ಶಾಸಕ ತನ್ವೀರ್‌ಸೇಠ್‌ರಿಂದ ಪೋಸ್ಟರ್ ಬಿಡುಗಡೆ



ಹಾಸ್ಯ ರಸಮಂಜರಿ ಕಾರ್ಯಕ್ರಮದ ಮಾಹಿತಿಯ ಪೋಸ್ಟರ್ ಅನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿದರು.

ಮೈಸೂರು,ನ.25–ಮೈಸೂರು ದಸರಾ ವಸ್ತು ಪ್ರದರ್ಶನ ಸಾಂಸ್ಕೃತಿಕ ಸಮಿತಿಯ ವತಿಯಿಂದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಡಿ.1ರ (ಭಾನುವಾರ) ಸಂಜೆ 5:30ಕ್ಕೆ ಸಾಂಸ್ಕೃತಿಕ ಸಮಿತಿ ಉಪಾಧ್ಯಕ್ಷ ಮೆಲ್ಲಹಳ್ಳಿ ರಾಜೇಶ್ ಸಿ.ಗೌಡ ನೇತೃತ್ವದಲ್ಲಿ ಸಾಯಿರಾಂ ಸಾಂಸ್ಕೃತಿಕ ವೇದಿಕೆ ಪ್ರಸ್ತುತಪಡಿಸುತ್ತಿರುವ ಹಾಸ್ಯ ನಟ–ನಟಿಯರಿಂದ ಹಾಸ್ಯ ರಸಮಂಜರಿ ಕಾರ್ಯಕ್ರಮದ ಮಾಹಿತಿಯ ಪೋಸ್ಟರ್ ಅನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಮೈಸೂರಿನಲ್ಲಿ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ವೇದಿಕೆ ಸೃಷ್ಟಿಸಿಕೊಡುವಲ್ಲಿ ದಸರಾ ವಸ್ತುಪ್ರದರ್ಶನದ ಸಾಂಸ್ಕೃತಿಕ ಸಮಿತಿ ಪಿ.ಕಾಳಿಂಗರಾವ್ ಗಾನ ಮಂಟಪ ಯಶಸ್ವಿಯಾಗಿದೆ. ಮೈಸೂರಿಗರು ಕಲಾಭಿರುಚಿ ಉಳ್ಳವರು, ಹಾಸ್ಯದಿಂದ ಆರೋಗ್ಯವು ಸಹ ಹತೋಟಿಯಲ್ಲಿರುತ್ತದೆ ಎಂದರು.

ಕಲಾವಿದರಾದ ಡಿಂಗ್ರಿ ನಾಗರಾಜ್, ಮಿಮಿಕ್ರಿ ಗೋಪಿ, ರೇಖಾದಾಸ್, ಸಿಲ್ಲಿ ಲಲ್ಲಿ ಗೌಡ್ರು, ಜೂನಿಯರ್ ಮಾಲಾಶ್ರೀ, ಜೂನಿಯರ್ ರಕ್ಷಿತಾ, ಜೂನಿಯರ್ ಶಂಕರನಾಗ್, ಜೂನಿಯರ್ ಅಂಬರೀಶ್, ಬೌಬೌ ಬಿರಿಯಾನಿ ಜಯರಾಮಣ್ಣ, ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಗಂಗೂಬಾಯಿ ಹಾನಗಲ್ ವಿವಿ ಕುಲಪತಿ ನಾಗೇಶ್ ಬೆಟ್ಟಕೋಟೆ, ಪಾಲಿಕೆ ಆಯುಕ್ತ ರೆಹಮಾನ್ ಷರೀಫ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಭೈರಪ್ಪ, ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಕಾರ್ಯಾಧ್ಯಕ್ಷ ಕೆವಿ ಮಲ್ಲೇಶ್, ಉಪಾಧ್ಯಕ್ಷರಾದ ಮಲ್ಲಿಕಾರ್ಜುನ, ರಾಜೇಶ್, ಸಿ.ಗೌಡ, ಕೃಷ್ಣ ಗೃಹ ಶೋಭೆ, ಫಾಸಿನ್ ಖಾನ್, ನಿರೂಪಕ ಅಜಯ್ ಶಾಸ್ತ್ರಿ, ರಂಗಸ್ವಾಮಿ ಪಾಪು, ಮಹೇಂದ್ರ ಕಾಗಿನೆಲೆ, ಇನ್ನಿತರರು ಇದ್ದರು.

ಉಪಚುನಾವಣೆ ಸೋಲಿನ ಬಳಿಕ ಬಿಜೆಪಿ, ಜೆಡಿಎಸ್‌ನಿಂದ ಮತದಾರರಿಗೆ ಅವಮಾನ

ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ ಆರೋಪ

ಮೈಸೂರು, ನ.25–ರಾಜ್ಯದ ಮೂರು ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ವಿಪಕ್ಷಗಳಾದ ಜೆಡಿಎಸ್–ಬಿಜೆಪಿ ಹೀನಾಯವಾಗಿ ಸೋಲು ಕಂಡಿದ್ದರೂ ಆ ಪಕ್ಷದ ಮುಖಂಡರುಗಳಿಗೆ ಬುದ್ಧಿ ಬಂದಿಲ್ಲ. ಈಗಲೂ ಸುಳ್ಳಿನಿಂದ ಕೂಡಿದ ಹೇಳಿಕೆ ನೀಡುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ವಿ.ಪಿಯಾ ಟೀಕಿಸಿದ್ದಾರೆ.

ಚುನಾವಣೆಯಲ್ಲಿ ಸೋತ ಮಾತ್ರಕ್ಕೆ ಮತದಾರರನ್ನು ನಿಂದಿಸಿ, ಅವಮಾನಿಸುವುದು ಸರಿಯಲ್ಲ. ಚುನಾವಣೆಯಲ್ಲಿ ಕಾಂಗ್ರೆಸ್ ಹಣದ ಹೊಳೆ ಹರಿಸಿದೆ ಎಂದು ಬಿಜೆಪಿ ಮುಖಂಡರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ನೀಡಿರುವ ಹೇಳಿಕೆ ಉಲ್ಲೇಖಿಸಿ ಪತ್ರಿಕಾ ಹೇಳಿಕೆ ನೀಡಿದ್ದಾರೆ.

ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳು ಬಡವರ ನೆಮ್ಮದಿ ಬದುಕಿಗೆ ಆಸರೆಯಾಗಿದೆ. ಆದ್ದರಿಂದ ಈ ಬಾರಿ ಚುನಾವಣೆಯಲ್ಲಿ ಶೋಷಿತರು, ಬಡವರು ಕಾಂಗ್ರೆಸ್ ಕೈ ಹಿಡಿದಿದ್ದಾರೆ. ಆದರೆ ಈ ಸತ್ಯ ಮರೆಮಾಚಿ ತಮ್ಮ ಸೋಲಿನ ನೈತಿಕತೆ ಹೊರುವ ಬದಲು, ಮತದಾರರನ್ನೇ ಅವಮಾನಿಸುವ ಕೀಳುಮಟ್ಟಕ್ಕೆ ಬಿಜೆಪಿ ಮುಖಂಡರು ಇಳಿದಿರುವುದು ನಾಚಿಕೆಗೇಡು. ಬಿಜೆಪಿ ನಾಯಕರ ವರ್ತನೆಯಿಂದ ಕರ್ನಾಟಕದ ಜನ ರೋಸಿ ಹೋಗಿದ್ದಾರೆ. ಈ ಕಾರಣಕ್ಕೆ ಕಳೆದ ಸಾರ್ವತ್ರಿಕ ಚುನಾವಣೆಯಲ್ಲೂ ಅವರಿಗೆ ತಕ್ಕ ಪಾಠ ಕಲಿಸಿದ್ದರು. ಇಷ್ಟಾದರೂ ಬುದ್ಧಿ ಕಲಿಯದ ಬಿಜೆಪಿಯವರು ಮತ್ತೆ ಹಳೇ ಚಾಳಿ ಮುಂದುವರೆಸಿರುವುದು ನೋಡಿದರೆ ರಾಜ್ಯದಲ್ಲಿ ಅವರಿಗೆ ಉಳಿಗಾಲವಿಲ್ಲ ಎಂದಿದ್ದಾರೆ.

ಇಂದು ಬೌದ್ಧರ ಧಾರ್ಮಿಕ ಹಕ್ಕಿಗಾಗಿ ಧಮ್ಮ ನಡಿಗೆ

ಮೈಸೂರು,ನ.25(ಎಂಟಿವೈ)– ಸಂವಿಧಾನ ದಿನಾಚರಣೆ ಪ್ರಯುಕ್ತ ಹಾಗೂ ಬೌದ್ಧರ ಧಾರ್ಮಿಕ ಹಕ್ಕಿಗಾಗಿ ಎಐಬಿಎಫ್ ಸಂಘಟನೆ ವತಿಯಿಂದ ನ.26ರಂದು ಬೆಳಗ್ಗೆ 11ಕ್ಕೆ ಜಿಲ್ಲಾಧಿಕಾರಿ ಕಚೇರಿಗೆ ಧಮ್ಮ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದ್ದಾರೆ.



ಪುರುಷೋತ್ತಮ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸಿದ್ಧಾರ್ಥ ನಗರದ ಬುದ್ಧನ ಪುತ್ಥಳಿ ಮುಂಭಾಗದಿಂದ ಧಮ್ಮ ನಡಿಗೆ ಕಾರ್ಯಕ್ರಮ ಆರಂಭವಾಗಲಿದೆ. ನಡಿಗೆಯಲ್ಲಿ ದಲಿತ ಸಂಘರ್ಷ ಸಮಿತಿ, ಪ್ರಗತಿಪರ ಸಂಘಟನೆಗಳು ಹಾಗೂ ಬುದ್ಧನ ಅನುಯಾಯಿಗಳು ಪಾಲ್ಗೊಳ್ಳಲಿದ್ದಾರೆ. ಬುದ್ಧನಿಗೆ ಜ್ಞಾನೋದಯವಾದ ಬುದ್ಧ ಗಯಾ ಯಾರಿಗೆ ಸೇರಬೇಕೆಂಬ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಇದನ್ನು ನೋಡಿಕೊಳ್ಳಲು ನಾಲ್ವರು ಬೌದ್ಧರು, ನಾಲ್ವರು ಹಿಂದೂಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಆದರೆ ಹಿಂದೂ ರಾಷ್ಟ್ರ ಎಂದು ಹೇಳಿಕೊಂಡು ಬೌದ್ಧರಿಗೆ ಅಗೌರವ ನೀಡಲಾಗುತ್ತಿದೆ. ವಾಸ್ತವವಾಗಿ ಬುದ್ಧ ಗಯಾ ಬೌದ್ಧರಿಗೆ ಸೇರಬೇಕೆಂದಿದ್ದರೂ ಈ ಬಗ್ಗೆ ಸ್ಥಳೀಯ ಹಾಗೂ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ಸಂವಿಧಾನ ದಿನಾಚರಣೆಯಂದು ದೇಶದಾದ್ಯಂತ ದೊಡ್ಡ ಮಟ್ಟದ ಹೋರಾಟ ಹಮ್ಮಿಕೊಳ್ಳಲಾಗಿದೆ. ಬುದ್ಧ ಗಯಾ ಬೌದ್ಧರಿಗೆ ಸೇರಬೇಕೆಂಬುದೇ ಈ ಹೋರಾಟದ ಉದ್ದೇಶವಾಗಿದೆ. ಬುದ್ಧ ಗಯಾ ಸಂಪೂರ್ಣವಾಗಿ ಹಿಂದೂಗಳ ನಿಯಂತ್ರಣದಿಂದ ಹೊರಬರಬೇಕು ಎಂಬುದೇ ಮುಖ್ಯ ಬೇಡಿಕೆ ಆಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಹರಿಹರ ಆನಂದಸ್ವಾಮಿ, ಸೋಮಯ್ಯ ಮಲೆಯೂರು, ಸಿದ್ದಸ್ವಾಮಿ, ನಾರಾಯಣಪ್ಪ, ನಂಜುಂಡಸ್ವಾಮಿ ಇದ್ದರು.

ಕಂಬೈನ್ಸ್ ಹಾರ್ವೆಸ್ಟರ್ ಯಂತ್ರಗಳ ಬಾಡಿಗೆ ದರ ನಿಗದಿ

ಮೈಸೂರು,ನ.25– ಮೈಸೂರು ಜಿಲ್ಲೆಯಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 91,735 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆದಿದ್ದು, ಸದ್ಯದಲ್ಲೇ ಕಟಾವು ಕಾರ್ಯ ಪ್ರಾರಂಭವಾಗಲಿದೆ. ಜಿಲ್ಲೆಯಲ್ಲಿ ಭತ್ತ ಹಾಗೂ ರಾಗಿ ಕಟಾವಿಗೆ ರೈತರು ಕಂಬೈನ್ಸ್ ಹಾರ್ವೆಸ್ಟರ್ ಯಂತ್ರಗಳನ್ನು ಬಾಡಿಗೆಗೆ ಪಡೆಯಲು ಕಂಬೈನ್ಸ್ ಹಾರ್ವೆಸ್ಟರ್ ಯಂತ್ರಗಳ ಬಾಡಿಗೆ ದರವನ್ನು ನಿಗದಿಪಡಿಸಲಾಗಿದೆ. ಅದರಂತೆ ಚೈನ್ ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.2500, ಟೈರ್ (ಗ್ರೀಪ್) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ. 2000, ಟೈರ್ (ಸಾಮಾನ್ಯ) ಮಾದರಿ ಭತ್ತದ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ 1800 ಹಾಗೂ ರಾಗಿ ಕಟಾವು ಯಂತ್ರಕ್ಕೆ ಪ್ರತಿ ಗಂಟೆಗೆ ರೂ.2900 ಅನ್ನು ನಿಗದಿಪಡಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಮ್ಮ ಪರಂಪರೆ ಜೀವನದ ಕನ್ನಡಿ ಇದ್ದಂತೆ

ಖ್ಯಾತ ಇತಿಹಾಸ ತಜ್ಞ ಡಾ.ಲಕ್ಷ್ಮೀಶ ಹೆಗ್ಡೆ ಸೋಂದಾ ಅಭಿಮತ

ಮೈಸೂರು,ನ.25(ಆರ್‌ಕೆ)–ನಮ್ಮ ಪರಂಪರೆ ಜೀವನದ ಕನ್ನಡಿ ಇದ್ದಂತೆ ಎಂದು ಖ್ಯಾತ ಇತಿಹಾಸ ತಜ್ಞ ಡಾ.ಲಕ್ಷ್ಮೀಶ ಹೆಗ್ಡೆ ಸೋಂದಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕಚೇರಿ ಸಭಾಂಗಣದಲ್ಲಿ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಟ್ ಸಹಯೋಗದೊಂದಿಗೆ ಏರ್ಪಡಿಸಿದ್ದ 'ಕರ್ನಾಟಕ ಇತಿಹಾಸದಲ್ಲಿ ಪ್ರಾದೇಶಿಕ ಇತಿಹಾಸ' ಕುರಿತ ವಿಶ್ವ ಪರಂಪರೆ ಸಪ್ತಾಹ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಪರಂಪರೆ, ಪುರಾತತ್ವ ಎಂಬುದು ಈ ಹಿಂದೆ ನಮ್ಮ ಜೀವನ ಹೇಗಿತ್ತು ಎಂಬುವುದನ್ನು ತಿಳಿಸುವ ಕನ್ನಡಿ ಇದ್ದಂತೆ ಎಂದರು.

ಕಾರಿಗೆ ಕನ್ನಡಿ ಇರುತ್ತದೆ. ಅದರಿಂದ ಹಿಂದೆ, ಮುಂದೆ ಯಾವ ವಾಹನವಿದೆ ಎಂಬುದನ್ನು ನೋಡಿಕೊಂಡು ಅಪಘಾತವಾಗದಂತೆ ಚಾಲನೆ ಮಾಡುತ್ತೇವೆ. ಅದೇ ರೀತಿ ಜೀವನ ಹಿಂದೆ ಹೇಗಿತ್ತು ಎಂಬ ಇತಿಹಾಸವನ್ನು ತಿಳಿಯುವುದೇ ಪರಂಪರೆಯಾಗಿದೆ. ನಮ್ಮ ಜೀವನವೂ ಯಾವುದೇ ಅಡೆ–ತಡೆ ಇಲ್ಲದೇ ಮುನ್ನಡೆಯಬೇಕೆಂದರೆ ಪರಂಪರೆ, ಇತಿಹಾಸವೆಂಬ ಕನ್ನಡಿ ಅತ್ಯವಶ್ಯ ಎಂದರು.

ನಮ್ಮ ಪೂರ್ವಜರು ಏನು ಮಾಡಿದ್ದರು. ಈ ಹಿಂದೆ ಏನಾಗಿದೆ ಎಂಬ ಇತಿಹಾಸ ತಿಳಿದು ಮುನ್ನಡೆಯುವುದು ಅತ್ಯವಶ್ಯ. ಪುರಾತತ್ವ ಇಲಾಖೆಯು ಸಂರಕ್ಷಿಸುತ್ತಿರುವ ಪಾರಂಪರಿಕ ಸ್ಮಾರಕ, ಕಟ್ಟಡಗಳನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳೆಸಬೇಕಾಗಿದೆ ಎಂದು ಡಾ.ಸೋಂದಾ ನುಡಿದರು.

ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಪ್ರಾದೇಶಿಕ ಇತಿಹಾಸ ಪ್ರಮುಖ ಪಾತ್ರ ವಹಿಸಲಿದ್ದು, ಮುಂದಿನ ಪೀಳಿಗೆಗೆ ಪುರಾತತ್ವ ಮಹತ್ವಗಳನ್ನು ಬಿತ್ತರಿಸಬೇಕು. ಯುವ ಸಮೂಹವೂ ಪರಂಪರೆ, ಇತಿಹಾಸದ ಬಗ್ಗೆ ತಿಳಿದುಕೊಳ್ಳಬೇಕು ಎಂದು ಅವರು ನುಡಿದರು. ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ರಾಜ್ಯದ ಪರಂಪರೆ, ಸ್ಮಾರಕಗಳ ಸಂರಕ್ಷಣೆ, ಇತಿಹಾಸದ ಬಗ್ಗೆ ಮಾಹಿತಿ ನೀಡಿದರು. ಉಪನಿರ್ದೇಶಕಿ ಮಂಜುಳಾ, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್‌ನ ನಿರ್ದೇಶಕಿ ಡಾ.ಚಂಪಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಕರ್ನಾಟಕ ಇತಿಹಾಸದಲ್ಲಿ ಪ್ರಾದೇಶಿಕ ಇತಿಹಾಸ' ಕುರಿತ ವಿಶ್ವ ಪರಂಪರೆ ಸಪ್ತಾಹ ಕಾರ್ಯಕ್ರಮವನ್ನು ಇತಿಹಾಸ ತಜ್ಞ ಡಾ.ಲಕ್ಷ್ಮೀಶ ಹೆಗ್ಡೆ ಸೋಂದಾ ಉದ್ಘಾಟಿಸಿದರು.

ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 2 ರೂ. ಹೆಚ್ಚಳ

ನವದೆಹಲಿ: ಮುಂಬೈ ಮತ್ತು ದೇಶದ ಇತರ ಹಲವು ನಗರಗಳಲ್ಲಿ ಸಿಎನ್‌ಜಿ ಬೆಲೆಯನ್ನು ಪ್ರತಿ ಕೆಜಿಗೆ 2 ರೂ. ಹೆಚ್ಚಿಸಲಾಗಿದೆ. ಆದರೆ ಸದ್ಯದಲ್ಲೇ ವಿಧಾನಸಭೆ ಚುನಾವಣೆ ಎದುರಿಸಲಿರುವ ದೆಹಲಿಯಲ್ಲಿ ಮಾತ್ರ ಸಿಎನ್‌ಜಿ ದರ ಏರಿಕೆ ಮಾಡಿಲ್ಲ ಎಂದು ನಗರ ಅನಿಲ ಸಂಸ್ಥೆಗಳು ತಿಳಿಸಿವೆ.

ಅಡುಗೆ ಅನಿಲ, ಆಟೋಮೊಬೈಲ್‌ಗಳಿಗೆ ಸಿಎನ್‌ಜಿ ವಿತರಕ ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್, ರಾಷ್ಟ್ರ ರಾಜಧಾನಿ ಹೊರತುಪಡಿಸಿ ಪಕ್ಕದ ನಗರಗಳಲ್ಲಿ ಸಿಎನ್‌ಜಿ ಬೆಲೆಯನ್ನು ಕೆಜಿಗೆ 2 ರೂ. ಹೆಚ್ಚಳ ಮಾಡಿದೆ. ನೋಯ್ಡಾ, ಗ್ರೇಟರ್ ನೋಯ್ಡಾ, ಗಾಜಿಯಾಬಾದ್, ಗುರುಗ್ರಾಮ್ ಮತ್ತು ಇತರ ನಗರಗಳಲ್ಲಿ ಸಿಎನ್‌ಜಿ ಬೆಲೆ ಹೆಚ್ಚಿಸಲಾಗಿದೆ. ಆದರೆ ಇನ್ನು ಕೆಲವೇ ವಾರಗಳಲ್ಲಿ ಚುನಾವಣೆ ಘೋಷಣೆಯಾಗಲಿರುವ ದೆಹಲಿಗೆ ದರ ಏರಿಕೆಯಿಂದ ವಿನಾಯಿತಿ ನೀಡಲಾಗಿದೆ.

ಸಿಟಿ ಗ್ಯಾಸ್ ರಿಟೇಲರ್‌ಗಳಾದ ಅದಾನಿ ಟೋಟಲ್ ಗ್ಯಾಸ್ ಲಿಮಿಟೆಡ್, ಇನ್‌ಪುಟ್ ವೆಚ್ಚದಲ್ಲಿ ಶೇ.20ರಷ್ಟು ಹೆಚ್ಚಳದ ಹೊರತಾಗಿಯೂ ಮಹಾರಾಷ್ಟ್ರ ಚುನಾವಣೆ ಹಿನ್ನೆಲೆಯಲ್ಲಿ ಕಳೆದ ಎರಡು ತಿಂಗಳುಗಳಿಂದ ಬೆಲೆ ಏರಿಕೆಗಾಗಿ ಕಾಯುತ್ತಿದ್ದವು.

ದೇಶ – ವಿದೇಶ

ಬಾಂಗ್ಲಾದ ಹಿಂದೂ ಪರ ವಕೀಲ, ಇಸ್ಕಾನ್ ಅರ್ಚಕ ಚಿನ್ಮೋಯ್ ಕೃಷ್ಣದಾಸ್ ಬಂಧನ




ಢಾಕಾ: ಬಾಂಗ್ಲಾದೇಶದ ಹಿಂದೂ ಅಲ್ಪಸಂಖ್ಯಾತರ ಪರ ವಕೀಲರಾಗಿರುವ ಖ್ಯಾತ ಇಸ್ಕಾನ್ ಅರ್ಚಕ ಚಿನ್ಮೋಯ್ ಕೃಷ್ಣ ದಾಸ್ ಬ್ರಹ್ಮಚಾರಿ ಅವರನ್ನು ಢಾಕಾ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಯಿತು. ಹಿಂದೂಗಳ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಧ್ವನಿ ಎತ್ತಿದ್ದಕ್ಕೆ ಅವರನ್ನು ಬಂಧಿಸಲಾಗಿದೆ ಎಂದು ಹೋರಾಟಗಾರರು ಹೇಳಿದ್ದಾರೆ. ಈ ಬಗ್ಗೆ ಎಕ್ಸ್ ಮೂಲಕ ರಾಧಾರಾಮನ್ ದಾಸ್ ಎಂಬುವವರು ಟ್ವೀಟ್ ಮಾಡಿದ್ದು, ಹಿಂದೂ ಸನ್ಯಾಸಿ ಮತ್ತು ಬಾಂಗ್ಲಾದೇಶದ ಅಲ್ಪಸಂಖ್ಯಾತರ ಮುಖ್ಯ ನಾಯಕ ಚಿನ್ಮೋಯ್ ಕೃಷ್ಣದಾಸ್ ಬ್ರಹ್ಮಚಾರಿ ಅವರನ್ನು ಢಾಕಾದಲ್ಲಿ ಬಂಧಿಸಿ, ಅವರನ್ನು ಅಜ್ಞಾತಸ್ಥಳಕ್ಕೆ ಕರೆದೊಯ್ದಿದ್ದಾರೆ ಎಂದು ಹೇಳಿದ್ದಾರೆ. ದಾಸ್ ಅವರನ್ನು ಢಾಕಾ ವಿಮಾನ ನಿಲ್ದಾಣದಿಂದ ಕರೆದುಕೊಂಡು ಹೋಗಲಾಗಿದೆ ಎಂದು ಢಾಕಾ ವಿಮಾನ ನಿಲ್ದಾಣ ವ್ಯವಸ್ಥಾಪಕರು ಹೇಳಿದ್ದಾರೆ. ಢಾಕಾ ಪೊಲೀಸರು ತಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ. ಬಾಂಗ್ಲಾದೇಶ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ತಮ್ಮ ದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದಾಳಿಯ ವಿಷಯವನ್ನು ಉತ್ಪ್ರೇಕ್ಷಿತ ಎಂದು ಹೇಳಿದ್ದರು ಮತ್ತು ಭಾರತವು ಅದನ್ನು ವ್ಯಾಖ್ಯಾನಿಸಿದ ವಿಧಾನವನ್ನು ಪ್ರಶ್ನಿಸಿದ್ದರು.

ಸಂಭಾಲ್ ಹಿಂಸಾಚಾರ: ಎಸ್‌ಪಿ ಸಂಸದ, ಶಾಸಕನ ಪುತ್ರನ ಮೇಲೆ ಎಫ್‌ಐಆರ್

ಉತ್ತರ ಪ್ರದೇಶ: ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯ ಮೊಘಲ್ ಯುಗದ ಶಾಹಿ ಜಾಮಾ ಮಸೀದಿಯ ಸಮೀಕ್ಷೆಯನ್ನು ವಿರೋಧಿಸಿ ಭಾನುವಾರದ ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಸಂಸದ ಜಿಯಾವುರ್ ರೆಹಮಾನ್ ಬಾರ್ಕ್ ಮತ್ತು ಸ್ಥಳೀಯ ಎಸ್ಪಿ ಶಾಸಕ ಇಕ್ಬಾಲ್ ಮೆಹಮೂದ್ ಅವರ ಪುತ್ರ ಸೊಹೈಲ್ ಇಕ್ಬಾಲ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಬಾರ್ಕ್ ಮತ್ತು ಸೊಹೈಲ್ ಹಿಂಸಾಚಾರಕ್ಕೆ ಕಾರಣವಾದ ಜನರನ್ನು ಪ್ರಚೋದಿಸಿದ್ದಾರೆ ಎಂಬ ಆರೋಪಕ್ಕೆ ಒಳಗಾಗಿದ್ದಾರೆ.

ಇನ್ನು ಭಾನುವಾರ ಮಧ್ಯಾಹ್ನದಿಂದ ಜಿಲ್ಲೆಯಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ರಾಜೇಂದ್ರ ಪೆನ್ಸಿಯಾ ಮತ್ತು ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಸಂಭಾಲ್ ಕೃಷ್ಣ ಕುಮಾರ್ ಬಿಷ್ಣೋಯ್ ಸೋಮವಾರ ಮಧ್ಯಾಹ್ನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಈ ವೇಳೆ ವೀಡಿಯೊ ತುಣುಕಿನ ಆಧಾರದ ಮೇಲೆ ಗಲಭೆಕೋರರನ್ನು ಗುರುತಿಸಿ, ಬಂಧಿಸಿ ಜೈಲಿಗೆ ಕಳುಹಿಸಲಾಗುವುದು ಎಂದು ಅವರು ಹೇಳಿದ್ದಾರೆ. ಈ ಸಂಬಂಧ ಒಟ್ಟು ಏಳು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಸಂಗಾತಿಗೆ ಮೋಸ ಮಾಡುವುದು ಅಪರಾಧವಲ್ಲ; ನ್ಯೂಯಾರ್ಕ್‌ನ ಹೊಸ ಕಾನೂನಿಗೆ ಗವರ್ನರ್ ಸಹಿ



ನ್ಯೂಯಾರ್ಕ್: ಸಂಗಾತಿಗೆ ಯಾರೇ ಮೋಸ ಮಾಡಿದರೂ ಅಪರಾಧ ಎಂದು ಪರಿಗಣಿಸುವುದಿಲ್ಲ. ಈ ಹೊಸ ಕಾನೂನು ಬರುತ್ತಿರುವುದು ನ್ಯೂಯಾರ್ಕ್‌ನಲ್ಲಿ.

ನ್ಯೂಯಾರ್ಕ್ ಗವರ್ನರ್ ಕ್ಯಾಥಿ ಹೊಚುಲ್ ಈ ಮಸೂದೆಗೆ ಸಹಿ ಹಾಕಿದ್ದಾರೆ. ಈ ಹೊಸ ಕಾನೂನಿನಲ್ಲಿ ಸಂಗಾತಿ ಮೋಸ ಮಾಡಿ ಬೇರೆ ಸಂಬಂಧ ಬೆಳೆಸುವುದು ಸೇರಿದಂತೆ ಇತರ ವಂಚನೆಗಳನ್ನು ಅಪರಾಧ ಎಂದು ಪರಿಗಣಿಸುವುದಿಲ್ಲ. 107 ವರ್ಷಗಳ ಹಿಂದಿನ ವಿಶೇಷ ಕಾನೂನಿನಲ್ಲಿ ಸಂಗಾತಿಗೆ ಮೋಸ, ವ್ಯಭಿಚಾರ ಪ್ರಕರಣದಲ್ಲಿ ಮೂರು ತಿಂಗಳವರೆಗೆ ಜೈಲು ಶಿಕ್ಷೆ ನೀಡುವ ಅವಕಾಶವಿತ್ತು. ಆದರೆ ಹೊಸ ಕಾನೂನು ಇದ್ಯಾವುದಕ್ಕೂ ಅವಕಾಶ ನೀಡುವುದಿಲ್ಲ. ಹೊಸ ಮಸೂದೆಗೆ ಸಹಿ ಹಾಕಿದ ಗವರ್ನರ್ ಕ್ಯಾಥಿ, ಕಳೆದ 40 ವರ್ಷಗಳಿಂದ ನನ್ನ ಪತಿ ಜೊತೆ ಪ್ರೀತಿಯ ವೈವಾಹಿಕ ಜೀವನ ನಡೆಸುತ್ತಿದ್ದೇನೆ. ಇದು ನನ್ನ ಅದೃಷ್ಟ, ಆದರೆ ಅತ್ಯಂತ ಹಳೆಯ ವ್ಯಭಿಚಾರವನ್ನು ಅಪರಾಧೀಕರಿಸುವ ಬಿಲ್ ಸಹಿ ಹಾಕುವುದು ವಿಪರ್ಯಾಸ ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

ಅದಾನಿಯ 100 ಕೋಟಿ ದೇಣಿಗೆ ಸ್ವೀಕರಿಸಲ್ಲ



ಹೈದರಾಬಾದ್: ತೆಲಂಗಾಣದಲ್ಲಿ 'ಯಂಗ್ ಇಂಡಿಯಾ ಸ್ಕಿಲ್ ಯೂನಿವರ್ಸಿಟಿ' ಸ್ಥಾಪನೆಗಾಗಿ ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಘೋಷಿಸಿದ್ದ 100 ಕೋಟಿ ದೇಣಿಗೆಯನ್ನು ತೆಲಂಗಾಣ ಸರ್ಕಾರ ಸ್ವೀಕರಿಸುವುದಿಲ್ಲ ಎಂದು ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಹೇಳಿದ್ದಾರೆ.

ದೇಣಿಗೆ ಸ್ವೀಕರಿಸಿದರೆ ಅದು ರಾಜ್ಯ ಸರ್ಕಾರ ಅಥವಾ ಸಿಎಂ ಪರವಾಗಿ ಕಾಣಿಸಬಹುದು ಎಂಬ ಅದಾನಿ ಅವರ ಹೇಳಿಕೆ ಅನಗತ್ಯ ಚರ್ಚೆಗೆ ಕಾರಣವಾದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅದಾನಿ ಗ್ರೂಪ್ ಸೇರಿದಂತೆ ಯಾವುದೇ ಸಂಸ್ಥೆಯಿಂದ ತೆಲಂಗಾಣ ಸರ್ಕಾರ ತನ್ನ ಖಾತೆಗೆ 1 ರೂಪಾಯಿಯನ್ನೂ ಸ್ವೀಕರಿಸಿಲ್ಲ ಎಂದರು.

ನಾನು, ನನ್ನ ಸಚಿವ ಸಂಪುಟದ ಸಹೋದ್ಯೋಗಿಗಳು ಅನಗತ್ಯ ಚರ್ಚೆಗಳು ಮತ್ತು ಸನ್ನಿವೇಶಗಳಲ್ಲಿ ಭಾಗಿಯಾಗಲು ಬಯಸುವುದಿಲ್ಲ. ಅದು ರಾಜ್ಯ ಸರ್ಕಾರ ಅಥವಾ ನನ್ನ ಸ್ವಂತ ಪ್ರತಿಷ್ಠೆಗೆ ಧಕ್ಕೆ ತರುತ್ತದೆ. ಅದಕ್ಕಾಗಿಯೇ ರಾಜ್ಯ ಸರ್ಕಾರದ ಪರವಾಗಿ ನಮ್ಮ ಅಧಿಕಾರಿ ಜಯೇಶ್ ರಂಜನ್, ಅದಾನಿ ಅವರಿಗೆ ಪತ್ರ ಬರೆದು, ಸದ್ಯದ ಪರಿಸ್ಥಿತಿ, ವಿವಾದಗಳಿಂದಾಗಿ ನಿಮ್ಮ 100 ಕೋಟಿ ದೇಣಿಗೆಯನ್ನು ಸ್ವೀಕರಿಸಲು ತೆಲಂಗಾಣ ಸರ್ಕಾರ ಸಿದ್ಧವಾಗಿಲ್ಲ ಎಂದರು.

ಕಚೇರಿಯಲ್ಲಿ ನಿದ್ದೆಗೆ ಜಾರಿ ವಜಾಗೊಂಡ ಉದ್ಯೋಗಿಗೆ 4 ಕೋಟಿ ರೂ. ಪರಿಹಾರ!

ಝ್ಯೆಂಗ್ಸೂ: ಕಚೇರಿಯಲ್ಲಿ ಉದ್ಯೋಗಿಯೊಬ್ಬ ತೂಕಡಿಸಿದ್ದಾನೆ. ನಿದ್ದೆ ನಿಯಂತ್ರಿಸಲು ಸಾಧ್ಯವಾಗದ ಕಾರಣ ಹಾಗೇ ಡೆಸ್ಕ್ ಮೇಲೆ ಮಲಗಿದ್ದಾನೆ. ಆದರೆ ಕೆಲಸದ ಸಮಯದಲ್ಲೇ ನಿದ್ದೆಗೆ ಜಾರಿದ ಉದ್ಯೋಗಿಯನ್ನು ಕೆಮಿಕಲ್ ಕಂಪನಿ ಕೆಲಸದಿಂದ ವಜಾ ಮಾಡಿದೆ. ಆದರೆ ಕಂಪನಿ ವಿರುದ್ಧ ಕಾನೂನು ಹೋರಾಟ ಮಾಡಿದ ಉದ್ಯೋಗಿಗೆ ಬರೋಬ್ಬರಿ 4 ಕೋಟಿ ರೂ. ಪರಿಹಾರದ ರೂಪದಲ್ಲಿ ನೀಡುವಂತೆ ಕೋರ್ಟ್ ಆದೇಶಿಸಿದ ಘಟನೆ ಚೀನಾದ ಝ್ಯೆಂಗ್ಸೂ ಪ್ರಾಂತ್ಯದಲ್ಲಿ ನಡೆದಿದೆ. ಝ್ಯಾಂಗ್ ಎಂಬ ಉದ್ಯೋಗಿ ಕಳೆದ 20 ವರ್ಷದಿಂದ ಕೆಮಿಕಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಕೆಲ ಉದ್ಯೋಗಿಗಳು ಕಂಪನಿ ತೊರೆದಿದ್ದರು. ಹೀಗಾಗಿ ಝ್ಯಾಂಗ್ ತಡರಾತ್ರಿವರೆಗೂ ಕೆಲಸ ಮಾಡಿ, ಮರುದಿನ ಬೆಳಗ್ಗೆ ಎಂದಿನಂತೆ ಕೆಲಸಕ್ಕೆ ಹಾಜರಾಗಿದ್ದ. ಆದರೆ ಮಧ್ಯಾಹ್ನ ಕೆಲಸ ಮಾಡುತ್ತಿದ್ದ ವೇಳೆ ಡೆಸ್ಕ್‌ನಲ್ಲಿ ಮಲಗಿ ನಿದ್ದೆ ಮಾಡಿದ್ದಾನೆ. ಇಂತಹ ನಡವಳಿಕೆಯನ್ನು ಕಂಪನಿ ಸಹಿಸಿಕೊಳ್ಳುವುದಿಲ್ಲ ಎಂದು ಕಂಪೆನಿ ಆತನನ್ನು ಕೆಲಸದಿಂದ ವಜಾ ಮಾಡಿತ್ತು. ನಿದ್ದೆ ಮಾಡಿದ ಕಾರಣಕ್ಕೆ ಏಕಾಏಕಿ ಕೆಲಸದಿಂದ ತೆಗೆದುಹಾಕಿದ ಕಂಪನಿ ವಿರುದ್ಧ ಝ್ಯಾಂಗ್ ಕಾನೂನು ಹೋರಾಟಕ್ಕೆ ಮುಂದಾಗಿದ್ದಾನೆ. ಮಲಗಿದ ಕಾರಣಕ್ಕೆ ಕೆಲಸದಿಂದ ತೆಗೆದು ಹಾಕಲು ಕಾರಣವೇ ಅಲ್ಲ. ಹೀಗಾಗಿ ಉದ್ಯೋಗಿಗೆ 4 ಕೋಟಿ ರೂಪಾಯಿ ಪರಿಹಾರ ನೀಡುವಂತೆ ಕೋರ್ಟ್ ಆದೇಶಿಸಿದೆ.

3 ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಿ

ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ವೆಂಕಟ್ ರಾಜಾ ಸೂಚನೆ

ಮಡಿಕೇರಿ, ನ.25–ಪ್ರಸಕ್ತ ಮುಂಗಾರಿನಲ್ಲಿ ಸುರಿದ ಧಾರಾಕಾರ ಮಳೆಗೆ ರಸ್ತೆ, ಸೇತುವೆ, ಮನೆ ಹಾಗೂ ಸರ್ಕಾರಿ ಕಟ್ಟಡಗಳು ಹಾನಿಯಾಗಿದ್ದು, ಈ ಸಂಬಂಧ ಕಾಮಗಾರಿ ಕೈಗೊಳ್ಳಲು ಈಗಾಗಲೇ ಆಡಳಿತಾತ್ಮಕ ಅನುಮೋದನೆ ನೀಡಿ ಶೇ.75ರಷ್ಟು ಹಣ ಬಿಡುಗಡೆ ಮಾಡಲಾಗಿದೆ. ಆದ್ದರಿಂದ 90 ದಿನ (3 ತಿಂಗಳು)ದೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ನಿರ್ದೇಶಿಸಿದರು.

ವಿಡಿಯೋ ಸಂವಾದದ ಮೂಲಕ ಸೋಮವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ ನಡೆಸಿ ಮಾತನಾಡಿದ ಅವರು,



ಮನೆ ಹಾನಿ ಸಂಬಂಧಿಸಿದಂತೆ ಕಂದಾಯ ಸಚಿವರ ಆದೇಶದಂತೆ ಕಾಮಗಾರಿ ಕೈಗೊಳ್ಳಬೇಕು. ಪ್ಯಾಕೇಜ್ ವರ್ಕ್ ಸೇರಿದಂತೆ ಎಲ್ಲಾ ಕೆಲಸಗಳನ್ನು ಫೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ನ.30ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆಯುವ ಕೆಡಿಪಿ ಸಭೆಗೆ ಅಧಿಕಾರಿಗಳು ಎಲ್ಲಾ ಪೂರ್ವ ತಯಾರಿ ಮಾಡಿಕೊಳ್ಳಬೇಕು.

–ವೆಂಕಟ್ ರಾಜಾ, ಜಿಲ್ಲಾಧಿಕಾರಿ

ಲೋಕೋಪಯೋಗಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಕ ಸಲ್ಲಿಸಲಾಗಿದ್ದ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದೆ. ಹಣ ಬಿಡುಗಡೆ ಮಾಡಲಾಗಿದ್ದು, ಕೂಡಲೇ ಕಾಮಗಾರಿ ಕೈಗೊಳ್ಳಬೇಕು ಎಂದು ಸೂಚಿಸಿದರು.

ಆ.2ರಂದು ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹಾಗೂ ವಿರಾಜಪೇಟೆ ತಾಲೂಕಿನ ಕೆದಮಳ್ಳೂರು ಗ್ರಾಮದ ಬಳಿ ರಸ್ತೆ ಕುಸಿತ ಸೇರಿದಂತೆ ವಿವಿಧ ಪ್ರದೇಶಗಳಿಗೆ ಮುಖ್ಯಮಂತ್ರಿಗಳು ಭೇಟಿ ನೀಡಿ ವೀಕ್ಷಿಸಿದ್ದರು. ಈ ಸಂಬಂಧ ಕಾಮಗಾರಿಗಳನ್ನು ಆದ್ಯತೆ ಮೇಲೆ ತ್ವರಿತವಾಗಿ ಪೂರ್ಣಗೊಳಿಸಬೇಕು. ತಹಸೀಲ್ದಾರ್‌ಗಳು ಕಾಮಗಾರಿಗಳನ್ನು ಕಾಲ ಕಾಲಕ್ಕೆ ವೀಕ್ಷಿಸಿ ವರದಿ ನೀಡಬೇಕು. ಮೂರನೇ ಪಾರ್ಟಿಯಿಂದಲೂ ಕಾಮಗಾರಿ ಸಂಬಂಧ ಮಾಹಿತಿ ಒದಗಿಸುವಂತೆ ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಆದೇಶಿಸಿದರು.

ವಿಡಿಯೋ ಸಂವಾದದಲ್ಲಿ ಪಂಚಾಯತ್ ರಾಜ್ ಇಲಾಖೆಯ ಇಂಜಿನಿಯರ್ ನಾಯಕ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಮುತ್ತುರಾಜ್ ಹಲವು ಮಾಹಿತಿ ನೀಡಿದರು. ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ದೇವಟ್ ಪರಂಬುವಿನಲ್ಲಿ ವಿಶೇಷ ಪ್ರಾರ್ಥನೆ

ಮಡಿಕೇರಿ, ನ.25–ಕೊಡವ ನ್ಯಾಷನಲ್ ಡೇ ಮತ್ತು ಸಂವಿಧಾನ ದಿನಾಚರಣೆ ಯಶಸ್ಸಿಗಾಗಿ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ನೇತೃತ್ವದಲ್ಲಿ ಪ್ರಮುಖರು ದೇವಟ್ ಪರಂಬುವಿನಲ್ಲಿ ಸೋಮವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ನರಮೇಧದ ಸ್ಮಾರಕ ಸ್ಥಳದಲ್ಲಿ ಪುಷ್ಪ ನಮನ ಸಲ್ಲಿಸಿ ಸಿಎನ್‌ಸಿ ಬೇಡಿಕೆಗಳ ಈಡೇರಿಕೆಗೆ ಶಕ್ತಿ ತುಂಬುವಂತೆ ಕೋರಿದರು. ಈ ಸಂದರ್ಭ ಮಾತನಾಡಿದ ಎನ್.ಯು. ನಾಚಪ್ಪ, ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆ, ಕೊಡವ ಬುಡಕಟ್ಟು ಜನಾಂಗಕ್ಕೆ ಆಂತರಿಕ ರಾಜಕೀಯ ಸ್ವ–ನಿರ್ಣಯ ಹಕ್ಕು ಮತ್ತು ಎಸ್‌ಟಿ ಟ್ಯಾಗ್ ನೀಡಬೇಕು. ಅಂತಾರಾಷ್ಟ್ರೀಯ ಕಾನೂನಿನಡಿ ಕೊಡವ ಬುಡಕಟ್ಟಿನ ಮಾತೃ ಮಣ್ಣಿನಲ್ಲಿ ಐತಿಹಾಸಿಕ ನಿರಂತರತೆಗಾಗಿ ಸಾರ್ವತ್ರಿಕ ಮನ್ನಣೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.



ದೇವಟ್‌ಪರಂಬುವಿನಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಪ್ರಮುಖರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಕೊಡವ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆಯ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಂವಿಧಾನಿಕ ಖಾತ್ರಿ ಒದಗಿಸಬೇಕು. ಸಂವಿಧಾನದ 25 ಮತ್ತು 26ನೇ ವಿಧಿಗಳ ಅಡಿಯಲ್ಲಿ ಕೊಡವ ಸಾಂಪ್ರದಾಯಿಕ ಸಂಸ್ಕಾರ ಕೋವಿ ಹಕ್ಕಿಗೆ ಸಾಂವಿಧಾನಿಕ ಭದ್ರತೆ ನೀಡಬೇಕು. ದೇವಟ್‌ಪರಂಬ್‌ನಲ್ಲಿ ಅಂತಾರಾಷ್ಟ್ರೀಯ ಕೊಡವ ನರಮೇಧದ ಸ್ಮಾರಕ ನಿರ್ಮಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಕೊಡವ ನ್ಯಾಷನಲ್ ಡೇ ವೇಳೆ ಮಂಡಿಸುವುದಾಗಿ ತಿಳಿಸಿದರು.

ಇದೇ ವೇಳೆ ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಚೀಯಬೇರ ಸತೀಶ್ ಹಿರಿಯರಿಗೆ ಗೌರವ ಅರ್ಪಿಸಿದರು.

ವಿರಾಜಪೇಟೆ ಕಾವೇರಿ ಕಾಲೇಜಿನಲ್ಲಿ ಕ್ರೀಡಾ ಮೇಳ

ವಿರಾಜಪೇಟೆ, ನ.25–ದೈಹಿಕ ಹಾಗೂ ಮಾನಸಿಕ ಸದೃಢತೆ ಕಾಪಾಡಲು ಕ್ರೀಡೆ ಮಹತ್ವವಾದದ್ದು ಎಂದು ರಾಷ್ಟ್ರೀಯ ಆರೋಗ್ಯ ಮಿಷನ್‌ನ ಕೊಡಗು ಸದಸ್ಯ ಡಾ.ಮಾತಂಡ ಆರ್.ಅಯ್ಯಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಕಾವೇರಿ ಪದವಿ ಕಾಲೇಜಿನಲ್ಲಿ ನಡೆದ ಕ್ರೀಡಾ ಮೇಳ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ರೀಡೆ ದೈಹಿಕ ಹಾಗೂ ಮಾನಸಿಕ ತಡೆಗೆ ಒಂದು ಮಹತ್ವಪೂರ್ಣ ವ್ಯಾಯಾಮ. ಕ್ರೀಡೆ ನಮ್ಮ ಜೀವನಶೈಲಿ ಮತ್ತು ಸಂಸ್ಕೃತಿ ಪ್ರತಿಬಿಂಬಿಸುವ ಒಂದು ಅಂಶವಾಗಿದೆ. ಹಿರಿಯರಿಗೆ ಗೌರವ ನೀಡುವುದು, ಗೆಲುವಿಗಾಗಿ ಒಗ್ಗಟ್ಟಿನಿಂದ ಶ್ರಮಿಸುವುದು, ಸಂಭ್ರಮಿಸುವುದು, ಕ್ರೀಡಾಪಟುಗಳಿಗೆ ಉತ್ತೇಜನ ನೀಡುವುದು ಕ್ರೀಡೆಯಿಂದ ಸಾಧ್ಯವಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಯುವ ಜನತೆ ಕ್ರೀಡೆಗಿಂತ ಮೊಬೈಲ್, ಟಿವಿ ಹಾಗೂ ಸಾಮಾಜಿಕ ಜಾಲತಾಣಗಳಿಗೆ ಮಾರು ಹೋಗಿದ್ದಾರೆ. ಇದರಿಂದ ದೈಹಿಕ ಹಾಗೂ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದಾರೆ. ಜೊತೆಗೆ ಯುವ ಪೀಳಿಗೆ ಸಮಾಜದ ಸಂಭ್ರಮದಿಂದ ದೂರ ಉಳಿಯುತ್ತಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಬೆನೆಡಿಕ್ಟ್ ಆರ್.ಸಲ್ದಾನ್ ಮಾತನಾಡಿ, ಕ್ರೀಡೆ ಎನ್ನುವುದು ದೈಹಿಕ ಹಾಗೂ ಮಾನಸಿಕವಾಗಿ ಒಗ್ಗೂಡಿಸುವಂತದ್ದು. ನಿರಂತರ ಕ್ರೀಡಾಕೂಟಗಳ ಆಯೋಜನೆಯಿಂದ ಯುವಜನರನ್ನು ಸದೃಢಗೊಳಿಸುತ್ತದೆ. ನಮ್ಮ ಸಂಸ್ಥೆ ವಿದ್ಯಾರ್ಥಿಗಳಿಗೆ ಕೇವಲ ಪಠ್ಯ ಚಟುವಟಿಕೆಗಳನ್ನು ಮಾತ್ರ ನಡೆಸದೆ ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಮಹತ್ವ ನೀಡುತ್ತಿದೆ ಎಂದರು.

ಇದೇ ವೇಳೆ ಕ್ರೀಡಾ ಮೇಳದ ವಿವಿಧ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕ ತಮ್ಮಯ್ಯ, ಐಕ್ಯೂಎಸಿ ಸಂಯೋಜಕಿ ಪ್ರಿಯಾ, ವಿದ್ಯಾರ್ಥಿ ಕ್ಷೇಮ ಪಾಲನ ಸಮಿತಿ ಸಂಚಾಲಕ ನಾಗರಾಜು, ಕ್ರೀಡಾ ನಾಯಕ ಕಾರ್ಯಪ್ಪ ಉಪಸ್ಥಿತರಿದ್ದರು.



ವಿರಾಜಪೇಟೆ ಕಾವೇರಿ ಪದವಿ ಕಾಲೇಜಿನಲ್ಲಿ ನಡೆದ ಕ್ರೀಡಾ ಮೇಳದ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಂದಾಯ ಸಚಿವರಿಗೆ ಮನವಿ ಸಲ್ಲಿಕೆ...



ಸರ್ಕಾರ ಭೂ ಕಾಯ್ದೆ ಸಂಬಂಧ ಕೊಡಗು ಜಿಲ್ಲೆಯಲ್ಲಿ ಸೂಕ್ತವಾಗಿ ಪರಿಶೀಲಿಸಿ, ಬಡವರಿಗೆ ನಿವೇಶನಕ್ಕೆ ಭೂಮಿ ಕಾಯ್ದಿರಿಸುವಂತೆ ಒತ್ತಾಯಿಸಿ ಭೂಮಿ ಮತ್ತು ವಸತಿ ವಂಚಿತರ ಹೋರಾಟ ಸಮಿತಿ ವತಿಯಿಂದ ಕಂದಾಯ ಸಚಿವ ಕೃಷ್ಣಭೈರೇಗೌಡ ಅವರಿಗೆ ಮನವಿ ಸಲ್ಲಿಸಲಾಯಿತು. ಸಮಿತಿ ಅಧ್ಯಕ್ಷ ಮೊಣ್ಣಪ್ಪ, ಪೆಗ್ಗೋಳಿ ನಿವೇಶನ ಹೋರಾಟ ಸಮಿತಿ ಹೆಚ್.ಎಸ್.ಭೋಜ. ಹೆಚ್.ಎಸ್.ಸತೀಶ್, ಬಿ.ಆರ್.ಪುನೀತ್, ಕುಮಾರ್ ಸಮಾತಳ ಇದ್ದರು.

ನ.30, ಯುವಜನೋತ್ಸವ

ಮಡಿಕೇರಿ: ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ಜಿಲ್ಲಾ, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲೂಕು ಯುವ ಒಕ್ಕೂಟ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ ನ.30ರಂದು ಬೆಳಗ್ಗೆ 9 ಗಂಟೆಗೆ ನಗರದ ಎಫ್‌ಎಂಕೆಎಂಸಿ ಕಾಲೇಜಿನಲ್ಲಿ ನಡೆಯಲಿದೆ.

ವಕೀಲರ ಸಂಘದಿಂದ ವಿದ್ಯಾಧರ್ ಅಮಾನತು

ಮಡಿಕೇರಿ, ನ.25–ವೀರ ಸೇನಾನಿಗಳಾದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ಕೆ.ಎಸ್.ತಿಮ್ಮಯ್ಯ ಅವರನ್ನು ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಮಾಡಿರುವ ವಕೀಲ ಕೆ.ಆರ್. ವಿದ್ಯಾಧರ್ ಅವರನ್ನು ವಕೀಲರ ಸಂಘದಿಂದ 6 ತಿಂಗಳವರೆಗೆ ಅಮಾನತು ಮಾಡಲಾಗಿದೆ ಎಂದು ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಎಂ.ಎ.ನಿರಂಜನ್ ತಿಳಿಸಿದ್ದಾರೆ.



ವಕೀಲ ವಿದ್ಯಾಧರ್

ಭಾರತೀಯ ಸೇನೆಯಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ವೀರ ಯೋಧರಾದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಗೂ ಪದ್ಮಭೂಷಣ ಜನರಲ್ ಕೆ.ಎಸ್. ತಿಮ್ಮಯ್ಯ ಅವರನ್ನು ಸಾಮಾಜಿಕ ಜಾಲತಾಣದಲ್ಲಿ ಅವಮಾನ ಮಾಡಿದ ವಕೀಲರ ಸಂಘದ ಸದಸ್ಯ ಕೆ.ಆರ್.ವಿದ್ಯಾಧರ್ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ನಾಗರಿಕ ಸಮಾಜದಿಂದ ವಿರೋಧ ವ್ಯಕ್ತವಾಗಿರುವುದನ್ನು ವಕೀಲರ ಸಂಘ ಗಮನಿಸಿದೆ. ಸಾಮಾಜಿಕ ನ್ಯಾಯ ಒದಗಿಸುವ ಶಾಂತಿ, ಸಹಬಾಳ್ವೆ ಜೀವನಕ್ಕೆ ಒತ್ತು ನೀಡಿ ಕರ್ತವ್ಯ ನಿರ್ವಹಿಸುವ ವಕೀಲರು, ನಾಗರಿಕ ಸಮಾಜ ತಲೆತಗ್ಗಿಸುವಂತಹ ವಿಚಾರ ಎಂಬುದನ್ನು ಮನಗಂಡು ಸಂಘದ ವಿಶೇಷ ಮಹಾಸಭೆ ನಡೆಸಲಾಯಿತು. ಸಭೆಯಲ್ಲಿ ಸರ್ವ ಸದಸ್ಯರು ಒಕ್ಕೊರಲಿನಿಂದ ಅವಹೇಳನ ಖಂಡಿಸಿದ್ದು, ಶಿಸ್ತು ಕ್ರಮದ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗುವುದು. ವಕೀಲರ ಕೆ.ಆರ್.ವಿದ್ಯಾಧರ್ ಅವರನ್ನು 6 ತಿಂಗಳವರೆಗೆ ಅಮಾನತು ಮಾಡಲಾಗಿದೆ ಎಂದು ನಿರಂಜನ್ ತಿಳಿಸಿದ್ದಾರೆ.

ಪ್ಲಾಸ್ಟಿಕ್ ಅಕ್ಕಿ ಮಾರಾಟ ಆರೋಪ: ತಹಸೀಲ್ದಾರ್ ಪರಿಶೀಲನೆ

ಗೋಣಿಕೊಪ್ಪ, ನ.25–ಪ್ಲಾಸ್ಟಿಕ್ ಅಕ್ಕಿ ಮಾರಾಟ ಆರೋಪ ಹಿನ್ನೆಲೆಯಲ್ಲಿ ಪೊನ್ನಂಪೇಟೆ ಗುಡ್‌ವ್ಹೀಲ್ ಸೂಪರ್ ಮಾರ್ಕೆಟ್‌ಗೆ ತಹಸೀಲ್ದಾರ್ ಮೋಹನ್ ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ಗುಡ್ ವ್ಹೀಲ್ ಸೂಪರ್ ಮಾರ್ಕೆಟ್‌ನಲ್ಲಿ ಪ್ಲಾಸ್ಟಿಕ್ ಅಕ್ಕಿ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿ ಪೊರಾಡು ಬಾಡಗರಕೇರಿ ಗ್ರಾಮದ ವಕೀಲ ಅಣ್ಣೀರ ಪ್ರಭು ಪೂವಯ್ಯ ಹಾಗೂ ಕೆಲ ಸಾರ್ವಜನಿಕರು, ಪೊನ್ನಂಪೇಟೆ ಪಟ್ಟಣ ಪಂಚಾಯಿತಿ ಅಧ್ಯಕ್ಷ ಅಣ್ಣೀರ ಹರೀಶ್ ಹಾಗೂ ನನ್ನ ಗಮನಕ್ಕೆ ತಂದಿದ್ದರು. ಈ ಹಿನ್ನೆಲೆಯಲ್ಲಿ ಸೂಪರ್ ಮಾರ್ಕೆಟ್ ಪರಿಶೀಲಿಸಲಾಗಿದೆ ಎಂದು ತಹಸೀಲ್ದಾರ್ ಮೋಹನ್ ಕುಮಾರ್ ತಿಳಿಸಿದರು.



ಪೊನ್ನಂಪೇಟೆ ಗುಡ್ ವ್ಹೀಲ್ ಸೂಪರ್ ಮಾರ್ಕೆಟ್‌ಗೆ ತಹಸೀಲ್ದಾರ್ ಮೋಹನ್ ಕುಮಾರ್ ಭೇಟಿ ನೀಡಿ, ಪರಿಶೀಲಿಸಿದರು.

ಮಾರ್ಕೆಟ್‌ನಲ್ಲಿ ಈಗಿರುವ ಅಕ್ಕಿಯನ್ನು ಮಾರಾಟ ಮಾಡಬಾರದೆಂದು ಮಾಲೀಕರಿಗೆ ಸೂಚನೆ ನೀಡಲಾಗಿದೆ. ಪ್ಲಾಸ್ಟಿಕ್ ಅಕ್ಕಿ ಕಂಡುಬಂದಲ್ಲಿ ಅಂಗಡಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಸೀತಾ ನಿಧನ



ನಾಪೋಕ್ಲು, ನ.25–ಬೆಂಗಳೂರಿನಲ್ಲಿ ವಾಸವಿದ್ದ ನಾಪೋಕ್ಲುವಿನ ದಿವಂಗತ ಮೂವೇರ ಪೂವಯ್ಯ ಅವರ ಪತ್ನಿ ಸೀತಾ (86) ಶನಿವಾರ ನಿಧನರಾದರು.

ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಬೆಂಗಳೂರಿನ ಲಾಲ್‌ಬಾಗ್‌ನ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಜಾನುವಾರು ಅಕ್ರಮ ಸಾಗಣೆ: 9 ಮಂದಿ ಬಂಧನ

ಚಾಮರಾಜನಗರ, ನ.25–ಅಕ್ರಮವಾಗಿ ಕಸಾಯಿಖಾನೆಗೆ ಸಾಗಿಸುತ್ತಿದ್ದ 33 ಜಾನುವಾರುಗಳನ್ನು ರಕ್ಷಿಸಿದ ರಾಮಸಮುದ್ರ ಠಾಣೆ ಪೊಲೀಸರು, 9 ಮಂದಿಯನ್ನು ಬಂಧಿಸಿದ್ದಾರೆ.

ಮಧು, ಮನೋಜ್, ಅಕ್ರಂಪಾಷ, ಇಕ್ರಂಪಾಷ ಸೇರಿದಂತೆ ಚಾಮರಾಜನಗರ, ತೆರಕಣಾಂಬಿ, ಮೂಗೂರು, ಕೊಯಮತ್ತೂರು ಹಾಗೂ ತುಮಕೂರು ಮೂಲದ 9 ಮಂದಿ ಬಂಧಿತರು.

ಬಂಧಿತರು ತಿ.ನರಸೀಪುರ ಸಂತೆಯಿಂದ ಚಾಮರಾಜನಗರ ಮಾರ್ಗವಾಗಿ ತಾಳವಾಡಿಗೆ 5 ಗೂಡ್ಸ್ ವಾಹನಗಳಲ್ಲಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದರು. ಇದೇ ವೇಳೆ ತಾಲೂಕಿನ ಅಂಕನಶೆಟ್ಟಿ ಗ್ರಾಮದ ಬಳಿ ಪೊಲೀಸರು ವಾಹನಗಳನ್ನು ಪರಿಶೀಲಿಸಿದಾಗ 15 ಹಸು, 11 ಕರು ಹಾಗೂ 7 ಎಮ್ಮೆ ಸೇರಿದಂತೆ 33 ಜಾನುವಾರುಗಳು ಪತ್ತೆಯಾಗಿದ್ದವು. ನಂತರ



ಗೂಡ್ಸ್ ವಾಹನಗಳಲ್ಲಿ ಸಾಗಿಸುತ್ತಿದ್ದ ಜಾನುವಾರುಗಳನ್ನು ವಶಪಡಿಸಿಕೊಂಡಿರುವುದು.

ಜಾನುವಾರುಗಳನ್ನು ರಕ್ಷಿಸಿ, ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ರಾಮಸಮುದ್ರ ಠಾಣೆ ಇನ್‌ಸ್ಪೆಕ್ಟರ್ ಎಂ.ದಿವಾಕರ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದ್ದರೂ ಜಿಲ್ಲೆಯಲ್ಲಿ ಎಗ್ಗಿಲ್ಲದೆ ಕಸಾಯಿಖಾನೆಗೆ ಜಾನುವಾರುಗಳನ್ನು ಸಾಗಿಸುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಕುಡಿಯುವ ನೀರಿಗೆ 180 ಕೋಟಿ ರೂ. ಬಿಡುಗಡೆ

• ಸದ್ಯದಲ್ಲೇ ನೀರಿನ ಸಮಸ್ಯೆ ಪರಿಹಾರ • ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾಹಿತಿ

ಚಾಮರಾಜನಗರ, ನ.25– 180 ಕೋಟಿ ರೂ. ವೆಚ್ಚದಲ್ಲಿ ಮಾಲಂಗಿಯಿಂದ ನಗರಕ್ಕೆ ಕುಡಿಯುವ ನೀರು ಯೋಜನೆಗೆ ಅನುದಾನ ಬಿಡುಗಡೆ ಮಾಡುವುದಾಗಿ ನಗರಾಭಿವೃದ್ಧಿ ಸಚಿವರು ತಿಳಿಸಿದ್ದು, ಸದ್ಯದಲ್ಲೇ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಲಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರಸಭಾ ವ್ಯಾಪ್ತಿಯ ರಾಮಸಮುದ್ರದ 29 ವಾರ್ಡ್‌ನ ಸುಬೇದಾರ್ ಕಟ್ಟೆ ಬಳಿ ಸೋಮವಾರ ಸ್ವಚ್ಛ ಸರ್ವೇಕ್ಷಣ್–2024ರ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ನಗರಸಭೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಹಸಿ ಮತ್ತು ಒಣ ಕಸದ ಡಸ್ಟ್‌ಬಿನ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 38–40 ಕೋಟಿ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣವಾಗಲಿದೆ. ಇವೆಲ್ಲವೂ ನಗರದ ಅಭಿವೃದ್ಧಿಗೆ ಪೂರಕವಾಗಿವೆ. ಚಾಮರಾಜನಗರ ಅಭಿವೃದ್ಧಿಗೆ 2013ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 50 ಕೋಟಿ ರೂ. ಅನುದಾನ ನೀಡಿ, ವಿಶೇಷ ಪ್ಯಾಕೇಜ್ ಘೋಷಿಸಿದ್ದರು ಎಂದರು.

ನಗರಸಭಾ ವ್ಯಾಪ್ತಿ 31 ವಾರ್ಡ್‌ಗಳಿದ್ದು, ಸಮರ್ಪಕ ಒಳಚರಂಡಿ ಕಾಮಗಾರಿಗೆ 120 ಕೋಟಿ ರೂ. ಅನುದಾನದ ಅಗತ್ಯವಿದೆ. ಮುಖ್ಯಮಂತ್ರಿಗಳು ಅನುದಾನ ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಇದರಿಂದ ನಗರಸಭೆ ವ್ಯಾಪ್ತಿಯ ಮೂಲಸೌಕರ್ಯವಂಚಿತ ವಿವಿಧ ಬಡಾವಣೆಗಳು ಅಭಿವೃದ್ಧಿ ಕಾಣಲಿವೆ. ಎಸ್‌ಎಫ್‌ಸಿ ಅನುದಾನ, 12, 13, 15ನೇ ಹಣಕಾಸು, ಶಾಸಕರು, ಸಂಸದರ ನಿಧಿ ಹಾಗೂ ಇತರೆ ಯೋಜನೆಗಳ ಅನುದಾನಗಳಿಂದ ನಗರಾಭಿವೃದ್ಧಿ ಸಾಧ್ಯವಾಗುವುದಿಲ್ಲ. ಜೊತೆಗೆ ನಾಗರಿಕರು ಕಡ್ಡಾಯವಾಗಿ ನೀರು ಹಾಗೂ ಮನೆ ಕಂದಾಯ ಪಾವತಿಸುವುದರಿಂದ ನಗರಸಭೆಗೆ ಹೆಚ್ಚಿನ ತೆರಿಗೆ ಸಂಗ್ರಹವಾಗಲಿದೆ. ಇದರಿಂದ ನಗರಸಭಾ ವ್ಯಾಪ್ತಿಯಲ್ಲಿ ಹೆಚ್ಚಿನ ಮೂಲ ಸೌಲಭ್ಯಗಳನ್ನು ನಗರವಾಸಿಗಳಿಗೆ ನೀಡಲು ಅನುಕೂಲವಾಗಲಿದೆ ಎಂದು ಹೇಳಿದರು.



ರಾಮಸಮುದ್ರದ ಸುಬೇದಾರ್ ಕಟ್ಟೆ ಬಳಿ ನಗರಸಭೆಯಿಂದ ಹಸಿ ಹಾಗೂ ಒಣ ಕಸ ಬೇರ್ಪಡಿಸಲು ಡಬ್ಬಗಳನ್ನು ಸಾರ್ವಜನಿಕರಿಗೆ ವಿತರಿಸಲಾಯಿತು.

> ಚಾಮರಾಜನಗರ ನಗರಸಭಾ ವ್ಯಾಪ್ತಿಯ 31 ವಾರ್ಡ್‌ಗಳಿಂದ 20 ಟನ್ ಕಸ ಸಂಗ್ರಹವಾಗುತ್ತಿದ್ದು, ಪ್ರತಿ ಮನೆಗಳ ಮೂಲ ತ್ಯಾಜ್ಯ ನಿರ್ವಹಣೆಗಾಗಿ ಹಸಿ ಹಾಗೂ ಒಣ ಕಸಗಳಾಗಿ ಬೇರ್ಪಡಿಸಿ ಮನೆ ಬಾಗಿಲಿಗೆ ಬರುವ ನಗರಸಭೆ ಕಸ ಸಂಗ್ರಹಣೆ ವಾಹನಕ್ಕೆ ನೀಡಬೇಕು. ಇದಕ್ಕಾಗಿ ಹಸಿ ಕಸಕ್ಕಾಗಿ ಹಸಿರು ಬಣ್ಣದ ಡಬ್ಬಿ ಹಾಗೂ ಒಣ ಕಸಕ್ಕಾಗಿ ನೀಲಿ ಬಣ್ಣದ ಡಬ್ಬಗಳನ್ನು ಸಾಂಕೇತಿಕವಾಗಿ ವಿತರಿಸಲಾಗುತ್ತಿದೆ. ನಗರದ ಸ್ವಚ್ಛತೆಗೆ ನಾಗರಿಕರು ಕೈಜೋಡಿಸಬೇಕು.
>
> –ಎಸ್.ವಿ.ರಾಮದಾಸ್, ನಗರಸಭಾ ಪೌರಾಯುಕ್ತ

ನಗರ ಸ್ವಚ್ಛತೆಗೆ ಎಲ್ಲರ ಸಹಕಾರ ಅಗತ್ಯವಾಗಿದ್ದು, ನಮ್ಮ ಮನೆ, ನಮ್ಮ ಬೀದಿ, ನಮ್ಮ ನಗರ ಎನ್ನುವ ಸಾಮೂಹಿಕ ಸ್ವಚ್ಛತಾ ಪ್ರಜ್ಞೆ ಪ್ರತಿಯೊಬ್ಬರಲ್ಲೂ ಮೂಡಬೇಕು. ಆಗ ಮಾತ್ರ ನಗರ, ಪಟ್ಟಣಗಳು ಸ್ವಚ್ಛ, ಸುಂದರ ನಗರಗಳಾಗಲು ಸಾಧ್ಯವಾಗಲಿದೆ. ಮಹಿಳೆಯರು ಸ್ವಚ್ಛತೆ ಬಗ್ಗೆ ಹೆಚ್ಚು ಜಾಗೃತರಾಗಬೇಕು. ನೆರೆ ಜಿಲ್ಲೆ ಮೈಸೂರು ಸ್ವಚ್ಛತೆಗೆ ಹೆಸರು ಮಾಡಿದೆ. ಅದೇ ಮಾದರಿಯಲ್ಲಿ ನಾವು ಸಹ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಬಯಲು ಶೌಚ ಮುಕ್ತ ನಗರವಾಗಲು ಪ್ರತಿಯೊಬ್ಬರು ಶೌಚಾಲಯ ನಿರ್ಮಿಸಿಕೊಳ್ಳಬೇಕು ಎಂದರು.

ನಗರಸಭಾ ಅಧ್ಯಕ್ಷ ಎಸ್.ಸುರೇಶ್ ಮಾತನಾಡಿ, ಸ್ವಚ್ಛ ಭಾರತ್ ಅಭಿಯಾನದಡಿ ಮನೆ ಮನೆ ಕಸ ಸಂಗ್ರಹಣೆಗಾಗಿ ಹಸಿ ಹಾಗೂ ಒಣ ಕಸ ವಿಂಗಡಣೆ ಮಾಡಿಕೊಡಲು ಡಸ್ಟ್‌ಬಿನ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಗರವಾಸಿಗಳು ಸ್ವಚ್ಛತೆಗೆ ನಗರಸಭೆಯೊಂದಿಗೆ ಸಹಕರಿಸಬೇಕು ಎಂದರು.

ನಗರಸಭಾ ಉಪಾಧ್ಯಕ್ಷೆ ಮಮತಾ, 29ನೇ ವಾರ್ಡ್ ಸದಸ್ಯೆ ಎಂ.ವಿ.ಸುಧಾ ಮಾತನಾಡಿದರು. ಇದೇ ವೇಳೆ ಹಸಿ ಹಾಗೂ ಒಣ ಕಸಗಳಾಗಿ ಬೇರ್ಪಡಿಸಿ ನೀಡುವ ಹಸಿರು ಹಾಗೂ ನೀಲಿ ಬಣ್ಣದ ಡಬ್ಬಗಳನ್ನು ಸಾರ್ವಜನಿಕರಿಗೆ ವಿತರಣೆ ಮಾಡಲಾಯಿತು.

ನಗರಸಭೆ ಯೋಜನಾಧಿಕಾರಿ ವೆಂಕಟ್ ನಾಯಕ್, ಸಹಾಯಕ ಕಾರ್ಯಪಾಲಕ ಪರಿಸರ ಅಭಿಯಂತರರಾದ ರೂಪಾ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ಸುಷ್ಮಾ, ನಾರಾಯಣ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದೀಪದ ಗಿರಿ ಒಡ್ಡುವಿನಲ್ಲಿ ಬೆಳಗಿದ ಮಹಾಜ್ಯೋತಿ



ಮಹದೇಶ್ವರಬೆಟ್ಟದಲ್ಲಿ ಕಡೇ ಕಾರ್ತಿಕ ಸೋಮವಾರ ರಾತ್ರಿ ದೀಪದ ಗಿರಿ ಒಡ್ಡುವಿನಲ್ಲಿ ಮಹಾಜ್ಯೋತಿ ಬೆಳಗಲಾಯಿತು.

ಹನೂರು, ನ.25–ಪ್ರಸಿದ್ಧ ಯಾತ್ರಾ ಸ್ಥಳ ಶ್ರೀ ಮಲೆಮಹದೇಶ್ವರಬೆಟ್ಟದಲ್ಲಿ ಕಡೇ ಕಾರ್ತಿಕ ಸೋಮವಾರ ರಾತ್ರಿ ದೀಪದ ಗಿರಿ ಒಡ್ಡುವಿನಲ್ಲಿ ಮಹಾಜ್ಯೋತಿ ಬೆಳಗಲಾಯಿತು. ನಂತರ ತೆಪ್ಪೋತ್ಸವದೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

ಕಾರ್ತಿಕ ಜಾತ್ರೆ ಅಂಗವಾಗಿ ಶನಿವಾರದಿಂದಲೇ ಬೆಟ್ಟದಲ್ಲಿ ವಿಶೇಷ ಪೂಜೆ ಪುನಸ್ಕಾರ ಆರಂಭವಾಗಿದ್ದವು. ಸೋಮವಾರ ಬೆಳಗ್ಗೆ ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ಸ್ವಾಮಿಗೆ ವಿಶೇಷ ಅಭಿಷೇಕ, ಮಹಾಮಂಗಳಾರತಿ, ಪೂಜಾ ಕಾರ್ಯಗಳಿಗೆ ವಿಧಿವಿಧಾನಗಳೊಂದಿಗೆ ಚಾಲನೆ ನೀಡಲಾಯಿತು.

ಮಹಾಜ್ಯೋತಿ ದರ್ಶನ: ಸೋಮವಾರ ಸಂಜೆ ದೇಗುಲದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಸಿಂಗರಿಸಿರುವ ಬಸವ ವಾಹನದಲ್ಲಿ ಪ್ರತಿಷ್ಠಾಪಿಸಿ ಸತ್ತಿಗೆ, ಸೂರಿಪಾನಿ, ಜಾಗಟೆ ಹಾಗೂ ವಾದ್ಯಗಳದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಲಾಯಿತು.

ನೈವೇದ್ಯ ಹಾಗೂ ಮಂಗಳಾರತಿ ನಂತರ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ದೀಪದಗಿರಿ ಒಡ್ಡುಗೆ ತೆರಳಿ ಸ್ವಾಮಿಗೆ ಬಿಲ್ವಾರ್ಚನೆ, ದೀವಟಿಗೆ ಹಾಗೂ ಧೂಪ ದೀಪದಾರತಿ ಸೇವೆ ನೆರವೇರಿಸಿ ಮಹಾಜ್ಯೋತಿ ಬೆಳಗಿಸಲಾಯಿತು. ಲಕ್ಷಾಂತರ ಭಕ್ತರು ಮಹಾಜ್ಯೋತಿಯ ದರ್ಶನ ಪಡೆದು, ಉಘೇ... ಮಾದಪ್ಪ, ಉಘೇ... ಮಾದಪ್ಪ ಎಂಬ ಜಯಘೋಷ ಮೊಳಗಿಸಿದರು. ಇದೇ ಸಂದರ್ಭದಲ್ಲಿ ಮಹದೇಶ್ವರ ಭಕ್ತಿ ಹಾಗೂ ಭಾವಗೀತೆಗಳನ್ನು ಹಾಡಿ ದೇವರ ಕೃಪೆಗೆ ಪಾತ್ರರಾದರು. ಭಕ್ತರು ತಮ್ಮ ಕೈಲಾದಷ್ಟು ಎಣ್ಣೆ ಎರೆದು ತಮ್ಮ ಹರಕೆ ತೀರಿಸಿದರು.

ವಿಶೇಷ ದೀಪಾಲಂಕಾರ: ದೇವಸ್ಥಾನ ಮುಖ್ಯದ್ವಾರ ಸೇರಿದಂತೆ ದೊಡ್ಡ ಗೋಪುರ, ಆಲಂಬಾಡಿ ಬಸವೇಶ್ವರನಿಗೆ ದೊಡ್ಡ ಕೊಳದ ಸುತ್ತಲು ಮತ್ತು ದೇವಾಲಯದ ವಿವಿಧೆಡೆ ವಿದ್ಯುತ್ ದೀಪಾಲಂಕಾರಗಳಿಂದ ಸಿಂಗರಿಸಲಾಗಿತ್ತು. ಪೂಜಾ ಕಾರ್ಯಗಳು ರಾತ್ರಿಯಿಂದ ಬೆಳಗಿನವರೆಗೆ ಜರುಗಿದವು. ಹರಕೆ ಹೊತ್ತ ಭಕ್ತರಿಂದ ಹುಲಿ, ಬಸವ ವಾಹನ ಉತ್ಸವ, ಬೆಳ್ಳಿ ಕಿರೀಟ ಮತ್ತು ಬಂಗಾರದ ರಥೋತ್ಸವ ಸೇರಿದಂತೆ ವಿವಿಧ ಉತ್ಸವಗಳು ನಡೆದವು.

ನಂತರ ದೊಡ್ಡ ಕೊಳದಲ್ಲಿ ವಿದ್ಯುತ್ ದೀಪಾಲಂಕಾರಗಳಿಂದ ವಿಶೇಷವಾಗಿ ಸಿಂಗರಿಸಿದ್ದ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು. ಮಹಾಜ್ಯೋತಿ ಬಳಿಕ ದೇಗುಲಕ್ಕೆ ತೆರಳಿ ಸ್ವಾಮಿಗೆ ನೈವೇದ್ಯ ಅರ್ಪಿಸಿ, ತೀರ್ಥ ಪ್ರಸಾದ ವಿತರಿಸಲಾಯಿತು. ನಂತರ ತೆಪ್ಪೋತ್ಸವದೊಂದಿಗೆ ಜಾತ್ರೆಗೆ ತೆರೆ ಎಳೆಯಲಾಯಿತು.

ಕಣ್ಣೇಗಾಲ ಗ್ರಾಮದಲ್ಲಿ ಧರ್ತಿ ಆಬಾ ಅಭಿಯಾನಕ್ಕೆ ಚಾಲನೆ



ಕಣ್ಣೇಗಾಲ ಗ್ರಾಮದಲ್ಲಿ ಧರ್ತಿ ಆಬಾ ಉನ್ನತ ಗ್ರಾಮ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಚಾಮರಾಜನಗರ, ನ.25– ತಾಲೂಕಿನ ಕಣ್ಣೇಗಾಲ ಗ್ರಾಮದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೇಂದ್ರ ಸರ್ಕಾರದ ಧರ್ತಿ ಆಬಾ ಉನ್ನತ ಗ್ರಾಮ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ತಾಲೂಕು ಅಧಿಕಾರಿ ಸುಬ್ಬರಾಯ ಮಾತನಾಡಿ, ಅಭಿಯಾನದಲ್ಲಿ ತಾಲೂಕಿನ ಯಾನಗಳ್ಳಿ, ಕಣ್ಣೇಗಾಲ, ಮೇಲ್ಮಾಳ ಹಾಗೂ ಬೇಡುಗುಳಿ ಗ್ರಾಮಗಳು ಆಯ್ಕೆಯಾಗಿವೆ. 17 ಇಲಾಖೆಗಳ ಸಹಯೋಗದೊಂದಿಗೆ ಸರ್ವೇ ಕಾರ್ಯ ನಡೆಸಿ, ಪರಿಶಿಷ್ಟ ಪಂಗಡದವರ ಸಮಗ್ರ ಅಭಿವೃದ್ಧಿಗೆ ಕ್ರಿಯಾ ಯೋಜನೆ ತಯಾರಿಸಲಾಗುತ್ತಿದೆ. ಅದರಂತೆ ಗ್ರಾಮಗಳಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆಂಪನಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್.ಮಾದೇಶ್ ಮಾತನಾಡಿ, ಶಿಕ್ಷಣ ಹಾಗೂ ಸಂಪರ್ಕದ ಬಗ್ಗೆ ತಿಳಿಸಿದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಎಸ್.ಶಿಲ್ಪ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅಧೀಕ್ಷಕ ಸುರೇಶ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಮೇಗೌಡ, ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

ಆಟೋಗೆ ಬಸ್ ಡಿಕ್ಕಿ: ಆಟೋ ಚಾಲಕ ಸಾವು

ಚಾಮರಾಜನಗರ, ನ.25–ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಮೃತಪಟ್ಟಿರುವ ಘಟನೆ ತಾಲೂಕಿನ ಶಿವಪುರ–ಕಡುವಿನ ಶೆಟ್ಟಿಹುಂಡಿ ಮಾರ್ಗ ನಡುವೆ ಸೋಮವಾರ ಸಂಭವಿಸಿದೆ.



ಸುರೇಶ್

ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ಸುರೇಶ್ (45) ಮೃತಪಟ್ಟ ಆಟೋ ಚಾಲಕ. ಬಸ್ ಚಾಮರಾಜನಗರದಿಂದ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದು, ಆಟೋ ಗುಂಡ್ಲುಪೇಟೆಯಿಂದ ಚಾ.ನಗರ ಕಡೆಗೆ ಬರುತ್ತಿತ್ತು. ಈ ವೇಳೆ ಬಸ್ ಆಟೋಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಚಾಲಕ ಸುರೇಶ್ ಮೃತಪಟ್ಟಿದ್ದಾರೆ.

ಆಟೋದಲ್ಲಿ ಪ್ರಯಾಣಿಕರು ಇಲ್ಲದ ಕಾರಣ ಹೆಚ್ಚಿನ ಅನಾಹುತ ತಪ್ಪಿದಂತಾಗಿದೆ. ಈ ಸಂಬಂಧ ಚಾಮರಾಜನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ

ಸೈಬರ್ ಪೊಲೀಸರಿಗೆ ಅಪರಾಧ ತನಿಖೆ ಕಾರ್ಯಾಗಾರ



ನಗರ ಸೆನ್ ಪೊಲೀಸ್ ಠಾಣೆಯಲ್ಲಿ ಸೈಬರ್ ಅಪರಾಧ ತನಿಖೆ ಕಾರ್ಯಾಗಾರ ನಡೆಯಿತು.

ಮೈಸೂರು, ನ.25(ಎಂಕೆ)– ಮೈಸೂರು ನಗರ ಪೊಲೀಸ್ ವತಿಯಿಂದ ಸೈಬರ್ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳ ತನಿಖೆ ಹಾಗೂ ಮುಂಜಾಗ್ರತಾ ಕ್ರಮಗಳ ಕುರಿತು ಅರಿವು ಕಾರ್ಯಾಗಾರ ನಡೆಯಿತು.

ನಗರ ಸೆನ್ ಪೊಲೀಸ್ ಠಾಣೆ ಆವರಣದಲ್ಲಿ ಸೋಮವಾರ ನಡೆದ ಸೈಬರ್ ಅಪರಾಧಗಳ ಅರಿವು ಕಾರ್ಯಾಗಾರಕ್ಕೆ ಚಾಲನೆ ನೀಡಿದ ಸೈಬರ್ ಅಪರಾಧ ವಿಭಾಗದ ಎಸಿಪಿ ಸ್ನೇಹರಾಜ್, ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಬಗ್ಗೆ ಕೂಲಂಕಷವಾಗಿ ಅರಿಯುವುದು ಅವಶ್ಯವಾಗಿದೆ ಎಂದು ಎಚ್ಚರಿಸಿದರು.

ಈ ವೇಳೆ ಸೆನ್ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಅನಿಲ್, ಆನ್‌ಲೈನ್ ಮೂಲಕ ವಂಚಿಸಲು ಬಳಸುವ ವೆಬ್ ಪೋರ್ಟಲ್‌ಗಳ ಕುರಿತು ಮಾಹಿತಿ ಮಾಹಿತಿ ನೀಡಿದರಲ್ಲದೆ, ಸೈಬರ್ ವಂಚನೆಗೊಳಗಾದವರು ಕೂಡಲೇ ಪ್ರಕರಣ ದಾಖಲಿಸಿ, ತ್ವರಿತ ಸ್ಪಂದನೆ ಪಡೆಯ ಬಹುದಾಗಿದೆ ಎಂದು ತಿಳಿಸಿದರು. ನಗರ ಸೆನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್, ಎಲ್ಲಾ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸೈಬರ್ ತನಿಖಾಧಿಕಾರಿಗಳು ಉಪಸ್ಥಿತರಿದ್ದರು.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಶಕ್ತಿಯಿಂದ ಯೋಗೇಶ್ವರ್ ಗೆದ್ದಿಲ್ಲ



ಮೈಸೂರು, ನ.25(ಎಸ್‌ಬಿಡಿ)– ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಶಕ್ತಿಯಿಂದ ಸಿ.ಪಿ.ಯೋಗೇಶ್ವರ್ ಗೆದ್ದಿಲ್ಲ ಎಂದು ಬಿಜೆಪಿ ನಾಯಕ, ಮಾಜಿ ಡಿಸಿಎಂ ಡಾ.ಅಶ್ವಥ ನಾರಾಯಣ ಹೇಳಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶಾಸಕ ಜಿ.ಟಿ.ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ಅವರು, ನಂತರ ಮಾಧ್ಯಮ ಗಳಿಗೆ ಪ್ರತಿಕ್ರಿಯಿಸಿ ಉಪಚುನಾವಣೆಯಲ್ಲಿ ನಾವು ಎಲ್ಲಿಯೂ ಎಡವಿಲ್ಲ. ಚನ್ನಪಟ್ಟಣ ದಲ್ಲಿ ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್‌ನಿಂದ ಗೆದ್ದಿರೋದಲ್ಲ. ನಮ್ಮದು 15 ಸಾವಿರ ಇದ್ದವು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಹೇಳುವ ಮೂಲಕ ಅದು ಕಾಂಗ್ರೆಸ್ ಗೆಲುವಲ್ಲ, ಯೋಗೇಶ್ವರ್ ಗೆಲುವು ಎಂದು ಅವರೇ ಒಪ್ಪಿಕೊಂಡಿದ್ದಾರೆ. ಹಾಗಾಗಿ ಈ ಗೆಲುವಿನ ಕ್ರೆಡಿಟ್ ಸರ್ಕಾರಕ್ಕೆ ಕೊಡೋಕೆ ಆಗುತ್ತಾ ಎಂದು ಪ್ರಶ್ನಿಸಿದರು.

ಮೇ ತಿಂಗಳಿನಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಮೈಸೂರಿನ ಬಿಜೆಪಿ ಅಭ್ಯರ್ಥಿ ಎಷ್ಟು ಮತ ಪಡೆದಿದ್ದಾರೆ, ನಾವು ಎಷ್ಟು ಸೀಟ್ ಗೆದ್ದಿದ್ದೇವೆ ಎಂಬುದು ಜನರಿಗೆ ಗೊತ್ತಿದೆ. ಉಪಚುನಾವಣೆಯಲ್ಲಿ ಆಡಳಿತ ಸರ್ಕಾರಕ್ಕೆ ಅನುಕೂಲಕರವಾಗಿರುತ್ತದೆ. ಹಾಗಾಗಿ ಈ ಗೆಲುವಿಗೆ ಹೆಚ್ಚು ಮಹತ್ವ ಇರುವುದಿಲ್ಲ. ಆಡಳಿತ ಪಕ್ಷ ಜನರ ವಿಶ್ವಾಸ ಕಳೆದುಕೊಂಡಿರುವುದು ಇಡೀ ದೇಶಕ್ಕೆ ತಿಳಿದಿದೆ. ಇದು ಎಟಿಎಂ ಸರ್ಕಾರ, ಭ್ರಷ್ಟ ಸರ್ಕಾರ, ಜನವಿರೋಧಿ ಸರ್ಕಾರ ಎಂಬುದು ಗೊತ್ತಾಗಿದೆ.

ಬಿಜೆಪಿ ನಾಯಕರ ಸಹಕಾರ ಪಡೆದು ಗೆದ್ದಿದ್ದೇವೆ ಎಂಬ ಡಿಕೆಶಿ ಹೇಳಿಕೆಯನ್ನು ತಳ್ಳಿ ಹಾಕಿದ ಅಶ್ವಥ್ ನಾರಾಯಣ್, ಯಾವುದೇ ಕಾರಣಕ್ಕೂ ಆ ರೀತಿ ಆಗಿಲ್ಲ. ಕಾಂಗ್ರೆಸ್‌ನಲ್ಲಿ ಪಕ್ಷ ನಿಷ್ಠೆ ಇದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಿ ಪಕ್ಷ ನಿಷ್ಠೆ ಇದೆ. ನಮ್ಮ ಮನೆ ಬಾಗಿಲು ದಾಟಿ ಒಮ್ಮೆ ಹೋದ ಮೇಲೆ ಅಲ್ಲಿಗೆ ಮುಗಿಯಿತು. ಸಿ.ಪಿ.ಯೋಗೇಶ್ವರ್ ಅವರನ್ನು ನಾವು ಎದುರಾಳಿಯಾಗಿ ನೋಡಿದ್ದೇವೆ. ನಿಖಿಲ್ ಕುಮಾರ ಸ್ವಾಮಿ ಅತ್ಯಂತ ಸಮರ್ಥವಾಗಿ ಈ ಚುನಾವಣೆ ಎದುರಿಸಿದ್ದಾರೆ. ಅವರು ಒಬ್ಬ ನಾಯಕರಾಗಿ ಬೆಳೆದಿದ್ದಾರೆ. ಯೋಗೇಶ್ವರ್‌ಗೆ ಮೂರು ದಶಕಗಳಿಂದಲೂ ಜನರ ಸಂಪರ್ಕ ಇದ್ದಿದ್ದರಿಂದ ಗೆದ್ದಿದ್ದಾರೆ. ಈ ಗೆಲುವು ತಾತ್ಕಾಲಿಕ. 2028ರ ಚುನಾವಣೆಗೆ ಬರಲಿ, ನೋಡೋಣ ಎಂದರು.

ಬಿಜೆಪಿ ರೆಬಲ್ ನಾಯಕರಿಂದ ವಕ್ಫ್ ಜಾಗೃತಿ ಅಭಿಯಾನ ಸಂಬಂಧ ಪ್ರತಿಕ್ರಿಯಿಸಿ, ಇದರಿಂದ ನಮಗೇನು ಮುಜುಗರ ಇಲ್ಲ. ಕಾಂಗ್ರೆಸ್ ಪಕ್ಷಕ್ಕೆ ಮುಜುಗರ. ವಕ್ಫ್ ವಿಚಾರದಲ್ಲಿ ಅಲ್ಪಸಂಖ್ಯಾತರ ತುಷ್ಟೀಕರಣ ಸ್ಪಷ್ಟವಾಗಿದೆ. ವಕ್ಫ್ ಬೋರ್ಡ್ ಮೂಲಕ ರೈತರ ಜಮೀನನ್ನು ಹೇಗೆ ಕಬಳಿಸಿದ್ದಾರೆ ಎಂಬುದು ಗೊತ್ತಾಗಿದೆ. ಅಧಿಕೃತವಾಗಿ ಪಕ್ಷದ ವತಿಯಿಂದ ಹೋರಾಟ ನಡೆದಿದೆ. ಈಗ ಚುನಾಯಿತ ಜನಪ್ರತಿನಿಧಿಗಳಾಗಿ ಅವರೂ ಮಾಡುತ್ತಿದ್ದಾರೆ. ಅದರ ಪಾಡಿಗೆ ಅದು ನಡೆಯುತ್ತದೆ. ಜಮೀರ್ ಅವರು ಸಿದ್ದರಾಮಯ್ಯನವರ ಅನುಮತಿ ಪಡೆದು ಈ ಪ್ರಕ್ರಿಯೆ ಶುರು ಮಾಡಿದ್ರು. ನಮಗೆ ದೇಶ ಮೊದಲು, ದೇಶ ಚೆನ್ನಾಗಿದ್ದರೆ ಎಲ್ಲರೂ ಸುರಕ್ಷಿತವಾಗಿರುತ್ತೇವೆ ಎಂದು ಹೇಳಿದರು.

ಸಿವಿಲ್ ಸೇವೆಗಳ ಹುದ್ದೆ ನೇಮಕಾತಿ ಅಧಿಸೂಚನೆ ಹೊರಡಿಸದಂತೆ ರಾಜ್ಯ ಸರ್ಕಾರ ಆದೇಶ

ಮೈಸೂರು, ನ.25(ಎಸ್‌ಪಿಎನ್)– ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಹೊಸದಾಗಿ ಯಾವುದೇ ಅಧಿಸೂಚನೆ ಹೊರಡಿಸಬಾರದು ಎಂದು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ಅ.28ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆಯ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದು. ಈ ಆದೇಶ ತಕ್ಷಣ ಜಾರಿಯಾಗಿದ್ದು, ಮುಂದಿನ ಆದೇಶದವರೆಗೆ ಮುಂದುವರೆಯಲಿದೆ.

ಈ ದಿನಾಂಕ(ನ.25)ದಿಂದ ಪೂರ್ವದಲ್ಲಿ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದಲ್ಲಿ ಅಥವಾ ಪ್ರಕ್ರಿಯೆ ಪ್ರಾರಂಭಗೊಂಡಿದ್ದಲ್ಲಿ ಅಂತಹ ನೇಮಕಾತಿಗೆ ಹೊರಡಿಸಲಾಗಿದ್ದ ಅಧಿಸೂಚನೆ ಅನ್ವಯವೇ ಪೂರ್ಣಗೊಳಿಸಬಹುದಾಗಿದೆ. ಈ ಆದೇಶವನ್ನು ಎಲ್ಲಾ ಆಯ್ಕೆ ಪ್ರಾಧಿಕಾರಿಗಳು, ನೇಮಕಾತಿ ಪ್ರಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಎಂದು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಮಯಗಳು–1) ಅಧೀನ ಕಾರ್ಯದರ್ಶಿ ವೀರಭದ್ರ ಸೂಚಿಸಿದ್ದಾರೆ.

ಕಂಸಾಳೆ ಕುಮಾರಸ್ವಾಮಿ ನಿಧನ



ಮೈಸೂರು, ನ.25(ಎಸ್‌ಪಿಎನ್)– ಮೈಸೂರು ಬಂಡಿಕೇರಿ ನಿವಾಸಿ, ಜನುಮದಜೋಡಿ ಚಿತ್ರದ 'ಕೋಲುಮಂಡೆ ಜಂಗುಮ ದೇವ' ಖ್ಯಾತಿಯ ಕಂಸಾಳೆ ಕುಮಾರಸ್ವಾಮಿ (74) ಸೋಮವಾರ ನಿಧನರಾದರು.

ಮೃತರು ಪುತ್ರರಾದ ಕಂಸಾಳೆ ರವಿಚಂದ್ರ, ಕಂಸಾಳೆ ಮಾದೇವ್ ಕುಮಾರ, ಪುತ್ರಿಯರಾದ ರೂಪಾ, ಪಾರ್ವತಿ, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಮಂಗಳವಾರ (ನ.26) ಬೆಳಿಗ್ಗೆ 11ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನ ಸ್ಮಶಾನದಲ್ಲಿ ನಡೆಯಲಿದೆ.

ನಟ ಶಿವರಾಜ್ ಕುಮಾರ್ ಅಭಿನಯದ 'ಜನುಮದ ಜೋಡಿ' ಚಿತ್ರದ 'ಕೋಲುಮಂಡೆ ಜಂಗುಮದೇವ' ಹಾಡಿಗೆ ಕುಮಾರಸ್ವಾಮಿ ಕಂಸಾಳೆ ಸಂಗೀತದ ನೃತ್ಯ ಸಂಯೋಜಿಸಿದ್ದರು. ಈ ನೃತ್ಯ ಸಂಯೋಜನೆ ವರನಟ ರಾಜಕುಮಾರ್ ಅವರ ಮೆಚ್ಚುಗೆಗೆ ಪಾತ್ರವಾಗಿತ್ತು. 2020ನೇ ಸಾಲಿನ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಕಂಸಾಳೆ ಕುಮಾರಸ್ವಾಮಿ, ದೇಶ–ವಿದೇಶಗಳಲ್ಲಿ 600ಕ್ಕೂ ಹೆಚ್ಚಿನ ಜಾನಪದ ಕಂಸಾಳೆ ನೃತ್ಯಪ್ರದರ್ಶನಗಳನ್ನು ನೀಡಿದ್ದರು.

ವರಕೋಡು ಸಮೀಪದ ಬಡಗಲಹುಂಡಿಯಲ್ಲಿ 1951ರಲ್ಲಿ ಜನಿಸಿದ ಅವರು, ತಂದೆ ಕಂಸಾಳೆ ಮಹಾದೇವಯ್ಯ ಅವರಿಂದ ಕಂಸಾಳೆಯನ್ನು ಕಲಿತಿದ್ದರು. 7ನೇ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿ ತಂದೆಯೊಂದಿಗೆ ವಿವಿಧ ವೇದಿಕೆಗಳಲ್ಲಿ ಪ್ರದರ್ಶನಗಳನ್ನು ನೀಡಿದ್ದರು.

ಕಂಸಾಳೆಯ ವಿವಿಧ ಪ್ರಾಕಾರದಲ್ಲಿ ಪರಿಣತಿ ಹೊಂದಿದ್ದ ಅವರು, ಕಂಸಾಳೆಗೆ ಬೇರೆಬೇರೆ ಹಾಡುಗಳನ್ನು ಒಗ್ಗಿಸಿಕೊಂಡು ನೃತ್ಯ ಸಂಯೋಜನೆಗೆ ಹೊಳಪು ನೀಡಿದ್ದರು. ಅಲ್ಲದೆ, ಕೆಲವು ನಾಟಕಗಳಲ್ಲೂ ಅಭಿನಯಿಸಿ ಸೈ ಎನಿಸಿಕೊಂಡಿದ್ದರು.

'ಜಾನಪದ ಲೋಕ' ಪ್ರಶಸ್ತಿ, ಕನ್ನಡ ಜಾನಪದ ಪರಿಷತ್ತಿನ 'ಜಾನಪದ ಪ್ರಪಂಚ', ಕನ್ನಡ ಬಳಗದ 'ಕಂಸಾಳೆ ಜಾನಪದ ರತ್ನ', ಕನ್ನಡ ಕ್ರಾಂತಿ ದಳದ 'ಕಂಸಾಳೆ ಕಂಠೀರವ' ಬಿರುದು ದೊರೆತಿತ್ತು. ಮುರುಘಾಮಠ, ಆದಿ ಚುಂಚನಗಿರಿ ಮಠ ಸೇರಿದಂತೆ ಬಹಳಷ್ಟು ಸಂಘ–ಸಂಸ್ಥೆಗಳು ಗೌರವಿಸಿದ್ದವು. ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರವೂ ದೊರೆತಿತ್ತು. ಹಲವರು ಅವರಿಂದ ಕಂಸಾಳೆ ಕಲಿತಿದ್ದಾರೆ.

ಕಾರ್ತಿಕ್



ಮೈಸೂರು, ನ.25– ಮೈಸೂರಿನ ಪಡುವಾರಹಳ್ಳಿ ನಿವಾಸಿ ಕಾರ್ತಿಕ್(30) ಹೃದಯಾಘಾತದಿಂದ ಸೋಮವಾರ ಬೆಳಗ್ಗೆ ನಿಧನರಾದರು.

ಇವರು ತಂದೆ ರಮೇಶ್, ತಾಯಿ ಲಕ್ಷ್ಮೀ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂ ರುದ್ರಭೂಮಿಯಲ್ಲಿ ಸಂಜೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಬಿ.ಭಾಗ್ಯ



ಹೆಚ್.ಡಿ.ಕೋಟೆ, ನ.25– ಪಟ್ಟಣದ ಕಾಳಿದಾಸ ರಸ್ತೆ ನಿವಾಸಿ ಬಿ.ಭಾಗ್ಯ(40) ಸೋಮವಾರ ನಿಧನರಾದರು. ಮೃತರು ಪತಿ ನಾಗೇಗೌಡ, ಇಬ್ಬರು ಪುತ್ರರು, ಅತ್ತೆ, ಮಾವ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಪಟ್ಟಣದ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ವಿಜೃಂಭಣೆಯಿಂದ ಜರುಗಿದ ಮಹದೇಶ್ವರಸ್ವಾಮಿಯ ತೆಪ್ಪೋತ್ಸವ

● ಪಡುವಾರಹಳ್ಳಿ ಶ್ರೀ ವರಸಿದ್ಧಿ ಮಹದೇಶ್ವರ ಸ್ವಾಮಿಯ ದೇವಸ್ಥಾನದ ಕೊಳದ ಆವರಣದಲ್ಲಿ ಮೊಳಗಿದ ಉಘೇ ಮಾದಪ್ಪ ಜಯಘೋಷ ● ತೆಪ್ಪೋತ್ಸವದೊಂದಿಗೆ ಕಾರ್ತಿಕ ಮಾಸದ ಪೂಜಾ ಮಹೋತ್ಸವಕ್ಕೆ ತೆರೆ

ಮೈಸೂರು,ನ.25(ಪಿಎಂ)– ಪಡುವಾರಹಳ್ಳಿ (ವಿನಾಯಕನಗರ)ಯ ಶ್ರೀ ವರಸಿದ್ಧಿ ಮಹದೇಶ್ವರ ಸ್ವಾಮಿಯ ದೇವಸ್ಥಾನದ ಕೊಳದಲ್ಲಿ ಸೋಮವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಮಹದೇಶ್ವರ ಸ್ವಾಮಿಯ ತೆಪ್ಪೋತ್ಸವ ನೆರವೇರಿತು.

ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಉಘೇ ಮಾದಪ್ಪ ಎಂದು ಜಯಘೋಷ ಮೊಳಗಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು. ಆ ಮೂಲಕ ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್ ವತಿಯಿಂದ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಕಾರ್ತಿಕ ಮಾಸದ ಪೂಜಾ ಮಹೋತ್ಸವಕ್ಕೆ ತೆರೆ ಬಿದ್ದಿತು.

ದೇವಸ್ಥಾನ ಪ್ರಾರಂಭಗೊಂಡು 17 ವರ್ಷಗಳಾಗಿದ್ದು, ಕಳೆದ 10 ವರ್ಷಗಳಿಂದ ಪ್ರತಿ ವರ್ಷ ಕಡೆ ಕಾರ್ತಿಕ ಸೋಮವಾರದಂದು ವಿಶೇಷವಾಗಿ ತೆಪ್ಪೋತ್ಸವ ನಡೆಸಲಾಗುತ್ತಿದೆ. ಅಂತೆಯೇ ಈ ಬಾರಿಯೂ ಅಲಂಕೃತ ತೆಪ್ಪದಲ್ಲಿ 500 ಕೆಜಿಯಷ್ಟು ತೂಕದ ಪಂಚಲೋಹದ ಹುಲಿವಾಹನ ವಿಗ್ರಹ ಪ್ರತಿಷ್ಠಾಪಿಸಿ ತೆಪ್ಪೋತ್ಸವ ನಡೆಸಲಾಯಿತು. ಹುಲಿಯ ಮೇಲೆ ಮಹದೇಶ್ವರರು ಆಸೀನರಾಗಿರುವ ವಿಗ್ರಹವನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜಾ ವಿಧಿವಿಧಾನ ನೆರವೇರಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.



ಪಡುವಾರಹಳ್ಳಿಯ ಶ್ರೀ ವರಸಿದ್ಧಿ ಮಹದೇಶ್ವರ ಸ್ವಾಮಿಯ ದೇವಸ್ಥಾನದ ಕೊಳದಲ್ಲಿ ಸೋಮವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಮಹದೇಶ್ವರ ಸ್ವಾಮಿಯ ತೆಪ್ಪೋತ್ಸವ ನೆರವೇರಿತು.

ಈ ವೇಳೆ ಕೊಳದ ಆವರಣದಲ್ಲಿ ನೆರೆದಿದ್ದ ಸಹಸ್ರಾರು ಭಕ್ತರು ಉಘೇ ಮಾದಪ್ಪ ಜಯಘೋಷ ಮೊಳಗಿಸಿ ತಮ್ಮ ಭಕ್ತಿ ಸಮರ್ಪಿಸಿದರು. ಶಿವನಿಗೆ 11 ಬಹಳ ವಿಶೇಷ ಸಂಖ್ಯೆಯಾದ ಹಿನ್ನೆಲೆಯಲ್ಲಿ ಕೊಳದಲ್ಲಿ 11 ಸುತ್ತು ಪ್ರದಕ್ಷಿಣೆ ಹಾಕಲಾಯಿತು. ಅಲ್ಲದೆ, ಕೊಳದ ಬಳಿಗೆ ದೇವಸ್ಥಾನದ ಬಸವನನ್ನು ಕರೆತಂದು ವಿಶೇಷ ಪೂಜೆ ಮಾಡಲಾಯಿತು. ದೇವಸ್ಥಾನದ ಅರ್ಚಕ ನಾಗರಾಜ ಶರ್ಮ ನೇತೃತ್ವದಲ್ಲಿ ತೆಪ್ಪೋತ್ಸವದ ಪೂಜೆ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಜೊತೆಗೆ ತಮಟೆಯ ಸದ್ದು ಹಾಗೂ ಭಕ್ತ ಸಮೂಹದ ಭಕ್ತಿಭಾವದ ಪರಾಕಾಷ್ಠೆಯು ತೆಪ್ಪೋತ್ಸವಕ್ಕೆ ವಿಶೇಷ ಮೆರುಗು ನೀಡಿತು.

ಇದಕ್ಕೂ ಮುನ್ನ ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿದ್ದ ದೇವಸ್ಥಾನದ ಸುತ್ತಲು ಮತ್ತೊಂದು ಹುಲಿ ವಾಹನದ ಮಹದೇಶ್ವರ ಸ್ವಾಮಿಯ ವಿಗ್ರಹದ ಪ್ರದಕ್ಷಿಣೆಯನ್ನು ಹಲವು ಬಾರಿ ನೆರವೇರಿಸಲಾಯಿತು. ಅಲ್ಲದೆ, ಸಹಸ್ರಾರು ಸಂಖ್ಯೆ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಮಾಡಿಸಿ ಮಹದೇಶ್ವರಸ್ವಾಮಿಯ ಕೃಪೆಗೆ ಪಾತ್ರರಾದರು. ಇದೇ ವೇಳೆ ಸಾವಿರಾರು ಸಂಖ್ಯೆಯ ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯಿತು.

ಜೊತೆಗೆ ದೇವಸ್ಥಾನದ ಆವರಣದಲ್ಲಿ ಪಾಂಡವಪುರದ ಗ್ರಾಮರಂಗ ಸಾಂಸ್ಕೃತಿಕ ವೇದಿಕೆ ವತಿಯಿಂದ ಭಕ್ತಿಗೀತೆ ಗಾಯನ ಕಾರ್ಯಕ್ರಮ ಸಹ ನಡೆಯಿತು. ಇದರೊಂದಿಗೆ ನ.1ರಂದು ದೇವಸ್ಥಾನದಲ್ಲಿ ಆರಂಭಗೊಂಡ ಕಾರ್ತಿಕ ಮಾಸದ ಪೂಜಾ ಮಹೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆ ಬಿದ್ದಿತು. ಟ್ರಸ್ಟ್‌ನ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಭೈರಪ್ಪ ಸೇರಿದಂತೆ ಪದಾಧಿಕಾರಿಗಳು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಹಾಜರಿದ್ದರು.

ಇಂದು ಅನ್ನಸಂತರ್ಪಣೆ

ಪಡುವಾರಹಳ್ಳಿ (ವಿನಾಯಕನಗರ)ಯ ಶ್ರೀವರಸಿದ್ಧಿ ಮಹದೇಶ್ವರ ಸ್ವಾಮಿಯ ದೇವಸ್ಥಾನದ ಆವರಣದಲ್ಲಿ ನ.26ರಂದು ಮಧ್ಯಾಹ್ನ 12 ಗಂಟೆಗೆ ಕಾರ್ತಿಕ ಮಾಸದ ಪೂಜಾ ಮಹೋತ್ಸವದ ಪ್ರಯುಕ್ತ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ. ಸುಮಾರು 8 ಸಾವಿರ ಜನರಿಗೆ ಅನ್ನಸಂತರ್ಪಣೆ ನಡೆಯಲಿದೆ.

ಮೊಬೈಲ್ ನಮ್ಮ ಸಾಮಾಜಿಕ ವ್ಯವಸ್ಥೆಯನ್ನೇ ಬದಲಿಸಿದೆ

ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಬೇಸರ



ಶ್ರೀಕೃಷ್ಣಧಾಮದಲ್ಲಿ ನಡೆದ ಹಾಸ್ಯಸಂಜೆ ಕಾರ್ಯಕ್ರಮದಲ್ಲಿ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಮತ್ತು ತಂಡದವರನ್ನು ಸನ್ಮಾನಿಸಲಾಯಿತು.

ಮೈಸೂರು. ನ.25(ಎಸ್‌ಪಿಎನ್)– ಮೊಬೈಲ್ ಪ್ರಸ್ತುತ ಸಮಾಜದ ಸಾಮಾಜಿಕ ವ್ಯವಸ್ಥೆಯನ್ನೇ ಬದಲಿಸಿದೆ. ಇದರಿಂದ ಪರಸ್ಪರ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುವ ಪ್ರಕ್ರಿಯೆಯನ್ನೇ ಮರೆಸಿದೆ ಎಂದು ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಶ್ರೀಕೃಷ್ಣಧಾಮದ ಶ್ರೀಕೃಷ್ಣಭವನದಲ್ಲಿ ಶ್ರೀಕೃಷ್ಣ ಟ್ರಸ್ಟ್ ಹಾಗೂ ಶ್ರೀ ಕೃಷ್ಣಮಿತ್ರ ಮಂಡಳಿ ಸಹಯೋಗದೊಂದಿಗೆ ನಡೆದ ತಿಂಗಳ ಸಾಂಸ್ಕೃತಿಕೋತ್ಸವ ಕಾರ್ಯಕ್ರಮದ 'ಹಾಸ್ಯ ಸಂಜೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊಬೈಲ್‌ನಲ್ಲಿ ನಾವು ಎಲ್ಲಾ ಮಾಹಿತಿಗಳನ್ನು ಪಡೆಯಬಹುದು. ಆದರೆ, ನಮ್ಮಲ್ಲಿನ ಕೌಶಲ ಕಡಿಮೆಯಾಗುತ್ತದೆ. ಜ್ಞಾಪಕ ಶಕ್ತಿ ಕ್ಷೀಣಿಸುತ್ತದೆ. ಇದರಿಂದ ಯುವಕರಲ್ಲಿ ಓದುವ ಹವ್ಯಾಸ ಕಡಿಮೆಯಾಗಿದೆ. ಸಂಗೀತ, ಸಾಹಿತ್ಯ, ನಾಟಕ ವೀಕ್ಷಣೆಗೆ ಪ್ರೇಕ್ಷಕರ ಕೊರತೆ ಎದುರಾಗಿದೆ. ಅದರಲ್ಲೂ ವಿಶೇಷ ಉಪನ್ಯಾಸಗಳಿಗೆ ಜನರು ಹೋಗುವುದೇ ವಿರಳವಾಗಿದೆ ಎಂದರು.

ಹರಿಕಥೆ, ಹಾಸ್ಯ, ಧಾರ್ಮಿಕ ಹಾಗೂ ಮನರಂಜನಾ ಕಾರ್ಯಕ್ರಮಗಳಿಗೆ ಮಾತ್ರ ಮಧ್ಯಮ ವಯಸ್ಕರು, ವೃದ್ಧರು ಖಾಯಂ ಪ್ರೇಕ್ಷಕರು. ಮೊಬೈಲ್ ತಂತ್ರಜ್ಞಾನ ಅಭಿವೃದ್ಧಿಗೊಂಡಂತೆ ಯುವಕ–ಯುವತಿಯರು ಮೊಬೈಲ್ ಹಿಂದೆ ಓಡುತ್ತಿರುವ ವೇಗ ಹೆಚ್ಚಾಗಿದೆ. ಒಟ್ಟಾರೆ ಮೊಬೈಲ್ ಮೋಹದಿಂದ ನಮ್ಮ ಪರಂಪರೆ, ಸಂಸ್ಕೃತಿಯನ್ನೇ ಯುವ ಸಮೂಹ ಮರೆಯುತ್ತಿದೆ ಎಂದು ಬೇಸರ ಹೊರಹಾಕಿದರು.

ಯುವ ಸಮೂಹ ಮೊಬೈಲ್ ಬಳಸುವುದನ್ನು ಸೀಮಿತಗೊಳಿಸಿ, ಪುಸ್ತಕಗಳನ್ನು ಓದುವುದರ ಕಡೆ ಗಮನಹರಿಸಲಿ. ಮೊಬೈಲ್ ಬಳಕೆಯಿಂದ ಹೊಸ ರೋಗಗಳಿಗೆ ಆಹ್ವಾನ ನೀಡಿದಂತೆ. ಹಾಗಾಗಿ ಮೊಬೈಲ್‌ನಲ್ಲಿ ಎಲ್ಲಾ ಮಾಹಿತಿಗಳು ಸಿಕ್ಕರೂ ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಕಿವಿಮಾತು ಹೇಳಿದರು.

ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರು ನನಗೆ ಸದಾ ಪೂಜ್ಯನೀಯರು. ಅವರ ಸ್ಮರಣಾ ಶಕ್ತಿ ಅವೋಘವಾಗಿತ್ತು. ನಾನು ಒಮ್ಮೆ ಉಡುಪಿಯಲ್ಲಿ ಏರ್ಪಡಿಸಿದ್ದ ಹಾಸ್ಯ ಸಂಜೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಆ ವೇಳೆ ಯುವಕನೊಬ್ಬ ನನ್ನ ಹಾಸ್ಯದ ತುಣುಕಿಗೆ ಕಾರ್ಯಕ್ರಮದ ನಂತರ ಆಕ್ಷೇಪ ವ್ಯಕ್ತಪಡಿಸಿದ್ದ. ಈ ವಿಷಯ ಶ್ರೀಗಳಿಗೆ ತಿಳಿದು ಹೊಸಪೇಟೆಯ ಶ್ರೀಕೃಷ್ಣಮಂದಿರದಲ್ಲಿ ಭೇಟಿಯಾಗಿದ್ದ ಸಂದರ್ಭದಲ್ಲಿ ಈ ಘಟನೆಯನ್ನು ಶ್ರೀಗಳು ಸ್ಮರಿಸಿದ್ದ ಪ್ರಸಂಗವನ್ನು ವಿವರಿಸಿದರು.

ವೇದಿಕೆಯಲ್ಲಿ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ಪಿ.ಎಸ್.ಶೇಖರ್, ಉದ್ಯಮಿ ರವಿಶಾಸ್ತ್ರಿ, ಕಾರ್ಯದರ್ಶಿ ಕೆ.ವಿ.ಶ್ರೀಧರ್, ಮಿತ್ರಮಂಡಳಿ ಉಪಾಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ರಾಘವೇಂದ್ರ ಪ್ರಸಾದ್, ಶ್ರೀವತ್ಸ, ಮಂಗಳಾ ಸೇರಿದಂತೆ ಇತರರಿದ್ದರು.

ಐಪಿಎಲ್ ಪ್ರವೇಶಿಸಿದ ಮೈಸೂರಿನ ಯುವ ಕ್ರಿಕೆಟಿಗ ಮನ್ವಂತ್‌ಕುಮಾರ್

ಡೆಲ್ಲಿ ಕ್ಯಾಪಿಟಲ್ಸ್ ತಂಡ ಪ್ರತಿನಿಧಿಸಲಿರುವ ಆಲ್‌ರೌಂಡ್ ಆಟಗಾರ



ಮೈಸೂರು,ನ.25(ವಿಎನ್‌ಎಸ್/ಪಿಎಂ)– ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2025ರ ಆವೃತ್ತಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮೈಸೂರಿನ ಯುವ ಕ್ರಿಕೆಟಿಗ ಎಲ್.ಮನ್ವಂತ್ ಕುಮಾರ್ ಆಯ್ಕೆಯಾಗಿದ್ದಾರೆ.

ಮೈಸೂರಿನ ಜೆಪಿ ನಗರದ ನಿವಾಸಿಯಾದ ಮನ್ವಂತ್ ಕುಮಾರ್, ಎಡಗೈ ಬ್ಯಾಟ್ಸ್‌ಮನ್ ಹಾಗೂ ಮಧ್ಯಮ ವೇಗದ ಬಲಗೈ ಬೌಲರ್ ಆಗಿದ್ದಾರೆ. ಜೊತೆಗೆ ಆಲ್‌ರೌಂಡರ್ ಆಗಿಯೂ ಗುರುತಿಸಿ ಕೊಂಡಿದ್ದಾರೆ. 20 ವರ್ಷ ವಯೋಮಾನದ ಈ ಆಟಗಾರನ ಡೆಲ್ಲಿ ಕ್ಯಾಪಿಟಲ್ಸ್ 30 ಲಕ್ಷಕ್ಕೆ ಬಿಡ್ ಮಾಡಿದೆ.

ಎಸ್.ಲಕ್ಷ್ಮೀಕುಮಾರ್ ಮತ್ತು ಆರ್.ಶ್ರೀದೇವಿಕುಮಾರ್ ದಂಪತಿ ಪುತ್ರ ಮನ್ವಂತ್‌ಕುಮಾರ್ ಎಲ್, 7ನೇ ತರಗತಿಯಲ್ಲಿ ಇದ್ದಾಗಲೇ ಕ್ರಿಕೆಟ್ ಆಡಲು ಪ್ರಾರಂಭಿಸಿದರು. ಇವರ ಅಣ್ಣ ಹೇಮಂತ್‌ಕುಮಾರ್ ಎಲ್ ಸಹ ಕ್ರಿಕೆಟ್ ಪಟು. ತಮ್ಮ ಅಣ್ಣನಿಂದಲೇ ಪ್ರೇರೇಪಣೆಗೊಂಡು ಮನ್ವಂತ್ ಕುಮಾರ್ ಕ್ರಿಕೆಟ್‌ನತ್ತ ಮುಖ ಮಾಡಿದರು. ಐಪಿಎಲ್‌ಗೆ ಪ್ರವೇಶ ಪಡೆಯುವುದು ಉದಯೋನ್ಮುಖ ಕ್ರಿಕೆಟ್ ಪಟುಗಳ ಬಹುದೊಡ್ಡ ಕನಸು. ಅಂತಹ ಕನಸನ್ನು ಸಾಕಾರ ಮಾಡಿಕೊಳ್ಳುವಲ್ಲಿ ಮನ್ವಂತ್ ಕುಮಾರ್ ಯಶಸ್ವಿಯಾಗಿದ್ದಾರೆ.

ಬಿಎಂಟಿಸಿಯ ನಿವೃತ್ತ ಬಸ್ ಚಾಲಕ ಎಸ್.ಲಕ್ಷ್ಮೀಕುಮಾರ್ ಅವರು ಪುತ್ರರಾದ ಎಲ್.ಹೇಮಂತ್‌ಕುಮಾರ್ ಹಾಗೂ ಎಲ್.ಮನ್ವಂತ್‌ಕುಮಾರ್ ಇಬ್ಬರ ಕ್ರಿಕೆಟ್ ಆಸಕ್ತಿಗೆ ನೀರೆರೆದು ಬೆಳೆಸಿದ್ದಾರೆ. ಎಲ್.ಮನ್ವಂತ್‌ಕುಮಾರ್ ಪ್ರಸ್ತುತ ಮೈಸೂರಿನ ಆರ್‌ಬಿಎನ್‌ಸಿಸಿ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮನ್ವಂತ್‌ಕುಮಾರ್, ಬೆನ್ ಸ್ಟೋಕ್ಸ್ ನನ್ನ ನೆಚ್ಚಿನ ಕ್ರಿಕೆಟ್ ಪಟು. ಈ ಒಂದು ಆಯ್ಕೆ ನನಗೆ ಮತ್ತು ನಮ್ಮ ಮನೆಯವರಿಗೆ ಖುಷಿ ತಂದಿದೆ. ಇದು ನನಗೆ ಅನಿರೀಕ್ಷಿತ ಬೆಳವಣಿಗೆ ಆಗಿದೆ. ನಮ್ಮ ತಂದೆಯವರು ನನ್ನ ಅಣ್ಣನಿಗೆ ಕ್ರಿಕೆಟ್ ಬಗ್ಗೆ ಆಸಕ್ತಿ ಬೆಳೆಸಿದ್ದಲ್ಲದೆ, ಆಡಲು ಪ್ರೋತ್ಸಾಹ ನೀಡಿದರು. ಇದನ್ನು ನೋಡುತ್ತಾ ಬೆಳೆದ ನನಗೂ ಕ್ರಿಕೆಟ್ ಬಗ್ಗೆ ಆಸಕ್ತಿ ಬೆಳೆಯಿತು. ಆಗ ತಂದೆಯವರು ಅಣ್ಣನಂತೆ ನನಗೂ ಉತ್ತೇಜನ ನೀಡಿದರು ಎಂದು ತಿಳಿಸಿದರು.

ಸಂಸತ್ ಚಳಿಗಾಲ ಅಧಿವೇಶನ: ವಿಪಕ್ಷಗಳ ಗದ್ದಲ; ಉಭಯ ಸದನಗಳ ಕಲಾಪ ನಾಳೆಗೆ ಮುಂದೂಡಿಕೆ

ನವದೆಹಲಿ: ಸಂಸತ್ತಿನಲ್ಲಿ ಪ್ರಸಕ್ತ ಸಾಲಿನ ಚಳಿಗಾಲದ ಅಧಿವೇಶನ ಆರಂಭವಾಗುತ್ತಿದ್ದಂತೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರ ನಡೆದ ಕಾರಣ ಉಭಯ ಸದನಗಳ ಕಲಾಪವನ್ನು ನವೆಂಬರ್ 27ಕ್ಕೆ ಮುಂದೂಡಲಾಗಿದೆ.

ಅಧಿವೇಶನದ ಮೊದಲ ದಿನದಂದು ಸದನವು ಸಭೆ ಸೇರಿದ ತಕ್ಷಣ, ಮಹಾರಾಷ್ಟ್ರದ ನಾಂದೇಡ್ ಕ್ಷೇತ್ರದಿಂದ ಸದನಕ್ಕೆ ಚುನಾಯಿತರಾಗಿದ್ದ ವಸಂತರಾವ್ ಚವಾಣ್ ಮತ್ತು ಪಶ್ಚಿಮ ಬಂಗಾಳದ ಬಸಿರ್ಹತ್ ಕ್ಷೇತ್ರದಿಂದ ಚುನಾಯಿತರಾಗಿದ್ದ ಎಸ್ಕೆ ನೂರುಲ್ ಇಸ್ಲಾಂ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

ಬಳಿಕ ವಿಪಕ್ಷಗಳು ವಕ್ಫ್ ಮಂಡಳಿ ವಿವಾದ ಹಾಗೂ ಮಣಿಪುರ ಗಲಭೆ ಕುರಿತು ಚರ್ಚೆಗೆ ಆಗ್ರಹಿಸಿದವು. ಈ ವಿಷಯದಲ್ಲಿ ವಾಗ್ವಾದ ಆರಂಭಗೊಂಡಿದ್ದರಿಂದ ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪಗಳನ್ನು ನ.27ಕ್ಕೆ ಮುಂದೂಡಲಾಯಿತು.

ಕೇಂದ್ರ ಸರ್ಕಾರ ಒಂದು ದೇಶ, ಒಂದು ಚುನಾವಣೆ, ಬ್ಯಾಂಕಿಂಗ್ ಮಸೂದೆ ಮತ್ತು ರೈಲ್ವೆ ವಿಧೇಯಕ ತಿದ್ದುಪಡಿ ಮಸೂದೆ, ವಕ್ಫ್ ಮಂಡಳಿ ಮಸೂದೆ ಮತ್ತು ಪ್ರಕೃತಿ ವಿಕೋಪ ನಿರ್ವಹಣೆ ಮಸೂದೆಗಳನ್ನು ಮಂಡಿಸಲು ಮುಂದಾಗಿತ್ತು.



ಈ ನಡುವೆ ಪ್ರತಿಪಕ್ಷಗಳು ಯಾವುದೇ ಮಸೂದೆ ಮಂಡನೆ ಮಾಡುವ ಮುನ್ನ ಮಣಿಪುರದಲ್ಲಿ ಮರುಕಳಿಸಿರುವ ಹಿಂಸಾಚಾರ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಕುರಿತು ಚರ್ಚೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದವು. ಕಲಾಪ ಆರಂಭವಾಗುತ್ತಿದ್ದಂತೆ ವಿಪಕ್ಷ ಸದಸ್ಯರು ಗದ್ದಲ ಸೃಷ್ಟಿಸಿದ್ದರಿಂದ ಸಭಾಪತಿ ಕಲಾಪವನ್ನು ಮುಂದೂಡಿದರು. ನ.26ರ ಸಂವಿಧಾನ ದಿನ ಹಿನ್ನೆಲೆಯಲ್ಲಿ ಅಧಿವೇಶನ ನಡೆಸದಿರಲು ಹಾಗೂ ಉಭಯ ಸದನಗಳ ಸದಸ್ಯರೊಂದಿಗೆ ಸಂವಿದಾನ ಭವನದಲ್ಲಿ ಸಂವಿಧಾನ ದಿನವನ್ನು ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಖದೀಮನ ಬಂಧನ; ನಾಲ್ಕು ದ್ವಿಚಕ್ರ ವಾಹನ ವಶಕ್ಕೆ



ಮೈಸೂರು, ನ.25(ಎಸ್‌ಬಿಡಿ)– ಮೈಸೂರಿನ ಲಷ್ಕರ್ ಠಾಣೆ ಪೊಲೀಸರು ದ್ವಿಚಕ್ರ ವಾಹನ ಕಳ್ಳನನ್ನು ಬಂಧಿಸಿ, ನಾಲ್ಕು ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಬಾತ್ಮೀದಾರರ ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಆರೋಪಿಯನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ ನಂತರ ಆತ ಕಳವು ಮಾಡಿದ್ದ ನಾಲ್ಕು ಸ್ಕೂಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಇದರೊಂದಿಗೆ ಲಷ್ಕರ್ ಠಾಣೆ ಹಾಗೂ ದೇವರಾಜ ಠಾಣೆಯ ತಲಾ ಎರಡು ಸ್ಕೂಟರ್ ಕಳವು ಪ್ರಕರಣಗಳು ಪತ್ತೆಯಾಗಿವೆ. ಈತ ಅಕ್ಟೋಬರ್ 22ರಂದು ಗಾಂಧಿ ವೃತ್ತದ ಬಳಿ ನಿಲ್ಲಿಸಿದ್ದ ಸುಜುಕಿ ಆಕ್ಸಿಸ್ ಸ್ಕೂಟರ್ ಸೇರಿದಂತೆ ಹಲವೆಡೆ ಕಳ್ಳತನ ಮಾಡಿರುವುದಾಗಿ ವಿಚಾರಣೆ ವೇಳೆ ತಿಳಿದು ಬಂದಿದೆ.

ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಎಂ.ರಾಧಾ, ಅನಿಲ್ ಕುಮಾರ್ ವನ್ನೂರ್, ಸಿಬ್ಬಂದಿ ಸುರೇಶ್, ರವಿಕುಮಾರ್, ಮಂಜುನಾಥ್, ಚೌಡಪ್ಪ ಪಾಸೀಗರ್, ಅಬ್ದುಲ್ ರೆಹಮಾನ್ ಮತ್ತು ಅಶ್ವಿನಿ ಹಳವಾರ ಕಾರ್ಯಾಚರಣೆ ನಡೆಸಿದ್ದರು.

ಮಕ್ಕಳು ಪುಸ್ತಕ ಓದಿನಿಂದ ದೂರಾಗಿ ನೈಜ ಜ್ಞಾನದಿಂದ ವಂಚಿತರಾಗುತ್ತಿದ್ದಾರೆ

● ರಾಜ್ಯ ಮಹಿಳಾ ವಿವಿ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ವಿಷಾಧ ● ವಿ–ಕೇರ್ ಸಂಸ್ಥೆಯಲ್ಲಿ ಕಾರಂತರ 'ತೆರೆಯ ಮರೆಯಲ್ಲಿ' ಓದು–ಚಿಂತನೆ

ಮೈಸೂರು, ನ.25(ಎಸ್‌ಬಿಡಿ)–ಪುಸ್ತಕ ಓದುವುದು ಒಂದು ಚಿಕಿತ್ಸಾತ್ಮಕ ಚಟುವಟಿಕೆ ಎಂದು ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಡಾ.ಸಬಿಹಾ ಭೂಮಿಗೌಡ ಅಭಿಪ್ರಾಯಿಸಿದರು.

ಮೈಸೂರಿನ ವಿ–ಕೇರ್ ಸಂಸ್ಥೆಯಲ್ಲಿ ನಡೆದ ತಿಂಗಳ 'ಪುಸ್ತಕ ಓದು' ನಾಲ್ಕನೇ ಸಂಚಿಕೆಯಾಗಿ ಭಾನುವಾರ ನಡೆದ ಡಾ.ಶಿವರಾಮ ಕಾರಂತರ 'ತೆರೆಯ ಮರೆಯಲ್ಲಿ' ಕಥಾಸಂಕಲನದ ಆಯ್ದ ಕಥೆಗಳ ಓದು ಮತ್ತು ಚಿಂತನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಧ್ವನಿ ಎತ್ತಿ ಪುಸ್ತಕ ಓದುವ, ಮತ್ತೊಬ್ಬರು ಓದಿದ್ದನ್ನು ಕೇಳಿಸಿಕೊಂಡು ಮನನ ಮಾಡುವ ಅಕ್ಷರ ಸಂಸ್ಕೃತಿ ನಶಿಸಿ ಹೋಗುತ್ತಿದ್ದು, ಇದರಿಂದ ಪಂಚೇಂದ್ರಿಯಗಳ ಮೇಲೆ ದುಷ್ಪರಿಣಾಮವಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಪುಸ್ತಕದಿಂದ ದೂರ ಉಳಿಯುವ ಮಕ್ಕಳು ನೈಜ ಜ್ಞಾನದಿಂದ ವಂಚಿತರಾಗಿ ವಿಚಾರ ರಹಿತ ದೃಶ್ಯ ಮಾಧ್ಯಮಗಳ ಗೀಳಿಗೆ ಬಿದ್ದಿರುವುದು ಕಳವಳಕಾರಿ. ಈ ಪರಿಸ್ಥಿತಿಯಲ್ಲಿ 'ಪುಸ್ತಕ ಓದು' ಕಾರ್ಯಕ್ರಮಗಳು ಚಿಕಿತ್ಸಾತ್ಮಕ ಚಟುವಟಿಕೆಗಳಾಗಿ ಸಹಕರಿಸಬಲ್ಲವು. ಕ್ರಿಯಾಶೀಲ ಸಮಾಜ ಕಟ್ಟುವ ಈ ಪ್ರಕ್ರಿಯೆಯನ್ನು ಅನುಷ್ಠಾನಕ್ಕೆ ತಂದಿರುವ ವಿ–ಕೇರ್ ಸಂಸ್ಥೆಯ ಶ್ರಮ ಹಾಗೂ ದೂರದೃಷ್ಟಿತ್ವ ಶ್ಲಾಘನೀಯ ಎಂದರು.



ಮೈಸೂರು ಹೂಟಗಳ್ಳಿಯಲ್ಲಿರುವ ವಿ–ಕೇರ್ ಸಂಸ್ಥೆಯಲ್ಲಿ ಭಾನುವಾರ ಪುಸ್ತಕ ಓದು ಕಾರ್ಯಕ್ರಮ ನಡೆಯಿತು.

ಲೇಖಕ ಹೇಗಿರಬೇಕು, ಲೇಖಕನ ಮಾನದಂಡಗಳು ಯಾವುವು ಎಂಬುದಕ್ಕೆ ಕಾರಂತರ ಬದುಕು ಮತ್ತು ಬರಹ ಮಾದರಿ ನಿದರ್ಶನವಾಗಿದೆ. ಪ್ರತಿಯೊಬ್ಬ ಬರಹಗಾರ ಮತ್ತು ಓದುಗ ಹಲವು ಮಿತಿಗಳಿಗೆ ಒಳಪಟ್ಟಿರುತ್ತಾನೆ. ಆದರೆ ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಬಾಲ ಸಾಹಿತ್ಯ, ವಿಜ್ಞಾನ, ಕಾದಂಬರಿಗಳು, ಸಣ್ಣ ಕಥೆಗಳು, ಆತ್ಮ ಕಥನಗಳು, ಖಗೋಳ ಜ್ಞಾನ, ಪರಿಸರ, ಸಂಸ್ಕೃತಿ, ಯಕ್ಷಗಾನ, ನಾಟಕ, ಶಿಕ್ಷಣ, ವಿಶ್ವಕೋಶ, ಕನ್ನಡ ನಿಘಂಟು, ಹೀಗೆ ಎಲ್ಲಾ ಪ್ರಾಕಾರದ ಸಾಹಿತ್ಯವನ್ನೂ ಕಾರಂತರು ನೀಡಿದ್ದಾರೆ. ನಾಡಿಗೆ ಜ್ಞಾನಪೀಠ ತಂದುಕೊಟ್ಟ ಕಾರಂತರ ವಿದ್ಯಾಭ್ಯಾಸ ಕೇವಲ ಹತ್ತನೇ ತರಗತಿ ಎಂದರೆ ಆಶ್ಚರ್ಯವಾಗುತ್ತದೆ. ಇಂದಿನ ಪೀಳಿಗೆಯ ಲೇಖಕರು ಹಾಗೂ ಓದುಗರು ಕಾರಂತರ ಶಿಸ್ತಿನ ಜೀವನದಿಂದ ಕಲಿಯುವುದು ಬಹಳಷ್ಟಿದೆ ಎಂದು ಸಲಹೆ ಕಿವಿಮಾತು ಹೇಳಿದರು. ವಿ–ಕೇರ್ ಸಂಸ್ಥೆಯ ಸಂಸ್ಥಾಪಕರಾದ ಡಾ.ಕುಮುದಿನಿ ಅವರು ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಕಾರಂತರು ಬರೆದಿರುವ ಸಣ್ಣ ಕತೆಗಳಲ್ಲಿ ಸ್ತ್ರೀ ಸಂವೇದನೆ ಗಾಢವಾಗಿದೆ. ಪಿತೃ ಪ್ರಧಾನ ವ್ಯವಸ್ಥೆಯಲ್ಲಿನ ಬಾಲೆಯರ ಗೋಳು, ಬಾಲ್ಯ ವಿವಾಹ, ವಿಧವೆಯರ ಸಂಕಷ್ಟವನ್ನು ಹೇಳುತ್ತಲೇ ಹೆಣ್ಣು ಮಕ್ಕಳ ಸಬಲೀಕರಣ ಧ್ವನಿಯೊಂದಿಗೆ ಕತೆಯನ್ನು ಅಂತ್ಯಗೊಳಿಸುತ್ತಾರೆ. ಕಾರಂತರ ಈ ದಾಟಿ ಜೀವನ್ಮುಖಿ ಹಾಗೂ ಪ್ರೇರಣೆ ನೀಡುವಂತದ್ದು ಎಂದು ಅಭಿಪ್ರಾಯಪಟ್ಟರು. ಸಾಹಿತಿ ಸತೀಶ್ ಜವರೇಗೌಡ ಮಾತನಾಡಿ, ಹಿಂದೆ ಶಾಲಾ ಶಿಕ್ಷಕರು ಪಾಠ ಮಾಡುವುದು ಊರಿಗೆ ಕೇಳಿಸುವಂತಿತ್ತು. ಗಟ್ಟಿಧ್ವನಿಯಲ್ಲಿ ಪದ್ಯ, ಹಾಡು ಹೇಳಿಕೊಡುವ ಮೂಲಕ ಮಕ್ಕಳಿಗೂ ಪ್ರೇರಣೆ ನೀಡುತ್ತಿದ್ದರು. ಈಗ ಎಲ್ಲರೂ ಮೌನಕ್ಕೆ ಶರಣಾಗಿದ್ದಾರೆ. ಶಿಕ್ಷಣ ಹಾಗೂ ಭಾಷೆಯನ್ನು ಉಳಿಸುವ ನಿಟ್ಟಿನಲ್ಲಿ ಇಂತಹ ಸೂಕ್ಷ್ಮ ವಿಚಾರಗಳನ್ನು ಶಿಕ್ಷಕರು ಪರಿಗಣಿಸಬೇಕಿದೆ ಎಂದರು. ಇದೇ ವೇಳೆ ಸಂಸ್ಥೆ ಕಾರ್ಯಕರ್ತೆ ಸಿಂಚನ 'ಜಗತ್ತು ಯಾರಿಗೆ', ಕೆಹೆಚ್‌ಬಿ ಕಾಲೋನಿ ನಿವಾಸಿ ಡಾ.ರಮ್ಯಾ 'ಶಾರದೆಯ ದ್ರೋಹ', ಸಾಹಿತಿ ಸತೀಶ್ ಜವರೇಗೌಡ 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಕತೆ ವಾಚಿಸಿದರು.

ಕಾರ್ಯಕ್ರಮದಲ್ಲಿ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ವಿ–ಕೇರ್ ಸಂಸ್ಥೆಯ ಧರ್ಮದರ್ಶಿಗಳಾದ ವಕೀಲೆ ಶೋಭಾ ಗೌಡ, ಡಾ.ಸಾರಿಕಾ ಪ್ರಸಾದ್, ಅಯ್ಯಪ್ಪ ಹೂಗಾರ್, ಮೂಡಿಗೆರೆ ಗೋಪಾಲ್, ಒಡನಾಡಿ ಸಂಸ್ಥೆಯ ವಿದ್ಯಾರ್ಥಿಗಳು, ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿ ನಿವಾಸಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ


ಮಂಗಳವಾರ 26 ನವೆಂಬರ್ 2024

ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ

ಶ್ರೀಕಂಠೇಶ್ವರ ದೇವಾಲಯಕ್ಕೆ ಹರಿದು ಬಂದ ಭಕ್ತ ಸಾಗರ



ಕಡೇ ಕಾರ್ತಿಕ ಸೋಮವಾರ ಅಂಗವಾಗಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಸಾವಿರಾರು ಭಕ್ತರು ಆಗಮಿಸಿ ತುಪ್ಪದ ದೀಪ ಹಚ್ಚಿ ಹರಕೆ ಕಟ್ಟಿದರು.



ನಂಜನಗೂಡು, ನ.25– ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ ಪುರಾಣ ಪ್ರಸಿದ್ಧ, ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ಪುನೀತರಾದರು.

ಭಾನುವಾರ ಸಂಜೆಯಿಂದಲೇ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು, ಸೋಮವಾರ ಮುಂಜಾನೆ 4 ಗಂಟೆಯಿಂದಲೇ ಕಪಿಲಾ ನದಿಯಲ್ಲಿ ಮಿಂದು, ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೇ ತುಲಾಭಾರ ಸೇವೆ, ಉರುಳು ಸೇವೆ, ಈಡು ಗಾಯಿ ಸೇವೆ, ಧೂಪದ ಸೇವೆ, ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರ ಸ್ವಾಮಿಗೆ ಬೆಳ್ಳಿ ಹರಕೆಯನ್ನು ಹುಂಡಿಗೆ ಹಾಕಿ ಶ್ರದ್ಧಾ ಭಕ್ತಿಯಿಂದ ಸೇವೆ ಸಲ್ಲಿಸಿ ಭಕ್ತಿ ಮೆರೆದರು.

ಕಡೇ ಕಾರ್ತಿಕ ಸೋಮವಾರ ಅಂಗವಾಗಿ ಶ್ರೀಕಂಠೇಶ್ವರಸ್ವಾಮಿ ಅವರಿಗೆ ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಶ್ರೀಕಂಠೇಶ್ವರ ಸ್ವಾಮಿ ಅವರಿಗೆ ಪಂಚ ತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ಯ ಅರ್ಪಣೆ, ಕಲ್ಲು ಸಕ್ಕರೆ, ಏಕಾವರ ಮಹಾರುದ್ರಾಭಿಷೇಕ, ಪುಣ್ಯಾಹ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾ ಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿ ಕೊಡಲಾಯಿತು. ದಾಸೋಹ ಭವನದಲ್ಲಿ ದೇವಾಲಯಕ್ಕೆ ಆಗಮಿಸಿದ್ದ ಭಕ್ತರಿಗೆ ವಿಶೇಷವಾಗಿ ಅನ್ನ, ಸಾಂಬಾರ್, ಪಾಯಸ, ಪಲ್ಯದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಪ್ರಸನ್ನ ನಂಜುಂಡೇಶ್ವರ ಸನ್ನಿಧಿಯಲ್ಲೂ ವಿಶೇಷ ಪೂಜೆ: ತಾಲೂಕಿನ ಚಿಕ್ಕಯ್ಯನಛತ್ರ ಗ್ರಾಮದ ಶ್ರೀಪ್ರಸನ್ನ ನಂಜುಂಡೇಶ್ವರ ದೇವಾಲಯದಲ್ಲಿ ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ದೇವಾಲಯಕ್ಕೆ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು. ದೇವಾಲಯದಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ದೇವಾಲಯಕ್ಕೆ ಆಗಮಿಸಿದ್ದ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವ



ಶ್ರೀಕಂಠೇಶ್ವರಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ನಂಜನಗೂಡು: ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ ನಯನಜ ಕ್ಷತ್ರಿಯ ಸಮಾಜದಿಂದ ಶ್ರೀಕಂಠೇಶ್ವರಸ್ವಾಮಿ ಅವರ ಹೂವಿನ ಪಲ್ಲಕ್ಕಿ ಉತ್ಸವ ಸೋಮವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ರಥ ಬೀದಿಯಲ್ಲಿ ಸಾಗಿದ ಪಲ್ಲಕ್ಕಿ ಉತ್ಸವ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಸನ್ನಿಧಿಯಲ್ಲಿ ಕೊನೆಗೊಂಡಿತು. ಮೆರವಣಿಗೆ ವೇಳೆ ರಸ್ತೆ ಇಕ್ಕೆಲಗಳಲ್ಲಿ ನಿಂತಿದ್ದ ಭಕ್ತರು ದೇವರ ದರ್ಶನ ಪಡೆದು ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥಿಸಿದರು. ಅಲ್ಲದೇ ರಥಬೀದಿಯಲ್ಲಿ ಬಾಣ, ಬಿರುಸು, ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಿದರು. ನುರಿತ ಕಲಾವಿದರು ನಡೆಸಿಕೊಟ್ಟ ಮಂಗಳವಾದ್ಯ ಭಕ್ತರ ಮನಸೆಳೆದು ಮನಸೂರೆಗೊಂಡಿತು. ಇದೇ ವೇಳೆ ಅನ್ನಸಂತರ್ಪಣೆ ನಡೆಯಿತು.

ಜಿಲ್ಲಾ ಸವಿತಾ ಸಮಾಜದ ಮುಖಂಡ ನಾಗೇಶ್ ಮಾತನಾಡಿ, ನಮ್ಮ ಸಮಾಜದಿಂದ ಕಳೆದ ನೂರಾರು ವರ್ಷಗಳಿಂದ ಕಡೇ ಕಾರ್ತಿಕ ಸೋಮವಾರ ದಂದು ಶ್ರೀಕಂಠೇಶ್ವರ ಪಲ್ಲಕ್ಕಿ ಉತ್ಸವ ಮತ್ತು ಬಾಣ ಬಿರುಸುಗಳ ಕಾರ್ಯಕ್ರಮ ನಡೆಸಿ ಕೊಂಡು ಬರುತ್ತಿದ್ದೇವೆ. ಆದರೆ ಕಳೆದ ವರ್ಷದಿಂದ ಸರ್ಕಾರ ಪಟಾಕಿಗೆ ನಿಷೇಧ ಹೇರಿದ್ದರಿಂದ ಅನ್ನಸಂತರ್ಪಣೆ ನಡೆಸುವ ಮೂಲಕ ಸೇವೆ ನಡೆಸಲಾಗಿದೆ. ಮುಂದಿನ ವರ್ಷದಿಂದ ಸರ್ಕಾರ ಬಾಣ ಬಿರುಸು ಸೇವೆಗೆ ಅವಕಾಶ ಕಲ್ಪಿಸಬೇಕು ಎಂದು ಮನವಿ ಸಲ್ಲಿಸಲಾಗಿದೆ ಎಂದರು. ಈ ವೇಳೆ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್, ಸವಿತಾ ಸಮಾಜದ ಅಧ್ಯಕ್ಷ ಎನ್.ಬಿ. ರಾಚಪ್ಪ, ಕಾರ್ಯದರ್ಶಿ ಎನ್.ಶ್ರೀನಿವಾಸ್, ಖಜಾಂಚಿ ಸೋಮಣ್ಣ, ಮುಖಂಡರಾದ ವಿಷಕಂಠ, ಎನ್.ಆರ್. ಪ್ರಕಾಶ್, ಚಂದ್ರು, ಶಿವನಾಗ, ಸುನಿ, ಸತೀಶ್, ನಿಂಗರಾಜು, ರಾಜಣ್ಣ, ಮಂಜು ಸೇರಿದಂತೆ ಸವಿತಾ ಸಮಾಜದ ಮುಖಂಡರು, ಯಜಮಾನರು, ಸಾವಿರಾರು ಭಕ್ತರು ಇದ್ದರು.

ಮಕ್ಕಳಿಗೆ ಮನೆಯಲ್ಲೇ ಕನ್ನಡ ಕಲಿಸಿ, ಅಭಿಮಾನ ಮೂಡಿಸಿ

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ



ಕನ್ನಡ ರಾಜ್ಯೋತ್ಸವವನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ನ.25– ಮಕ್ಕಳಿಗೆ ಮನೆಯಲ್ಲೇ ಮಾತೃಭಾಷೆ ಕನ್ನಡ ಕಲಿಸಿ, ಅಭಿಮಾನ ಮೂಡಿಸುವುದರಿಂದ ಭಾಷೆ ಬೆಳವಣಿಗೆ ಸಾಧ್ಯವಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ವಿದ್ಯಾನಗರ ಬಡಾವಣೆಯ ಶ್ರೀವಿನಾಯಕ ಗೆಳೆಯರ ಬಳಗ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ತಾಯಿ ನುಡಿ. ನಮ್ಮ ಭಾಷೆ ನಮಗೆ ಅಭಿಮಾನದ ಭಾಷೆ. ಮಕ್ಕಳಿಗೆ ಕಲಿಕೆ ಮನೆಯಿಂದಲೇ ಆರಂಭವಾಗುತ್ತದೆ. ಈ ವೇಳೆ ಮಾತೃಭಾಷೆಯನ್ನು ಕಲಿಸುವುದರ ಜೊತೆಗೆ ಅವರಿಗೆ ಮಾತೃ ಭಾಷೆಯಲ್ಲೇ ಶಿಕ್ಷಣ ಕೊಡಿಸಬೇಕು. ಸಿಎಂ ಸಿದ್ದರಾಮಯ್ಯನವರು ಪ್ರಾಥಮಿಕ ಹಂತದಿಂದಲೇ ಮಾತೃಭಾಷೆ ಶಿಕ್ಷಣ ಸಿಗಬೇಕು ಎಂದು ಆದೇಶಿಸಿದ್ದಾರೆ. ಕನ್ನಡ ಆಡಳಿತ ಭಾಷೆಯಾಗಿ ರೂಢಿಯಲ್ಲಿದೆ. ಬೇರೆ ಭಾಷೆ ಕಲಿತರೂ ನಮ್ಮ ಭಾಷೆ ಮರೆಯದೇ ಬಳಸಿ ಬೆಳೆಸಬೇಕು ಎಂದು ಸಲಹೆ ನೀಡಿದರು. ವಾಟಾಳು ಮಠಾಧೀಶ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕನ್ನಡ ಶಾಸ್ತ್ರೀಯ ಭಾಷೆಯಾಗಿದ್ದು, ಅದನ್ನು ಉಳಿಸಿ ಬೆಳೆಸಲು ಭಾಷೆಯ ಬೆಳವಣಿಗೆ ಹೆಚ್ಚಾಗಬೇಕು. ಜೊತೆಗೆ ನಮ್ಮ ಮಾತೃ ಭಾಷೆ ಬಗ್ಗೆ ಪ್ರೀತಿ, ಅಭಿಮಾನ ಹೆಚ್ಚಾಗಬೇಕು ಎಂದರು.

ಉಪನ್ಯಾಸಕ ಎಂ.ಮಹದೇವ್ ಮಾತನಾಡಿ, ಪ್ರಾಣಿ ಸಂಕುಲದಲ್ಲಿ ಮಾತನಾಡುವ ಕಲೆಯಿಂದ ಮನುಷ್ಯ ಮೇಲ್ಮಟ್ಟದ ಜೀವಿ ಎನಿಸಿದ್ದಾನೆ. ಆತನ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಭಾಷೆ ಬಹಳ ಪ್ರಾಮುಖ್ಯತೆ ವಹಿಸುತ್ತದೆ. ನಮ್ಮ ಕನ್ನಡ ಭಾಷೆ ಬಹಳ ಪುರಾತನವಾಗಿದ್ದು, 8 ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಭಾಷೆ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆ ಸಾಹಿತ್ಯ ಅಧ್ಯಯನ ಕನ್ನಡಿಗರಲ್ಲಿ ಕುಂಠಿತವಾಗುತ್ತಿದೆ. ಇದರಿಂದ ಭಾಷೆ ಬೆಳಗಲು ಸಾಧ್ಯವಿಲ್ಲ. ಕನ್ನಡಿಗರು ಮಾತೃಭಾಷೆ ಪ್ರೀತಿಸಿ, ಅನ್ಯ ಭಾಷೆಗಳನ್ನು ಗೌರವಿಸಿ ಅಧ್ಯಯನಶೀಲ ಪ್ರವೃತ್ತಿ ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ಈ ವೇಳೆ ಪುರಸಭಾಧ್ಯಕ್ಷೆ ವಸಂತ ಶ್ರೀಕಂಠ, ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಸದಸ್ಯರಾದ ಎನ್.ಸೋಮು, ಮಹದೇವಮ್ಮ, ಮೆಡಿಕಲ್ ನಾಗರಾಜು, ರೂಪ ಕರಿಯಪ್ಪ, ಸಿಸ್ಟಮ್ ಸಿದ್ದು, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ತುಂಬಲ ಬಾಬು, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕುರಿ ನಿಗಮದ ಹೊಸಹಳ್ಳಿ ಮಹದೇವ್, ಕಿರಗಸೂರು ಕಾಂತರಾಜು, ಜಿಲ್ಲಾ ವೈದ್ಯಕೀಯ ವಿಭಾಗದ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ. ಪ್ರದೀಪ್, ಗಣೇಶ್, ಮಿಥುನ್, ವಿನಾಯಕ ಗೆಳೆಯರ ಬಳಗದ ಸ್ವಾಮಿ, ನವೀನ್, ಸುಹಾಗ್, ಸುಮನ್ ಶೆಟ್ಟಿ, ವರುಣ್ ನಾಗ ರಾಜ್, ಪ್ರಶಾಂತ್ ರಾಜು, ಪ್ರಸಾದ್, ಮನೋಜ್, ಭರತ್, ಯಶಸ್ ಮತ್ತಿತರರಿದ್ದರು.

ಸಂಭ್ರಮದ ಬೇಲದಕುಪ್ಪೆ ಮಹದೇಶ್ವರ ಜಾತ್ರಾ ಮಹೋತ್ಸವ



ಬೇಲದಕುಪ್ಪೆ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಶಾಸಕ ಅನಿಲ್ ಭಾಗವಹಿಸಿದ್ದರು.

ಸರಗೂರು, ನ.25– ಬಂಡೀಪುರ ಅರಣ್ಯ ವ್ಯಾಪ್ತಿಯ ಬೇಲದಕುಪ್ಪೆ ಮಹದೇಶ್ವರ ದೇವಸ್ಥಾನದಲ್ಲಿ ಸೋಮವಾರ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವದ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಜಾತ್ರಾ ಮಹೋತ್ಸವ ಅಂಗವಾಗಿ ದೇವಸ್ಥಾನವನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮಹದೇಶ್ವರ ಕೊಳಗ, ಚನ್ನಗುಂಡಿ ಗ್ರಾಮದ ರುದ್ರಾಕ್ಷಿ ಮಂಟಪ ಹುಲಿವಾಹನ, ಮುತ್ತಿಗೆಹುಂಡಿ ಗ್ರಾಮದ ನಂದಿಧ್ವಜ, ಎತ್ತಿಗೆ ಗ್ರಾಮದ ಹುಲಿ ವಾಹನ, ಅರಳಹಳ್ಳಿ, ನಾಗಣಪುರ ಯಶವಂತಪುರ ಗ್ರಾಮದ ಹುಲಿವಾಹನ ಬಿರುದು ಸಮೇತ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಕರೆತರಲಾಯಿತು.

ದೇವಸ್ಥಾನದ ಸಮೀಪದ ಕೆರೆಯಿಂದ ಹಾಲರವಿ ಸೇವೆ ನಡೆಸಲಾಯಿತು. ಬಳಿಕ ದೇವಾಲಯದ ಬಸವಗಳಿಂದ ಕೊಂಡವನ್ನು ಹಾಯಿಸಲಾಯಿತು. ನಂತರ ನೂರಾರು ಭಕ್ತರು ಕೊಂಡ ಹಾಯ್ದರು. ಇದಕ್ಕೂ ಮುನ್ನಾ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆದು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಶಾಸಕ ಅನಿಲ್ ದೇವರ ದರ್ಶನ ಪಡೆದು ಮಾತನಾಡಿ, ಸಾವಿರಾರು ಸಂಖ್ಯೆಯಲ್ಲಿ ಸನ್ನಿಧಿಗೆ ಆಗಮಿಸುವ ಭಕ್ತರಿಗೆ ದೇವರ ಮೇಲೆ ನಂಬಿಕೆ ಇದೆ. ಜಿಲ್ಲಾಡಳಿತ, ಧಾರ್ಮಿಕ ದತ್ತಿ ಇಲಾಖೆ, ತಾಲೂಕು ಆಡಳಿತ, ಅರಣ್ಯ, ಆರೋಗ್ಯ, ಪೊಲೀಸ್ ಇಲಾಖೆ ಸೇರಿದಂತೆ ಎಲ್ಲರ ಸಹಕಾರದಿಂದ ಜಾತ್ರೆ ಯಶಸ್ವಿಯಾಗಿದೆ ಎಂದರು.

ಇದೇ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಡಿವೈಎಸ್‌ಪಿ ಗೋಪಾಲಕೃಷ್ಣ ನೇತೃತ್ವದಲ್ಲಿ ಸಿಪಿಐ ಎಂ.ಲಕ್ಷ್ಮಿಕಾಂತ್, ಎಸ್‌ಐ ನಂದೀಶ್ ಕುಮಾರ್ ಒಳಗೊಂಡ 350 ಮಂದಿಯನ್ನು ಬಂದೋಬಸ್ತ್‌ಗೆ ನಿಯೋಜಿಸಲಾಗಿತ್ತು ಅಲ್ಲದೇ ಭಕ್ತರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ 100 ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಅರಣ್ಯ ಇಲಾಖೆ ಚೈನ್‌ಗೇಟ್ ಸಮೀಪ 9 ಎಕರೆ ಜಾಗದಲ್ಲಿ ಜಾತ್ರೆ ಸಂಬಂಧಿಸಿದಂತೆ ಕಾರ್ಯ ವೈಖರಿಗಳು ನಡೆದವು. 3 ಎಕರೆ ಜಾಗದಲ್ಲಿ ಖಾಸಗಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಅಂಗಡಿ ಮುಂಗಟ್ಟುಗಳು ತೆರೆದಿದ್ದವು. ಕೊಂಡೋತ್ಸವಕ್ಕೆ ನೂರಾರು ಎತ್ತಿನಗಾಡಿಯಲ್ಲಿ ಭಕ್ತರು ಸಾಲಿನಲ್ಲಿ ಆಗಮಿಸುತ್ತಿದ್ದದ್ದು ವಿಶೇಷವಾಗಿತ್ತು. ಜನರು ತಮಗೆ ಇಷ್ಟವಾದ ಪದಾರ್ಥಗಳನ್ನು ಖರೀದಿಸಿದರು.

ಜಾತ್ರಾ ಮಹೋತ್ಸವದಲ್ಲಿ ತಹಸೀಲ್ದಾರ್ ಮೋಹನಕುಮಾರಿ, ಇಓ ರಘು, ಪಾರುಪತ್ತೇದಾರ್ ಮಹದೇವಸ್ವಾಮಿ, ರಾಕೇಶ್ ಹಾಗೂ ಎಸಿಎಫ್ ಸತೀಶ್, ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಡಾ. ಚಂದ್ರಶೇಖರ್, ಡಾ.ಕೀರ್ತಿ, ಡಾ. ರೋಹನ್ ಸೇರಿದಂತೆ ಇನ್ನಿತರರು ಇದ್ದರು.

ಉಚಿತ ಟ್ಯೂಷನ್ ತರಬೇತಿ ಕಾರ್ಯಕ್ರಮ



ಉಚಿತ ಟ್ಯೂಷನ್ ತರಬೇತಿ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಭಾಸ್ಕರ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ನ.25– ಗ್ರಾಮೀಣ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗುವ ನಿಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯೂಷನ್ ತರಬೇತಿ ನೀಡಲಾಗುವುದು ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಭಾಸ್ಕರ್ ತಿಳಿಸಿದರು.

ತಾಲೂಕಿನ ಅಂತರಸಂತೆ ವಲಯದ ಕೆ.ಆರ್.ಪುರ ಮಗ್ಗೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 3 ತಿಂಗಳ ಉಚಿತ ಟ್ಯೂಷನ್ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಾಕಷ್ಟು ಮಕ್ಕಳು ಟ್ಯೂಷನ್‌ಗೆ ಹೋಗಲು ಆಗದೇ ಸಾಕಷ್ಟು ಸಮಸ್ಯೆಗಳನ್ನ ಎದುರಿಸುತ್ತಿದ್ದಾರೆ. ಹೀಗಾಗಿ ಜ್ಞಾನವಿಕಾಸ ಕಾರ್ಯಕ್ರಮದಡಿ ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯಿಂದ 3 ತಿಂಗಳ ಉಚಿತ ಟ್ಯೂಷನ್ ತರಬೇತಿ ನೀಡಲಾಗುವುದು. ಮಕ್ಕಳು ಕಲಿಕೆಯಲ್ಲಿ ಉತ್ತಮ ಸಾಧನೆ ಮಾಡಿ ಪೋಷಕರಿಗೆ ಮತ್ತು ಶಾಲೆಗೆ ಕೀರ್ತಿ ತರಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಹರ್ಷವರ್ಧನ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಲೋಕೇಶ್, ಸಹಶಿಕ್ಷಕ ರಾಜು, ಜ್ಞಾನವಿಕಾಸ ಸಮನ್ವಯಾಧಿಕಾರಿ ಮಲ್ಲಮ್ಮ, ಮೇಲ್ವಿಚಾರಕಿ ಶಾಂತ, ಸೇವಾ ಪ್ರತಿನಿಧಿ ಜಯಮ್ಮ, ಎಸ್‌ಡಿಎಂಸಿ ಸದಸ್ಯರು ಹಾಗೂ ಸಂಘದ ಸದಸ್ಯರು, ಮಕ್ಕಳು ಹಾಜರಿದ್ದರು.

2.7 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಿದರು.

ಹುಣಸೂರು, ನ.25– ನಗರದ ಸದಾಶಿವನಕೊಪ್ಪಲು ಬಡಾವಣೆಯಲ್ಲಿ 2.7 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಡಿ. ಹರೀಶ್‌ಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ ನಾಲ್ಕರ ಪ್ಯಾಕೇಜ್ 3 ರಲ್ಲಿ ಅನುಮೋದನೆಗೊಂಡ 2.7 ಕೋಟಿ ರೂ. ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮತ್ತೆ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದರು.

ನಗರದ 7ನೇ ವಾರ್ಡ್ ಸದಾಶಿವನಕೊಪ್ಪಲು ಬಡಾವಣೆಯಲ್ಲಿ ಉದ್ಯಾನವನ ಅಭಿವೃದ್ಧಿಗಾಗಿ 29.63 ಲಕ್ಷ, 25ನೇ ವಾರ್ಡ್ ಚಿಕ್ಕಹುಣಸೂರಿನಲ್ಲಿ 23.76 ಲಕ್ಷ ವೆಚ್ಚದಲ್ಲಿ ಅಂಬೇಡ್ಕರ್ ಭವನದ ಮೊದಲ ಅಂತಸ್ತಿನ ಕಟ್ಟಡ ನಿರ್ಮಾಣ, ಹಾಗೂ ಚಿಕ್ಕಹುಣಸೂರು ಸರ್ಕಲ್‌ನಲ್ಲಿ 4.13 ಲಕ್ಷ ವೆಚ್ಚದಲ್ಲಿ ಎಲ್‌ಇಡಿ ಹೈಮಾಸ್ಕ್ ಲೈಟ್ ಅಳವಡಿಕೆ, 15ನೇ ವಾರ್ಡ್‌ನ ಸರಸ್ವತಿಪುರಂ ಮೊಹಲ್ಲಾದ ಪಜಾತಿ ಜನಾಂಗದ ಸ್ಮಶಾನದ ಒಳಾಂಗಣ ಅಭಿವೃದ್ಧಿ ಕಾಮಗಾರಿ, 9ನೇ ವಾರ್ಡ್‌ನ ಮುದ್ದು ಸಾಬ್ ಮೊಹಲ್ಲಾ ಮತ್ತು ಶಬ್ಬೀರ್ ನಗರದ ಮುಸ್ಲಿಂ ಸ್ಮಶಾನಗಳಲ್ಲಿ 30.90 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ, ಅಲ್ಲದೆ ನಗರಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲಾ ಕಾಲೇಜುಗಳು ಮತ್ತು ಸರ್ಕಾರಿ ಕಟ್ಟಡಗಳಲ್ಲಿ 63.75 ಲಕ್ಷ ವೆಚ್ಚದಲ್ಲಿ ವಿಕಲ ಚೇತನರಿಗಾಗಿ ಸ್ನೇಹಿ ಶೌಚಾಲಯ ಹಾಗೂ ಸ್ನೇಹಿ ಜಾರು ಹಾದಿಗಳ ನಿರ್ಮಾಣ ಕಾಮಗಾರಿ, ನಗರಸಭಾ ಕಚೇರಿ ಕಟ್ಟಡಕ್ಕೆ 19.11 ಲಕ್ಷ ವೆಚ್ಚದಲ್ಲಿ ಲಿಫ್ಟ್ ಅಳವಡಿಸುವ ಕಾಮಗಾರಿ ನಡೆಯಲಿವೆ ಎಂದರು.

ನಗರಸಭಾಧ್ಯಕ್ಷ ಶರವಣ ಮಾತನಾಡಿದರು. ಪೌರಾಯುಕ್ತೆ ಮಾನಸ, ಉಪಾಧ್ಯಕ್ಷೆ ಆಶಾ, ಸದಸ್ಯರಾದ ಹೆಚ್.ಪಿ. ಸತೀಶ್‌ಕುಮಾರ್, ಕೃಷ್ಣರಾಜಗುಪ್ತ, ದೇವನಾಯಕ, ರಾಣಿಪೆರುಮಾಳ್, ದೇವರಾಜು.ಸಿ, ಶ್ರೀನಾಥ್, ಹರೀಶ, ಗಣೇಶ್ ಕುಮಾರಸ್ವಾಮಿ, ರಿಜ್ವಾನ್ ಅಹಮದ್, ಮಾಜಿ ಅಧ್ಯಕ್ಷ ಹೆಚ್.ಎನ್. ಚಂದ್ರಶೇಖರ್, ಮುಖಂಡ ಕೆಂಪೇಗೌಡ, ಎಇಇ ಶರ್ಮಿಳಾ, ಎಇ ಲೋಕೇಶ್, ಜೆಇ ಸುಮಂತ್, ಇತರರಿದ್ದರು.

ಶಾಸಕ ಜಿಟಿಡಿಗೆ ಹುಟ್ಟುಹಬ್ಬದ ಶುಭಾಶಯ



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು ಸಿಹಿ ತಿನ್ನಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಜಯಪುರ ಗ್ರಾಪಂ ಸದಸ್ಯರಾದ ಎಂ.ನಾಗರಾಜು, ಬಿ.ರೇಣುಕಾ, ಮುಖಂಡರಾದ ಮಹದೇವಸ್ವಾಮಿ, ಅಬ್ದುಲ್ ಮುತಾಲಿಫ್, ಮಂಜುನಾಥ್, ಟಿ.ಪಿ.ನಾಗರಾಜು ಹಾಜರಿದ್ದರು.

ಕೆ.ಆರ್.ನಗರದಲ್ಲಿ ವೈಭವದ ಮಲೆಮಹದೇಶ್ವರಸ್ವಾಮಿ ಉತ್ಸವ



ಕೆ.ಆರ್.ನಗರದಲ್ಲಿ ಮಲೆ ಮಹದೇಶ್ವರಸ್ವಾಮಿ ಉತ್ಸವ ನಡೆಯಿತು.

ಕೆ.ಆರ್.ನಗರ, ನ.25– ಪಟ್ಟಣದ ಬಸವೇಶ್ವರ ಬಡಾವಣೆಯಲ್ಲಿ 54ನೇ ವರ್ಷದ ಮಲೆ ಮಹದೇಶ್ವರಸ್ವಾಮಿ ಉತ್ಸವ ಸೋಮವಾರ ವೈಭವದಿಂದ ನಡೆಯಿತು.

ಉತ್ಸವಕ್ಕೆ ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜ ಶ್ರೀಗಳು, ಕರ್ಪೂರವಳ್ಳಿ ಜಂಗಮ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಬೆಟ್ಟದಪುರ ವಿರಕ್ತ ಮಠದ ಚನ್ನವೀರ ದೇಶಿಕೇಂದ್ರ ಸ್ವಾಮೀಜಿ, ಲಾಳನಹಳ್ಳಿ ಮಠದ ಶರಣೆ ಜಯದೇವಿ ತಾಯಿ ಮತ್ತು ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಸ್ವಾಮಿಗಳು ಚಾಲನೆ ನೀಡಿದರು.

ಉತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅರಣ್ಯ ಸಚಿವ, ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಪ್ರಧಾನ ಕಾರ್ಯದರ್ಶಿ ಈಶ್ವರ ಬಿ.ಖಂಡ್ರೆ, ನಮ್ಮ ಪ್ರಾಚೀನ ಸಂಸ್ಕೃತಿ, ಸಂಪ್ರದಾಯಗಳ ಉಳಿವಿಗೆ ಜಾತ್ರೆ, ಉತ್ಸವ, ಧಾರ್ಮಿಕ ಮಹೋತ್ಸವಗಳು ಸಾಕ್ಷಿಯಾಗಿವೆ ಎಂದರು.

ಕಾರ್ತಿಕ ಮಾಸ ಬೆಳಕಿನ ಹಬ್ಬವಾಗಿದ್ದು, ಅದು ನಮ್ಮಲ್ಲಿರುವ ಅಜ್ಞಾನವೆಂಬ ಅಂಧಕಾರವನ್ನು ತೊಡೆದು ಹಾಕಿ, ಸುಜ್ಞಾನದ ಬೆಳಕನ್ನು ಹಚ್ಚುವ ಮಾಸವಾಗಿದ್ದು ಈ ಸಮಯದಲ್ಲಿ ವಿವಿಧ ಶಿವ ದೇವಾಲಯಗಳಲ್ಲಿ ವಿಶೇಷ ಪೂಜೆ, ಅರ್ಚನೆ, ಲಕ್ಷ ದೀಪೋತ್ಸವ ಮತ್ತು ಉತ್ಸವಗಳು ನಡೆದು ಧಾರ್ಮಿಕ ವಿಚಾರಗಳ ವಿನಿಮಯಗಳ ಮೂಲಕ ಸಹಬಾಳ್ವೆಯ ಮಹತ್ವ ಸಾರುತ್ತವೆ ಎಂದು ಹೇಳಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಉತ್ಸವದ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಮಹದೇಶ್ವರಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಿ, ಪುಷ್ಪಾಲಂಕಾರ ಮಾಡಲಾಗಿತ್ತು ದೇವಾಲಯದ ಒಳಾಂಗಣವನ್ನು ಬಗೆ ಬಗೆಯ ಹೂಗಳಿಂದ ವಿಶೇಷವಾಗಿ ಅಲಂಕಾರ ಮಾಡಲಾಗಿತ್ತು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಬಳಿಕ ದೇವಾಲಯದಿಂದ ಹೊರಟ ಮಲೆ ಮಹದೇಶ್ವರ ಸ್ವಾಮಿ ಮುತ್ತಿನ ಪಲ್ಲಕ್ಕಿ ಉತ್ಸವ ಬಸವೇಶ್ವರ ಬಡಾವಣೆ, ಮೈಸೂರು–ಹಾಸನ ಮುಖ್ಯ ರಸ್ತೆ, ಬಜಾರ್ ರಸ್ತೆ, 7ನೇ ರಸ್ತೆಯ ಮೂಲಕ ದೇವಾಲಯದವರೆಗೆ ಸಾವಿರಾರು ಮಂದಿ ಭಕ್ತರ ಜಯಘೋಷದ ನಡುವೆ ನಡೆಯಿತು. ಮೆರವಣಿಗೆಯಲ್ಲಿ ನಂದಿಧ್ವಜ, ನಾಸಿಕ್ ಬ್ಯಾಂಡ್, ಪೂಜಾಕುಣಿತ, ವೀರಭದ್ರ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಮೆರಗು ನೀಡಿದವು. ಸಂಜೆ ಬಸವೇಶ್ವರ ದೇವಾಲಯದ ಮುಂಭಾಗ ಕೊಂಡೋತ್ಸವ ನಡೆಯಿತು. ಬಳಿಕ ಅನ್ನದಾಸೋಹ ನಡೆಸಲಾಯಿತು. ಮಹೋತ್ಸವದಲ್ಲಿ 50 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಈ ವೇಳೆ ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ನವ ನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ದೇವಸ್ಥಾನ ಸಮಿತಿ ಅಧ್ಯಕ್ಷ ಬೋಜರಾಜು, ಗೌರವಾಧ್ಯಕ್ಷ ಆರ್.ಹೆಚ್. ನಟರಾಜು, ಉಪಾಧ್ಯಕ್ಷ ಕೆ.ಎಸ್. ಸೋಮೇಶ್, ಕಾರ್ಯದರ್ಶಿ ಕೆ.ಬಿ.ಮಂಜುನಾಥ್, ಖಜಾಂಚಿ ಎ.ಎಸ್.ಗಣೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ಪುರಸಭೆ ಸದಸ್ಯರಾದ ಮಂಜುಳ, ತೋಂಟದಾರ್ಯ, ವೀಣಾ, ಕೆ.ಪಿ.ಪ್ರಭುಶಂಕರ್, ನಟರಾಜು, ಮಾಜಿ ಅಧ್ಯಕ್ಷೆ ಹರ್ಷಲತಾ, ವೀರಶೈವ ಮುಖಂಡ ಶಿವಣ್ಣ ಮತ್ತು ಸಮಿತಿ ಪದಾಧಿಕಾರಿಗಳು ಹಾಜರಿದ್ದರು.

ಉಪ ಚುನಾವಣೆ ಗೆಲುವು ಕಾಂಗ್ರೆಸ್ ಆಡಳಿತಕ್ಕೆ ಸಂದ ಜಯ

ಕೆ.ಆರ್.ನಗರ: ರಾಜ್ಯದಲ್ಲಿ ನಡೆದ 3 ಕ್ಷೇತ್ರಗಳ ಉಪ ಚುನಾವಣೆ ಗೆಲುವು ಪಂಚ ಗ್ಯಾರಂಟಿಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಜನಪರ ಆಡಳಿತಕ್ಕೆ ಸಂದ ಜಯ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಜನಪರವಾಗಿ ಕಾರ್ಯ ನಿರ್ವಹಿಸಿ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದ್ದು, ಇದನ್ನು ಸಹಿಸದ ಪ್ರತಿಪಕ್ಷಗಳು ಇಲ್ಲಸಲ್ಲದ ಅಪ ಪ್ರಚಾರ ಮಾಡಿ ಸುಳ್ಳು ಆರೋಪ ಹೊರಿಸಿ ಅಬ್ಬರದ ಪ್ರಚಾರ ಮಾಡಿದರೂ ನಾಡಿನ ಜನರು ಜೆಡಿಎಸ್, ಬಿಜೆಪಿ ಅಪವಿತ್ರ ಮೈತ್ರಿ ತಿರಸ್ಕರಿಸಿದ್ದಾರೆ ಎಂದರು.

ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರಗಳನ್ನು ಅಭದ್ರಗೊಳಿಸುವ ಸಂಚನ್ನು ಬಿಜೆಪಿ ಮಾಡುತ್ತಿದ್ದು, ರಾಜ್ಯದಲ್ಲಿ 136 ಕ್ಷೇತ್ರಗಳಲ್ಲಿ ಪ್ರಚಂಡ ಜಯ ಸಾಧಿಸಿರುವ ಕಾಂಗ್ರೆಸ್ ಪಕ್ಷವನ್ನು ಅಸ್ಥಿರಗೊಳಿಸಲು ಪಕ್ಷದ ನಾಯಕರ ಮೇಲೆ ಅನಗತ್ಯ ಕೇಸ್‌ಗಳನ್ನು ದಾಖಲಿಸುತ್ತಾ ರಾಜ್ಯದ ಜನತೆಯ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಜನರು ಉಪ ಚುನಾವಣಾ ಫಲಿತಾಂಶದ ಮೂಲಕ ತಕ್ಕ ಉತ್ತರ ನೀಡಿದ್ದಾರೆ ಎಂದರು. ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಕೆಗೂ ಮುಖ್ಯಮಂತ್ರಿಗಳಿಗೂ ಯಾವುದೇ ಸಂಬಂಧವಿಲ್ಲ. ಆದರೆ ಬಿಜೆಪಿಗರು ಅನಗತ್ಯವಾಗಿ ಅವರ ಹೆಸರನ್ನು ಎಳೆದು ತಂದಿದ್ದು ಇದನ್ನು ಜನತೆ ಕ್ಷಮಿಸುವುದಿಲ್ಲ. ಉಪ ಚುನಾವಣೆ ಫಲಿತಾಂಶ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಇರುವ ಜನರ ಬೆಂಬಲ ಅರಿತು ಮುಂದಿನ ದಿನಗಳಲ್ಲಿ ವಿಪಕ್ಷಗಳು ರಾಜ್ಯದ ಅಭಿವೃದ್ಧಿ ಮಾಡಲು ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು.

ಹುಲಿ ದಾಳಿಗೆ ಹಸು ಬಲಿ



ಹುಲಿ ದಾಳಿಗೆ ಹಸು ಬಲಿಯಾಗಿರುವುದು.

ಮಲ್ಕುಂಡಿ, ನ.25– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಸೋಮವಾರ ಸಮೀಪದ ಬಳ್ಳೂರು ಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ರಾಜೇಶ್ ಅವರಿಗೆ ಸೇರಿದ ಹಸು ಬಲಿಯಾಗಿರುವುದು. ಈತ ತಮ್ಮ ಜಮೀನಿನಲ್ಲಿ ಹಸುಗಳನ್ನು ಮೇಯಿಸುತ್ತಿದ್ದ ವೇಳೆ ಹುಲಿ ಹಸುವಿನ ಮೇಲೆ ಏಕಾಏಕಿ ದಾಳಿ ನಡೆಸಿ ಬಲಿ ಪಡೆದಿದೆ. ಈ ವೇಳೆ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದ ರೈತರು ಕಿರುಚಿದ್ದರಿಂದ ಗಾಬರಿಗೊಂಡ ಹುಲಿ ಹಸುವನ್ನು ಬಿಟ್ಟು ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಗ್ರಾಪಂ ಉಪಾಧ್ಯಕ್ಷ ಬಿ.ಟಿ.ಕುಮಾರ್ ಮಾತನಾಡಿ, ಕಾಡಂಚಿನ ಗ್ರಾಮದಲ್ಲಿ ವನ್ಯ ಜೀವಿಗಳ ಹಾವಳಿ ಹೆಚ್ಚಾಗಿದ್ದು, ರೈತರು ಜಮೀನುಗಳಲ್ಲಿ ಕೆಲಸ ಮಾಡಲು ಭಯಗೊಂಡಿದ್ದಾರೆ. ರಾಜೇಶ್ ಅವರು ಸಾಲಮಾಡಿ ಹಸು ಖರೀದಿಸಿ ಜೀವನ ನಡೆಸುತ್ತಿದ್ದರು. ಇದೀಗ ಹಸು ಮೇಲೆ ಹುಲಿ ದಾಳಿ ನಡೆಸಿ ಬಲಿ ಪಡೆದಿದ್ದು, ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ಮುಂದಾಗಬೇಕು. ಅಲ್ಲದೇ ರೈತನಿಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ರಂಗನತಿಟ್ಟು ಮಾದರಿಯಲ್ಲಿ ಗೆಂಡೆಹೊಸಹಳ್ಳಿ ದ್ವೀಪ ಅಭಿವೃದ್ಧಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೂಚನೆ

ಶ್ರೀರಂಗಪಟ್ಟಣ ಬಳಿಯ ರಂಗನತಿಟ್ಟಿನಲ್ಲಿ ಚಿಟ್ಟೆ ಪಾರ್ಕ್, 3 ಹೊಸ ವಿಹಾರ ದೋಣಿಗಳ ಲೋಕಾರ್ಪಣೆ





ರಂಗನತಿಟ್ಟು ಪಕ್ಷಿಧಾಮಕ್ಕೆ ಸೋಮವಾರ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಭೇಟಿ ನೀಡಿ, ದೋಣಿ ವಿಹಾರ ನಡೆಸಿದರು. ಮತ್ತೊಂದು ಚಿತ್ರದಲ್ಲಿ ಹೊಸ ದೋಣಿಗಳನ್ನು ಸಮರ್ಪಿಸುತ್ತಿರುವುದನ್ನು ಕಾಣಬಹುದು

ಶ್ರೀರಂಗಪಟ್ಟಣ,ನ.25(ಎಂಟಿವೈ)– ರಂಗನತಿಟ್ಟು ಪಕ್ಷಿಧಾಮದ ಮಾದರಿಯಲ್ಲೇ ಗೆಂಡೆಹೊಸಳ್ಳಿ ದ್ವೀಪವನ್ನು ಅಭಿವೃದ್ಧಿ ಪಡಿಸಲು ಡಿಪಿಆರ್ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಸೂಚಿಸಿದ್ದಾರೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ರಂಗನತಿಟ್ಟು ಪಕ್ಷಿಧಾಮಕ್ಕೆ ಸೋಮವಾರ ಭೇಟಿ ನೀಡಿ, ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬಳಿಕ ಮಾತನಾಡಿದ ಅವರು, ರಂಗನತಿಟ್ಟು ಪಕ್ಷಿಧಾಮಕ್ಕೆ ವಿದೇಶಿ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿವೆ ಪಕ್ಷಿಧಾಮ ವೀಕ್ಷಣೆಗಾಗಿ ಬರುವ ಪ್ರವಾಸಿಗರ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಒತ್ತಡ ನಿವಾರಣೆಗಾಗಿ ರಂಗನತಿಟ್ಟು ಪಕ್ಷಿಧಾಮದ ಭಾಗವಾಗಿರುವ 83 ಎಕರೆ ವಿಸ್ತೀರ್ಣದ ಗೆಂಡೆಹೊಸಳ್ಳಿ ದ್ವೀಪವನ್ನು ಅಭಿವೃದ್ಧಿ ಪಡಿಸಬೇಕಿದೆ. ರಂಗನತಿಟ್ಟು ಮಾದರಿಯಲ್ಲಿಯೇ ಈ ದ್ವೀಪದಲ್ಲಿಯೂ ದೋಣಿ ವಿಹಾರ, ತೂಗು ಸೇತುವೆ, ಪಕ್ಷಿ ವೀಕ್ಷಣೆಗೆ ವ್ಯವಸ್ಥೆ, ನೇಚರ್ ಕ್ಯಾಂಪ್, ಪ್ರವಾಸಿಗರಿಗೆ ಬೇಕಾಗುವ ಮೂಲಸೌಲಭ್ಯಗಳಾದ ಕ್ಯಾಂಟೀನ್, ಕುಡಿಯುವ ನೀರು, ಶೌಚಾಲಯ, ವಾಕಿಂಗ್ ಪಾಥ್ ಸೇರಿದಂತೆ ಅಗತ್ಯ ವ್ಯವಸ್ಥೆ ಮಾಡಲು ಡಿಪಿಆರ್ ಸಿದ್ಧಪಡಿಸುವಂತೆ ಸಲಹೆ ನೀಡಿರುವುದಾಗಿ ಹೇಳಿದರು.

ಚಿಟ್ಟೆ ಪಾರ್ಕ್ ನಿರ್ಮಾಣಕ್ಕೆ ಚಾಲನೆ: ರಂಗನತಿಟ್ಟು ಪಕ್ಷಿಧಾಮದಲ್ಲಿ ಒಂದು ಎಕರೆ ಜಾಗದಲ್ಲಿ ನಿರ್ಮಿಸಲಾಗುತ್ತಿರುವ ಚಿಟ್ಟೆ ಪಾರ್ಕ್ ಕಾಮಗಾರಿಗೆ ಸಚಿವ ಈಶ್ವರ್ ಖಂಡ್ರೆ ಚಾಲನೆ ನೀಡಿದರು. ವಿವಿಧ ಬಗೆಯ ಚಿಟ್ಟೆಗಳ ಆಕರ್ಷಣೆಗಾಗಿ ನಾನಾ ಹೂವು –ಹಣ್ಣುಗಳ ಗಿಡ ನೆಟ್ಟು ಪೋಷಿಸಲಾಗುತ್ತಿದ್ದು, ಈಗಾಗಲೇ ವಿವಿಧ ಬಗೆಯ ಚಿಟ್ಟೆಗಳು ನೆಲೆಸಿವೆ. ಶೀಘ್ರದಲ್ಲಿಯೇ ಚಿಟ್ಟೆ ಪಾರ್ಕನ್ನು ಪೂರ್ಣಗೊಳಿಸುವಂತೆ ಸೂಚಿಸಿದರು. ಪಕ್ಷಿಧಾಮ ವೀಕ್ಷಣೆಗೆ ಬರುವ ಪ್ರವಾಸಿಗರು ಇನ್ನು ಮುಂದೆ ಚಿಟ್ಟೆ ಪಾರ್ಕ್‌ನಲ್ಲಿನ ಸೊಬಗನ್ನು ಸವಿಯಬಹುದಾಗಿದೆ

3 ಹೊಸ ದೋಣಿಗೆ ಚಾಲನೆ: ದೋಣಿ ವಿಹಾರಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಇಂದು ಹೊಸದಾಗಿ 3 ಹೊಸ ದೋಣಿಗಳನ್ನು ಒದಗಿಸಲಾಗಿದೆ. ಹೊಸ ದೋಣಿ(ಬೋಟ್)ಗಳಿಗೆ ಮಾಂಜ್ರಾ, ಗೋದಾವರಿ, ಕಾರಂಜಾ ನದಿಗಳ ಹೆಸರಿಡುವಂತೆ ಸಲಹೆ ನೀಡಿದರು. ಈಗಾಗಲೇ ರಂಗನತಿಟ್ಟಿನಲ್ಲಿ ಹೇಮಾವತಿ, ಕಾವೇರಿ, ಲಕ್ಷ್ಮಣತೀರ್ಥ, ತುಂಗಾ, ಕೃಷ್ಣಾ ಸೇರಿದಂತೆ 12 ದೋಣಿಗಳಿದ್ದು, ಇದೀಗ ಹೊಸ ದೋಣಿ ಸೇರಿದಂತೆ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿಗಳ ಸಂಖ್ಯೆ 15ಕ್ಕೆ ಏರಿಕೆಯಾಗಿದೆ.

> ಗೆಂಡೆಹೊಸಳ್ಳಿ ದ್ವೀಪವನ್ನು ರಂಗನತಿಟ್ಟು ಪಕ್ಷಿಧಾಮದ ಮಾದರಿಯಲ್ಲಿ 6 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಈಗಾಗಲೇ ಒಮ್ಮೆ ಡಿಪಿಆರ್ ಸಿದ್ಧಪಡಿಸಲಾಗಿತ್ತು. ಅರಣ್ಯ ಸಚಿವರ ಸಲಹೆ–ಸೂಚನೆ ಮೇರೆಗೆ ಕೆಲವು ಮಾರ್ಪಾಡು ಮಾಡಿ ಮತ್ತೆ ಡಿಪಿಆರ್ ಸಿದ್ಧಪಡಿಸಲಾಗುವುದು. 83 ಎಕರೆ ವಿಸ್ತೀರ್ಣದ ಗೆಂಡೆಹೊಸಳ್ಳಿ ದ್ವೀಪ ಪ್ರದೇಶ ಮೂರು ದ್ವೀಪಗಳನ್ನು ಹೊಂದಿದೆ. ಈ ಭಾಗದಲ್ಲೂ ಪಕ್ಷಿಗಳಿವೆ.
>
> – ಡಾ.ಐ.ಬಿ.ಪ್ರಭುಗೌಡ

ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆ: ರಂಗನತಿಟ್ಟು ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದರಲ್ಲೂ ವಿದೇಶಿ ಹಾಗೂ ವಿವಿಧ ರಾಜ್ಯಗಳ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಅನುಕೂಲಕ್ಕಾಗಿ ರಂಗನತಿಟ್ಟು ಪಕ್ಷಿಧಾಮಕ್ಕೆ ಆನ್‌ಲೈನ್ ಟಿಕೆಟ್ ವ್ಯವಸ್ಥೆ ಕಲ್ಪಿಸುವ ಪ್ರಕ್ರಿಯೆಗೂ ಸಚಿವರು ಚಾಲನೆ ನೀಡಿದರು. ಅರಣ್ಯ ಇಲಾಖೆಯ ಚಾರಣ, ಸಫಾರಿಗೆ ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ತಾಣದಲ್ಲಿ ರಂಗನತಿಟ್ಟು ಪಕ್ಷಿಧಾಮದ ಪ್ರವೇಶದ ಟಿಕೆಟ್ ಮತ್ತು ದೋಣಿ ವಿಹಾರದ ಟಿಕೆಟ್ ಕಾಯ್ದಿರಿಸುವ ಅವಕಾಶ ಕಲ್ಪಿಸಲು ಸೂಚಿಸಿದರು.

ಹೈವೇಗಳಲ್ಲಿ ಪ್ರಚಾರ ಫಲಕ: ರಂಗನತಿಟ್ಟು ಪಕ್ಷಿಧಾಮದ ಬಗ್ಗೆ ಮಾಹಿತಿಯನ್ನು ಜನರಿಗೆ ನೀಡುವ ನಿಟ್ಟಿನಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ರಂಗನತಿಟ್ಟು ಪಕ್ಷಿಧಾಮದ ಬಗ್ಗೆ ಮಾಹಿತಿಯುಳ್ಳ ಫಲಕ ಅಳವಡಿಸಬೇಕು. ವಿವಿಧ ವೇದಿಕೆ ಮೂಲಕ ಪಕ್ಷಿಧಾಮದ ಮಹತ್ವ ಪ್ರಚುರಪಡಿಸುವಂತೆ ಸಲಹೆ ನೀಡಿದರು.

ದೋಣಿ ವಿಹಾರ : ಪಕ್ಷಿಧಾಮದ ವೀಕ್ಷಣೆ ಹಾಗೂ ಅಧಿಕಾರಿಗಳ ಸಭೆಯ ಬಳಿಕ ಸಚಿವ ಈಶ್ವರ್ ಖಂಡ್ರೆ ದೋಣಿವಿಹಾರ ನಡೆಸಿದರು. ಈ ವೇಳೆ ಬಂಡೆ ಮೇಲೆ ಮಲಗಿದ್ದ ಬೃಹತ್ ಗಾತ್ರದ ಮೊಸಳೆಗಳು, ವಿವಿಧ ದ್ವೀಪದಲ್ಲಿ ಸಂತಾನೋತ್ಪತ್ತಿಗಾಗಿ ಗೂಡು ಕಟ್ಟಿರುವ ಪೆಲಿಕಾನ್, ರಿವರ್ ಟರ್ನ್, ಕಾರ್ಮೋರೆಂಟ್, ಕಿಂಗ್ ಫಿಷರ್ ಸೇರಿದಂತೆ ವಿವಿಧ ಪಕ್ಷಿಗಳನ್ನು ವೀಕ್ಷಿಸಿ, ಅವುಗಳ ಬಗ್ಗೆ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮೈಸೂರು ವೃತ್ತ ಸಿಎಫ್ ಡಾ.ಮಾಲತಿ ಪ್ರಿಯಾ, ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಕಾರ್ಯ ಯೋಜನೆಯ ಸಿಎಫ್ ರವಿಶಂಕರ್, ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪ್ವಾರ್, ಡಿಸಿಎಫ್‌ಗಳಾದ ಡಾ.ಐ.ಬಿ. ಪ್ರಭುಗೌಡ, ಡಾ.ಕೆ.ಎನ್.ಬಸವರಾಜ್, ಡಾ.ಚಂದ್ರಶೇಖರ್ ಪಾಟೀಲ್, ಸುಮಂತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಾವೇರಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಕರಿಗೆ ಕಿರಿಕಿರಿ

ಮೈಸೂರು, ನ 25(ಆರ್‌ಕೆ)– ಮೈಸೂರು–ಚೆನ್ನೈ ನಡುವೆ ಬೆಂಗಳೂರು ಮಾರ್ಗ ಸಂಚರಿಸುವ ಕಾವೇರಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರತೀದಿನ ಪ್ರಯಾಣಿಕರಿಗೆ ಕಿರಿಕಿರಿ ಉಂಟಾಗುತ್ತಿದೆ.

ಮೈಸೂರು–ಬೆಂಗಳೂರು ನಡುವೆ ಸಾಮಾನ್ಯ ಕಂಪಾರ್ಟ್‌ಮೆಂಟ್ ಟಿಕೆಟ್ ಖರೀದಿಸುವ ಪ್ರಯಾಣಿಕರು ಸ್ಲೀಪರ್ ಕೋಚ್ ಆವರಿಸಿಕೊಳ್ಳುತ್ತಾರೆ. ಮಹಿಳೆಯರಿಗೆ ಕಿರಿಕಿರಿ ಉಂಟುಮಾಡಿ, ಕಳ್ಳತನ, ಹಣ ಸುಲಿಗೆ ಮಾಡುವಂತಹ ಕೃತ್ಯ ನಡೆದರೂ ಟಿಟಿಗಳಾಗಲೀ, ರೈಲ್ವೇ ಪೊಲೀಸರಾಗಲೀ ಪ್ರಯಾಣಿಕರ ನೆರವಿಗೆ ಬರುವುದಿಲ್ಲ ಎಂದು ಮಣಿಕಂಠ ಸುಬ್ರಹ್ಮಣಿಯನ್ ಎಂಬ ರೈಲ್ವೇ ಪ್ರಯಾಣಿಕ ಗಂಭೀರ ಆರೋಪ ಮಾಡಿದ್ದಾರೆ.

ಸ್ಲೀಪರ್ ಕೋಚ್ ಕಂಪಾರ್ಟ್‌ಮೆಂಟ್‌ಗಳಲ್ಲಿ ಟಿಟಿಗಳು, ಪೊಲೀಸರು, ಆರ್‌ಪಿಎಫ್ ಸಿಬ್ಬಂದಿಗಳ್ಯಾರೂ ಇರುವುದಿಲ್ಲ. ದುಷ್ಕರ್ಮಿಗಳು ಅನಗತ್ಯ ತೊಂದರೆ ನೀಡಿ ಚಿನ್ನಾಭರಣ ಕಳವು, ಹಣ ಸುಲಿಗೆಯಂತಹ ಕೃತ್ಯ ಎಸಗಿದರೂ ಯಾರೂ ಕೇಳುವವರಿಲ್ಲ. ಈ ಬಗ್ಗೆ ರೈಲ್ವೇ ಅಥಾರಿಟಿಗೆ ಹಲವು ಬಾರಿ ದೂರು ನೀಡಿದರೂ ಈವರೆಗೆ ಕ್ರಮ ಕೈಗೊಂಡಿಲ್ಲದ ಕಾರಣ, ಕಾವೇರಿ ಎಕ್ಸ್‌ಪ್ರೆಸ್ ರೈಲು ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಅವರು ತಿಳಿಸಿದ್ದಾರೆ.

ಥಾಮಸ್ ಕುಕ್‌ನಿಂದ ಯುರೋಪ್ 2025 ಟೂರ್ ಪ್ಯಾಕೇಜ್

ಮೈಸೂರು, ನ.25(ಪಿಎಂ)– ಥಾಮಸ್ ಕುಕ್ ವತಿಯಿಂದ 2025ರಲ್ಲಿ ಯುರೋಪ್ ಟೂರ್ ಪ್ಯಾಕೇಜ್ ಪರಿಚಯಿಸಲಾಗುತ್ತಿದೆ. ಪ್ರತಿ ಪ್ರಯಾಣಿಕರನ್ನು ಆಕರ್ಷಿಸಲು ಈ ಪ್ರವಾಸವನ್ನು ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದೆ.

ಐಕಾನಿಕ್ ಲ್ಯಾಂಡ್‌ಮಾರ್ಕ್‌ಗಳಿಂದ ಹಿಡಿದು ಹಿಡನ್ ಜೆಮ್ಸ್‌ಗಳವರೆಗೆ ವೈವಿಧ್ಯಮಯ ತಾಣಗಳನ್ನು ಈ ಪ್ರವಾಸ ಪ್ಯಾಕೇಜ್ ಒಳಗೊಂಡಿದೆ. ತಲಾ 1,49,900 ರೂ.ನಿಂದ ಪ್ಯಾಕೇಜ್ ಪ್ರಾರಂಭಗೊಳ್ಳಲಿದೆ. ರಮಣೀಯ ಬರ್ನಿನಾ ಎಕ್ಸ್‌ಪ್ರೆಸ್‌ನಲ್ಲಿ ಸವಾರಿ ಮತ್ತು ಕುದುರೆ ಗಾಡಿ ಸವಾರಿಯ ಅನುಭವಗಳೊಂದಿಗೆ ಸೇಂಟ್ ಮೊರಿಟ್ಜ್‌ನಲ್ಲಿ ವಿಶೇಷ ವಾಸ್ತವ್ಯ ಇರಲಿದೆ.

ಟ್ರೋಮ್ಸೊ, ಹೊನ್ನಿನ್ಸ್‌ಗ್ವಾಗ್ ಮತ್ತು ರೊವಾನಿಮಿಯದಲ್ಲಿ ಮಿಡ್‌ನೈಟ್ ಸನ್‌ನಂತಹ ಅನುಭವಗಳು ದೊರೆಯಲಿವೆ. ಗೋಲ್ಡನ್ ಪಾಸ್‌ಲೈನ್, ಫ್ಜೋರ್ಡ್ಸ್, ಸರೋವರಗಳು ಮತ್ತು ನದಿಗಳಲ್ಲಿ ಪ್ರಯಾಣಿಸುವಂತಹ ಅವಕಾಶಗಳು ಲಭ್ಯವಿವೆ. ಸ್ಕಾಟಿಷ್ ಹೈಲ್ಯಾಂಡ್ಸ್, ಝುರ್ಮಾಟ್, ಫಿನ್ನಿಶ್‌ಲೇಕ್‌ಲ್ಯಾಂಡ್, ಅಮಾಲ್ಫಿ ಕೋಸ್ಟ್ ಸೇರಿದಂತೆ ಹತ್ತುಹಲವು ವಿಶಿಷ್ಟ ಸ್ಥಳಗಳನ್ನು ನೋಡಿ ಆನಂದಿಸಬಹುದಾಗಿದೆ. ಆಯಾಯ ಸ್ಥಳೀಯ ಭಕ್ಷ್ಯಗಳು ಮತ್ತು ವಿಶ್ವ ಬಫೆಟ್‌ಗಳ ರುಚಿಯೊಂದಿಗೆ ಭಾರತೀಯ ಊಟವನ್ನು ಕ್ಯುರೇಟೆಡ್ ಮಾಡಲಾಗಿದೆ. ಜೊತೆಗೆ ಐಷಾರಾಮಿ ಶಾಪಿಂಗ್ ಅನುಭವಗಳು ದೊರೆಯಲಿವೆ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ತನ್ನದೇ ವಿಶಿಷ್ಟ ಛಾಪು ಮೂಡಿಸಿರುವ ಥಾಮಸ್ ಕುಕ್ ಸಂಸ್ಥೆಯು ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅಂತಾರಾಷ್ಟ್ರೀಯ ಮತ್ತು ದೇಶಿಯ ಪ್ರವಾಸಿಗರಿಗೆ ರಿಯಾಯಿತಿ ಘೋಷಿಸಿದೆ. ಮುಂಗಡ ಬುಕಿಂಗ್ ಮಾಡುವ ಪ್ರವಾಸಿಗರಿಗೆ ಈ ಕೊಡುಗೆ ದೊರೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಥಾಮಸ್ ಕುಕ್ ಸಂಸ್ಥೆಯ ಕಚೇರಿಗೆ (ನಂಬರ್ 5, ಹರಿಪ್ಲಾಜಾ) ಭೇಟಿ ನೀಡಬಹುದು. ಅಥವಾ ಮೊ.ಸಂ. 96194 73026 ಹಾಗೂ 90360 05914 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹಾಸನ ಸಮಾವೇಶದ ಹಿನ್ನೆಲೆಯಲ್ಲಿ ಇಂದು ಪೂರ್ವ ಸಿದ್ಧತಾ ಸಭೆ

ಮೈಸೂರು, ನ.25(ಎಂಕೆ)– ಹಾಸನದಲ್ಲಿ ಡಿ.5 ರಂದು ನಡೆಯುವ ಸಿದ್ದರಾಮಯ್ಯ ಸ್ವಾಭಿಮಾನಿ ಸಮಾವೇಶದ ಅಂಗವಾಗಿ ನಾಳೆ(ನ.26) ಸಂಜೆ 5 ಗಂಟೆಗೆ ದೇವರಾಜ ಮೊಹಲ್ಲಾ ದಿವಾನ್ಸ್ ರಸ್ತೆಯಲ್ಲಿರುವ ಯಾದವ(ಗೊಲ್ಲ) ಸಮುದಾಯ ಭವನದಲ್ಲಿ ಪೂರ್ವ ಸಿದ್ಧತಾ ಸಭೆ ನಡೆಯಲಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಮಣ್ಯ, ಹಾಸನದಲ್ಲಿ ನಡೆಯುವ ಬೃಹತ್ ಸ್ವಾಭಿಮಾನಿ ಸಮಾವೇಶದ ಹಿನ್ನೆಲೆ ವಿವಿಧ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಿದ್ಧತಾ ಸಭೆ ನಡೆಯಲಿದ್ದು, ಸಿದ್ದರಾಮಯ್ಯ ಅವರ ಅಭಿಮಾನಿಗಳು ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಎನ್‌ಎಂಎಂಎಸ್ ಪರೀಕ್ಷೆ; ಜ.5ಕ್ಕೆ ಮುಂದೂಡಿಕೆ

ಮೈಸೂರು, ನ.25(ಎಸ್‌ಪಿಎನ್)– ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು(ಕೆಎಸ್‌ಕ್ಯೂಎ ಮತ್ತು ಎಸಿ) 2024–25ನೇ ಸಾಲಿಗೆ ನಡೆಸುವ ಎನ್‌ಎಂಎಂಎಸ್ ಪರೀಕ್ಷೆಯನ್ನು (ದಿ:8.12.2024ರಂದು ನಿಗದಿಯಾಗಿದ್ದ ಪರೀಕ್ಷೆ)2025ರ ಜ.5ರಂದು ನಡೆಸಲು ತೀರ್ಮಾನಿಸಿದೆ ಎಂದು ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಿ.8ರಂದು ನಡೆಯಬೇಕಿದ್ದ ಈ ಪರೀಕ್ಷೆಗಳನ್ನು ಜ.5ಕ್ಕೆ ತಾಂತ್ರಿಕ ಕಾರಣಗಳಿಂದ ಮುಂದೂಡಲಾಗಿದ್ದು, ಈ ಬಗ್ಗೆ ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಮಾಹಿತಿ ನೀಡಿ, ಈ ಪರೀಕ್ಷೆಯನ್ನು ಜ.5 ರಂದು ಮಾನಸಿಕ ಸಾಮರ್ಥ್ಯ ಪರೀಕ್ಷೆಯ ಪತ್ರಿಕೆ–1 ಬೆಳಗ್ಗೆ 10.30ರಿಂದ 12 ಗಂಟೆಯವರೆಗೆ ಹಾಗೂ ವ್ಯಾಸಂಗಿಕ ಪ್ರವೃತ್ತಿ ಪರೀಕ್ಷೆ ಪತ್ರಿಕೆ –2 ಅನ್ನು ಮಧ್ಯಾಹ್ನ 2ರಿಂದ 3.30 ರವರೆಗೆ ನಡೆಯಲಿದ್ದು, ಈ ದಿನದಂದು ನಿಗದಿಯಾಗಿರುವ ವೇಳಾಪಟ್ಟಿ ಪ್ರಕಟಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪ್ರಭುತ್ವ (ಕ) + ಮರ್ಯಾದೆ ಪ್ರಶ್ನೆ (ಕ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೀಬ್ರಾ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಶ್ವಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಸಂಗೊಳ್ಳಿ ರಾಯಣ್ಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಿನಕಲ್ ಶ್ರೀ ನನ್ನೇಶ್ವರ ಸ್ವಾಮಿ ದೇವರ ಕೊಳದ ಆವರಣದಲ್ಲಿ ಕಲ್ಯಾಣಿ ದೀಪೋತ್ಸವ



ಹಿನಕಲ್‌ನ ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ(ಕೊಳ) ಆವರಣದಲ್ಲಿ 9ನೇ ವರ್ಷದ ಕಲ್ಯಾಣಿ ದೀಪೋತ್ಸವ ಸೋಮವಾರ ನಡೆಯಿತು.

ಮೈಸೂರು, ನ.25(ಎಂಕೆ)– ಮೈಸೂರು ಹಿನಕಲ್‌ನ ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ(ಕೊಳ) ಆವರಣದಲ್ಲಿ ಕಾರ್ತಿಕ ಮಾಸದ ಅಂಗವಾಗಿ ಆಯೋಜಿಸಿದ್ದ 9ನೇ ವರ್ಷದ ಕಲ್ಯಾಣಿ ದೀಪೋತ್ಸವ ಸೋಮವಾರ ಶ್ರದ್ಧಾಭಕ್ತಿಯಿಂದ ನೆರವೇರಿತು.

ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ (ಕೊಳ)ಯ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ ವತಿಯಿಂದ ನಡೆದ ಕಲ್ಯಾಣಿ ದೀಪೋತ್ಸವದಲ್ಲಿ ಸಾವಿರಾರು ಮಂದಿ ಭಕ್ತಾದಿಗಳು ಭಾಗವಹಿಸಿ, ದೀಪ ಬೆಳಗಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ಸಂಜೆ 7 ಗಂಟೆಗೆ ಕಲ್ಯಾಣಿ ಹಾಗೂ ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿದ್ದಂತೆ ಕಲ್ಯಾಣಿ ಸುತ್ತಲೂ ಜೋಡಿಸಿದ್ದ ಸಾವಿರಾರು ದೀಪಗಳನ್ನು ಬೆಳಗಿಸಲಾಯಿತು. ರಂಗೋಲಿ ಚಿತ್ತಾಕರ್ಷಣೆಯೊಂದಿಗೆ ಕಂಗೊಳಿಸುತ್ತಿದ್ದ ಕಲ್ಯಾಣಿ ಆವರಣದಲ್ಲಿ ದೀಪಗಳು ಪ್ರಜ್ವಲಿಸಿದವು.

ಜ್ಯೋತಿರ್ಲಿಂಗ ಆಕರ್ಷಣೆ: ಗುಜರಾತ್‌ನ ಸೋಮನಾಥ ದೇವಸ್ಥಾನ, ಆಂಧ್ರಪ್ರದೇಶ ಶ್ರೀಶೈಲ ಪರ್ವತದ ತುದಿಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಸೇರಿದಂತೆ ದೇಶದಲ್ಲಿ ಶಿವನ 12 ಜ್ಯೋತಿರ್ಲಿಂಗಗಳ ಬೃಹತ್ ಚಿತ್ರಗಳ ಪ್ರದರ್ಶನ ಕಲ್ಯಾಣಿ ದೀಪೋತ್ಸವದ ಆಕರ್ಷಣೆಯಾಗಿತ್ತು. ಹಾಗೆಯೇ ಕಲ್ಯಾಣಿ ಎದುರು ನಿರ್ಮಿಸಿದ್ದ ಮಲೆ ಮಹದೇಶ್ವರ ಸ್ವಾಮಿ ಪ್ರತಿಮೆ ಭಕ್ತಾದಿಗಳ ಸೆಳೆಯಿತು.

ಉತ್ಸವ ಮೂರ್ತಿ ಮೆರವಣಿಗೆ: ಇದೇ ವೇಳೆ ಶ್ರೀ ನನ್ನೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಶ್ರೀ ನನ್ನೇಶ್ವರ ಸ್ವಾಮಿಯ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು. ದೇವಸ್ಥಾನದ ಆವರಣದಲ್ಲಿ ಉತ್ಸವ ಮೂರ್ತಿಯನ್ನು 9 ಸುತ್ತು ಮೆರವಣಿಗೆ ನಡೆಸಿ, ವಿಶೇಷ ಪೂಜಾ ಕೈಂಕರ್ಯ ಸಲ್ಲಿಸಲಾಯಿತು. ಹಾಗೆಯೇ ಕಲಾವಿದರಾದ ಮಲ್ಲೇಶ್, ನಾಗೇಶ್ವರ, ಅಂಜಲಿ ಮತ್ತು ತಂಡದಿಂದ ಭಕ್ತಿಗೀತೆಗಳ ಸಂಗೀತ ಕಾರ್ಯಕ್ರಮ ನಡೆಯಿತು.

ಕಲ್ಯಾಣಿ ಅಭಿವೃದ್ಧಿಗೆ ಸಹಕಾರ: ಕಲ್ಯಾಣಿ ದೀಪೋತ್ಸವಕ್ಕೆ ಚಾಲನೆ ನೀಡಿದ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಬಿ.ಎನ್.ಚಂದ್ರಶೇಖರ್ ಮಾತನಾಡಿ, ಹಿನಕಲ್ ಗ್ರಾಮಸ್ಥರು ಶ್ರದ್ಧಾಭಕ್ತಿಯಿಂದ ಪ್ರತೀ ವರ್ಷ ಕಲ್ಯಾಣಿ ದೀಪೋತ್ಸವ ಆಚರಿಸುತ್ತಾ ಬರುತ್ತಿದ್ದು, ಮುಂದಿನ ದಿನಗಳಲ್ಲಿ ಕಲ್ಯಾಣಿ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ಶ್ರೀ ನನ್ನೇಶ್ವರ ಸ್ವಾಮಿ ದೇವರ ಕಲ್ಯಾಣಿ (ಕೊಳ)ಯ ಮತ್ತು ಹಿನಕಲ್ ಗ್ರಾಮದ ಅಭಿವೃದ್ಧಿ ಸಮಿತಿ ಗೌರವಾಧ್ಯಕ್ಷ ಲೋಹಿತ್ ವಿ.ಅರಸ್, ಅಧ್ಯಕ್ಷ ಹೆಚ್.ಸಿ.ರಾಜು, ಹಿರಿಯ ಮುಖಂಡ ಎ.ಪಾಪಣ್ಣ ಮತ್ತು ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಸಮಿತಿ ಕಾರ್ಯಾಧ್ಯಕ್ಷರಾದ ಹೊನ್ನಪ್ಪ, ಕೆಂಪನಾಯ್ಕ, ಉಪಾಧ್ಯಕ್ಷರಾದ ಈಶ್ವರಪ್ಪ, ವೆಂಕಟೇಶ್, ಜವರೇಗೌಡ, ಹಿನಕಲ್ ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಕೇಬಲ್ ಪಾಪಣ್ಣ, ಖಜಾಂಚಿ ಹಿನಕಲ್ ಗಣೇಶ್, ಸಹ ಕಾರ್ಯದರ್ಶಿಗಳಾದ ಕೆ.ಜಿ.ನಾಗರಾಜ್, ಶ್ರೀನಿವಾಸ್, ಜೆ.ರಮೇಶ್, ಶಿವಕುಮಾರ್, ಗ್ರಾಮಸ್ಥರಾದ ನೀಲಕಂಠಪ್ಪ, ಸಿ.ಸ್ವಾಮಿ, ಮಿಲ್ ಸ್ವಾಮಿ, ವಾಟರ್ ರಾಜು, ಹೇಮಂತ್ ಕುಮಾರ್, ನಾಗನಹಳ್ಳಿ ರೇವಣ್ಣ, ವೆಂಕಟೇಶ್, ಮಲ್ಲೇಶ್, ಮಂಜುನಾಥ್, ಮಹದೇವ್, ಪ್ರಶಾಂತ್, ಹೆಚ್.ಬಿ.ಜಗದೀಶ್, ಹೆಚ್. ಬಿ.ಹೊನ್ನಪ್ಪ ಲೋಕೇಶ್, ಪರಮೇಶ್, ಮಹೇಶ್, ಶಿವಕುಮಾರ್, ನೇಹಾ ನೈನಾ, ಯುವ ಕಾಂಗ್ರೆಸ್ ಮುಖಂಡ ನಿಶಾಂತ್ ಪಟೇಲ್ ಮತ್ತಿತರರಿದ್ದರು.

ಕೊಡಗು ಸಂಘದ ನೂತನ ಪದಾಧಿಕಾರಿಗಳಿಗೆ ಸನ್ಮಾನ



ಮೈಸೂರಿನ ವಾರ್ಡ್ ನಂಬರ್ 6ರ ಗೋಕುಲಂ, ಬೃಂದಾವನ ಬಡಾವಣೆಯ ಸಾಂಸ್ಕೃತಿಕ ಭವನದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ರಂಗ ರಾಜ್ಯೋತ್ಸವ ಎಂಬ ಹೆಸರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೋಕುಲಂ, ಬೃಂದಾವನ ಕೊಡಗು ಸಂಘಕ್ಕೆ ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಐ.ಬಿ.ಮುದ್ದಯ್ಯ, ಉಪಾಧ್ಯಕ್ಷ ಐ.ಜಿ.ಕಾಶಿಯಪ್ಪ ಕಾರ್ಯದರ್ಶಿ ನವೀನ್, ಖಜಾಂಚಿ ನ್ಯಾನ್ಸಿ ಹಾಗೂ ಸಂಘದ ರೋಮಿ ಅಪ್ಪಯ್ಯ ಯು.ಅಪ್ಪಯ್ಯ ಇನ್ನಿತರ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು. ನಂತರ ಬೆಂಗಳೂರು ನಾಟಕ ತಂಡದವರಿಂದ 'ಮಿಸ್ ಸೇವಂತಿ' ನಾಟಕವನ್ನು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಕೆ.ಹರೀಶ್ ಗೌಡ, ವಿದ್ಯಾವರ್ಧಕ ಸಂಸ್ಥೆಯ ಪ್ರಾಂಶುಪಾಲ ಮರಿಗೌಡ, ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ದೇವರಾಜ್. ಶ್ರೇಯಸ್, ರಾಮಕೃಷ್ಣ ಇನ್ನಿತರರು ಉಪಸ್ಥಿತರಿದ್ದರು

ಇಂದು ಸಂವಿಧಾನ ದಿನ ಆಚರಣೆ

ಮೈಸೂರು, ನ.25– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನ.26 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದ ಆವರಣದಲ್ಲಿ 'ಸಂವಿಧಾನ ದಿನ' ಆಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮದ ಉದ್ಘಾಟನೆ ಮಾಡಲಿದ್ದು, ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಹಾಗೂ ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸುನೀಲ್ ಬೋಸ್ ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್ ಡಿ, ಟಿ.ಎಸ್. ಶ್ರೀವತ್ಸ ದರ್ಶನ್ ಧ್ರುವನಾರಾಯಣ್, ಜಿ.ಡಿ ಹರೀಶ್ ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಯತೀಂದ್ರ.ಎಸ್ ಮತ್ತು ವಿವೇಕಾನಂದ.ಎಸ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸುವರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ಹಿರಿಯ ಪ್ರಾಧ್ಯಾಪಕರು ಹಾಗೂ ನಿರ್ದೇಶಕ ಡಾ. ಡಿ ಆನಂದ್ ಸಂವಿಧಾನ ಮತ್ತು ಯುವಜನತೆ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ನ.28 ರಂದು ಬೆಂಕಿ ರಹಿತ ಆಹಾರ ತಯಾರಿಸುವ ಕಾರ್ಯಕ್ರಮ

ಮೈಸೂರು,ನ.25– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ನ.28 ರಂದು ಬೆಳಗ್ಗೆ 11 ಗಂಟೆಯಿಂದ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮಹಿಳೆಯರಿಗಾಗಿ ಬೆಂಕಿ ರಹಿತ (Cooking without fire) ಆಹಾರ ತಯಾರಿಸುವ ಸ್ಪರ್ಧೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮಹಿಳಾ ಉದ್ಯಮಿ ಉಪಸಮಿತಿಯ ಅಧ್ಯಕ್ಷರಾದ ರಾಜೇಶ್ವರಿ ಅವರ ಮೊ.ಸಂ: 9980532363, ಉಪಾಧ್ಯಕ್ಷರಾದ ಎಸ್.ರೇಷ್ಮಾ ಅವರ ಮೊ.ಸಂ: 8861960474 ಮತ್ತು ಎಸ್ ಭವ್ಯ ಅವರ ಮೊ.ಸಂ: 9164835719 ಅವರುಗಳನ್ನು ಸಂಪರ್ಕಿಸಿ ನವೆಂಬರ್ 27 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



25ನೇ ವರ್ಷದ ವಿವಾಹ
ವಾರ್ಷಿಕೋತ್ಸವದ ಶುಭಾಶಯಗಳು
ಶ್ರೀಮತಿ ಮಂಗಳಗೌರಿ
ಮತ್ತು ಶ್ರೀ ಮಲ್ಲೇಶ್
ಹಳೇಕೆಂಪಯ್ಯನಹುಂಡಿ
ತಾಯಿ ಚಾಮುಂಡೇಶ್ವರಿ ಆಯಸ್ಸು ಆರೋಗ್ಯ ಕರುಣಿಸಲಿ
ಶುಭಕೋರುವವರು: ರಕ್ಷಿತಾ, ಅವಿನಾಷ್, ಸೌಮ್ಯ, ಕುಮಾರ್, ಲಕ್ಷ್ಮಮ್ಮ, ಕೊಣೇಯಪ್ಪ, ರಶ್ಮಿ, ಸಾದ್ವಿಕ, ಸಾನ್ವಿಕ, ಶಾರ್ವಿಗೌಡ, ಕುಟುಂಬವರ್ಗದವರು

Zepto is Hiring
for Male and Female Promotors
Salary Rs. 22000 + Incentives at Mysore Location for Quick Commerce Platform.
Mob: 9036363964

NEWLY BUILT HOUSES FOR SALE
At Prime Locations in **Mysore**
30X40, 40X55
Near to Schools & Colleges, Hospital & Basic amenities
9986439090
9972825343

14ನೇ ವರ್ಷದ ಪುಣ್ಯಸ್ಮರಣೆ



ನಿಧನ: 26.11.2011

ನೀವು ನಮ್ಮಿಂದ ದೂರವಾಗಿ 14 ವರ್ಷ ಕಳೆದರೂ ನಿಮ್ಮ ನೆನಪು ಶಾಶ್ವತ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ.
ಪತ್ನಿ ಹೆಚ್.ಎಸ್.ಶಾಂತಿ, ಮಕ್ಕಳಾದ ಹೆಚ್.ಕೆ.ಅರುಣ್ ಕುಮಾರ್, ದಿವ್ಯ, ದೀಪಿಕಾ, ಮತ್ತು ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಹಾಗೂ ಕುಟುಂಬಸ್ಥರು.

ಹೆಚ್.ಎಸ್.ಕುಮಾರ
ಪೌರ ಕಾರ್ಮಿಕರು, ವಿರಾಜಪೇಟೆ

BEFORE THE HON'BLE SENIOR CIVIL JUDGE AND JMFC AT NANJANGUD

O.S. No. 8/2015

Plaintiff : Siddashetty @ Neelisiddashetty

V/s

Defendants : Smt. Maramma and others

Smt. Maramma Since dead, rep. by her LRs:

1(a) Smt.Mahadevi W/o Mahadeva, Aged about 55 years, R/o D.No.486, Amigen Road, Ward No.16, Gundlupet Town.

1(c) Smt.Prema, W/o Late Nagaraju, Aged about 51 years, R/o D.No. 170, 2nd Cross, Kendagammana Badavane, Kumbarakoppalu, Mysuru.

1(e) Smt. Pallavi, Husband Name Not Known D/o Late Mahadeva and Smt. Rukmini @ Rukkamma, Aged about 25 years,

1(f) Abhi, S/o Late Mahadeva and Smt. Rukmini @ Rukkamma, Aged about 20 years,

1(g) Abhilash, D/o Late Mahadeva and Smt. Rukmini @ Rukkamma, Aged about 18 years.

All are resident of: Ommatturu, Santhemaralli Hobli, Chamarajanagara Taluk, Chamarajanagara.

And also R/o C.Chatra Grama and Hobli, Tandavapura Post, Nanjangud Taluk. (Legal Representatives of Deceased Defendants No.1 i.e., Smt. Maramma).

PUBLIC NOTICE

The Plaintiff has filed the above Case in relation to the Plaint 'A' to 'D' Schedule Properties against the Defendants for the relief of Partition and Separate Possession, Declaration along with other reliefs, during course of this case, the Defendant No: 1 Smt. Maramma was passed away, as such the Plaintiff has filed necessary application in this case, for seeking permission to brought the LRs of the deceased Defendant No: 1, who are Defendants No: 1(a), 1(c) and 1(e) to 1(g) herein, initially the Plaintiff took Notice to them, both through a Court and RPAD, many times, but the same were remained un-served, as such, the Defendants No: 1(a), 1(c) and 1(e) to 1(g) are hereby called upon to appear before this Hon'ble Court on 18/12/20either personally or through a pleader, otherwise the matter will be decided in your absence, as per law.

'A' SCHEDULE

The land bearing Sy.No.124, New Sy.No.124/1 and 124/2 totally measuring 4 acres 01 guntas (2 acres 01 guntas of land, out of the said 4 acres 01 guntas, was acquired by the Defendant No.8, for industrial development and compensation pertains to the same received by the Plaintiff and Defendant No.1 to 7 from the Defendant No.8), out of which 2 Acres attached to land bearing Sy.No.124, New Sy.No.124/2 (which includes an extent of 0.13 guntas acquired by the Government of Karnataka for Varuna Sub- Channel), situated at Adakanahalli, Chikkaiahnachatra Hobli, Nanjangud Taluk, bounded on:- East by: Government Banjaru ; West by Land of Siddaiah S/o Late Siddaiah, now belongs to KIADB/Defendant No.8. ; North by Land in Sy.No.124/1 measuring 2 acres 01 guntas, belongs to Plaintiff and Defendant No. 1 to 7 now belongs to KIADB/Defendant No.8 ; South by Land in Sy. No. 125/1 belongs to the Plaintiff now belongs to KIADB/Defendant No. 8.

'B' SCHEDULE

The land bearing Sy.No.200/P7, measuring 3 acres, situated at Adakanahalli, Chikkaiahnachatra Hobli, Nanjangud Taluk, bounded on :- East by Government Road ; West by Land of Smt.Parvathamma W/o Late Rajappa ; North by Land of Mooge gowda ; South by: Land of Mahadevappa S/o Siddappa.

'C' SCHEDULE

The house measuring 9 Ankanas and having country tiled roofing, situated at Adakanahalli, Chikkaiahnachatra Hobli, Nanjangud Taluk, bounded on:- East by: House of Devashetty S/o Late Chikkadevasheety@Chikkadeva ; West by: House of Neelisiddashetty S/o Late Chikkadevashetty @Chikkadeva North by Government Road ; South by: Government Road.

'D' SCHEDULE

The house having country tiled, Mangalore tiled and Kalnar sheet roofing, measuring East-West 50 ft. and North-South 100 ft., situated at Adakanahalli, Chikkaiahnachatra Hobli, Nanjangud Taluk, bounded on:- East by: House of Chikkaputtegowda ; West by: Ramamandira and Chawadi ; North by Government Road ; South by: Vacant site belongs to Doddaputtegowda. Given under my hand and the seal of the court, this 21st day of Nov. 2024.

By Order of the Court Sd/- Chief Administrative Officer
Senior Civil Judge and JMFC, Nanjangud

Advocate for plaintiff
Sd/- M.C. Dileepkumar, B.Com., L.L.B.
Vijayashree Law Associates, KAR 2541 / 1999, No. K-8/1 & K-8/1A, 2nd Floor, V.V. Main Road, K.R. Mohalla, Mysore-24
Place: Nanjangud
Date: 20-11-2024

Shop & House for Rent
AT Vivekananda Nagar Circle, 2 BHK, attached bathrooms & terrace with tiles at Vivekananda Nagar Circle, Mysuru. For immediate occupancy. For details contact:
Mob: 94494-06844

ಸೈಟುಗಳು ಮಾರಾಟಕ್ಕಿವೆ
ಬೋಗಾದಿ ಮುಖ್ಯರಸ್ತೆಗೆ ಹತ್ತಿರವಾದಂತೆ ಮನೆ ಕಟ್ಟಲು ಸಿದ್ಧವಿರುವ
30x40, 30x50
ಅಳತೆಯ ಸೈಟುಗಳು ಮಾರಾಟಕ್ಕಿವೆ.
Mob: 9901702323

WE ARE HIRING!
1. QUALITY CONTROL MANAGER
   - Experience : Minimum 10-12 years
   - Qualification : BE in Mechanical/ GTTC
2. QUALITY CONTROL EXECUTIVE
   - Experience : Minimum 2-3 years
   - Qualification : BE in Mechanical/ GTTC/ NTTF/ Diploma/ ITI

Key Responsibilities:
- Conduct dimensional measurements, product validation & testing to ensure quality standards.
- Experience in QC of injection moulding, press tool components & sheet metal processing.

WERNER ELECTRIC PVT. LTD.
OA@WERNERELEKTRIK.COM
+91-89040 42627

ತಕ್ಷಣ ಬೇಕಾಗಿದ್ದಾರೆ
ಹೆಸರಾಂತ ಕಂಪನಿಗೆ 5 ರಿಂದ 10 ವರ್ಷ ಅನುಭವವುಳ್ಳ
ಅಡುಗೆ ಭಟ್ಟರು
ವಯೋಮಿತಿ 30 ವರ್ಷ ಮೇಲ್ಪಟ್ಟವರು
ಉತ್ತಮ ಸಂಬಳ ಒಳಗೊಂಡಿರುತ್ತದೆ.
Mob: 9606918835

Join our Team
Chartered Accountant (Male)
Experience: 10+ years,
Age: 35 to 40 years
Compliance of all Statutory taxes up to Finalization
Handle Group of Companies
Location Mysore
Whatsapp No. 9686698116

neem BOND PLATINUM®
PLYWOOD & DOORS
@ FACTORY DEPOT RATES
10 YEARS WARRANTY*
ISO 9001:2015 Certified Company Depot
SS Build Mart® 9901291267 9845426862

ತಕ್ಷಣ ಬೇಕಾಗಿದ್ದಾರೆ
ಹೆಸರಾಂತ ಕಂಪನಿಗೆ
5 ರಿಂದ 10 ವರ್ಷ ಅನುಭವವುಳ್ಳ
ಮೆಕ್ಯಾನಿಕ್ (ವಾಹನ ಮೆಂಟೆನೆನ್ಸ್)
ಎಲೆಕ್ಟ್ರಿಕ್ ಮೆಕ್ಯಾನಿಕ್
ಉತ್ತಮ ಸಂಬಳ ಒಳಗೊಂಡಿರುತ್ತದೆ.
Mob: 9686600597

ಕಳೆದಿದೆ
ಎ.ಎಸ್.ಲಲಿತ, # 39, 'ರಮಣಶ್ರೀ' 7ನೇ ಮುಖ್ಯರಸ್ತೆ ಅವಲಹಳ್ಳಿ, ಬಿಡಿಎ 3ನೇ ಹಂತ, ಬೆಂಗಳೂರು -85 ಇಲ್ಲಿ ವಾಸವಿದ್ದು ನನಗೆ ಸೇರಿದ # 11/ಜಿ, ನ್ಯೂ ಬಡಾವಣೆ, 5ನೇ ಮೇನ್ ರೋಡ್, 7ನೇ ಕ್ರಾಸ್, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು ಈ ಸ್ವತ್ತಿನ ಮೂಲ ಮಂಜೂರಾತಿ ಪತ್ರ ಮತ್ತು ಕಟ್ಟಡ ಪೂರ್ಣಗೊಂಡ ವರದಿ ಪತ್ರ ಕಳೆದುಹೋಗಿದ್ದು, ಸಿಕ್ಕವರು ಸಂಪರ್ಕಿಸಿ ಮೊ:
9741589507



ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಬೇಕಾಗಿದ್ದಾರೆ
- ಪೆಟ್ರೋಲ್ ಬಂಕ್‌ನಲ್ಲಿ ಈ ಕೆಳಕಂಡ ಸಮಯದಲ್ಲಿ ಕಾರ್ಯನಿರ್ವಹಿಸಲು ಬೇಕಾಗಿದ್ದಾರೆ 8 ರಿಂದ 5 ಗಂಟೆಯವರೆಗೆ (9 ಗಂಟೆ ಮಾತ್ರ) 5 ರಿಂದ 11 ಗಂಟೆಯವರೆಗೆ (6 ಗಂಟೆ ಮಾತ್ರ) ಎಸ್‌ಎಸ್‌ಎಲ್‌ಸಿ / ಪಿಯುಸಿ ವಿದ್ಯಾಭ್ಯಾಸ ವಿರುವವವರು ಸಂಪರ್ಕಿಸಿ
- ಒಬ್ಬರು ಪದವೀಧರರು – ಸಹಾಯವಾಣಿ ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ, ಕಂಪ್ಯೂಟರ್ ತರಬೇತಿ ಪಡೆದಿರಬೇಕು ಬಿಕಾಂ ಪದವೀಧರರಿಗೆ ಆಧ್ಯತೆ ಸಂಪರ್ಕಿಸಿ:

9611022435

WANTED
Working Partner for Food & Pharma Equipment Manufacturing Industry in Mysore with Investment & full time Involvement
Looking for a full time Working Partner Preferably with Engineering Background
- Operating Since 40 Years
- Established Customer Base
- Dedicated and Experienced Team and Staff
- High Margin Profitable Operations

98458 50370 srikanthswamy370@gmail.com

JSS MEDICAL SERVICE TRUST
JSS HOSPITAL
Jagadguru Dr. Sri Shivaratri Rajendra Circle,
Mysuru-570 004 Ph.: 0821-2548212 Fax: 0821-2548218
www.jssonline.org

REQUIRED STAFF NURSE
Applications are invited from qualified professionals for the post of Staff Nurses for **JSS Hospital, Mysuru** for Various departments.


NOTE: Experienced candidates will be considered directly under JSS Mahavidyapeetha Pay Scale.

Qualification: GNM / PBBSC / BSc Nursing (Registration Mandatory)

Please send your resume to **the Director, Medical Education Division, JSS Mahavidyapeetha** or to **med@jssonline.org**, within 10 days from the date of this notification.

Sd/-
Executive Member

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಚನ್ನಬಸಪ್ಪರವರು
ಜ್ಯೋತಿಗೌಡನಪುರ, ಚಂದಕವಾಡಿ ಹೋ., ಚಾಮರಾಜನಗರ, ತಾ|| ಜಿ||
ನಿಧನ: 26.11.2022 (ಲೇ|| ನಂಜುಂಡಪ್ಪರವರ ಮಗ)
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಡಾ|| ಯಮುನ ಮತ್ತು ಡಾ|| ಜೆ.ಸಿ.ನಾಗೇಂದ್ರ
ಶ್ರೀಮತಿ ರತ್ನ ಮತ್ತು ಶ್ರೀ ಜೆ.ಸಿ. ನಂಜುಂಡಸ್ವಾಮಿ, ಶ್ರೀಮತಿ ಮಹದೇವಮ್ಮ ಮತ್ತು ಶ್ರೀ ಸುಬ್ಬಣ್ಣ ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

ಕರ್ನಾಟಕ ಸರಕಾರ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,
ಚಾಮುಂಡಿಬೆಟ್ಟ, ಮೈಸೂರು–570010
ದೂರವಾಣಿ ಸಂಖ್ಯೆ :0821–2590027
ಇ–ಮೇಲ್ :eochamunditemple@gmail.com
ಪತ್ರ ಸಂಖ್ಯೆ:ಎಸ್‌ಸಿಟಿ(5)ಸಿಆರ್: /2024–25 ದಿನಾಂಕ: 23.11.2024

ಸಾರ್ವಜನಿಕ ಟೆಂಡರ್ ಪ್ರಕಟಣೆ
ಮೈಸೂರು ಜಿಲ್ಲೆ, ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಾಲಯಗಳು ಹಾಗೂ ಅರಮನೆ ಮುಜರಾಯಿ ಸಮೂಹದ 20 ದೇವಾಲಯಗಳಿಗೆ ಕಸ್ಟ ಮೈಸ್ಡ್ ಮೊಬೈಲ್ ಆಪ್ ತಂತ್ರಾಂಶವನ್ನು ತಯಾರಿಸಿ ಅಳವಡಿಸಿ ಕೊಡಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಸಾಫ್ಟ್ ವೇರ್ ಕಂಪನಿಯವರು ದೇವಾಲಯಕ್ಕೆ ಭೇಟಿ ನೀಡಿ ದೇವಾಲಯದಿಂದ ಕಸ್ಟಮೈಸ್ಡ್ ಮೊಬೈಲ್ ಆಪ್ ಸಾಫ್ಟ್ ವೇರ್ ಬಗ್ಗೆ ಮಾಹಿತಿ ಪಡೆದು ದಿ:03.12.2024 ಸಂಜೆ–5 ಗಂಟೆಯ ಒಳಗೆ ದೇವಾಲಯದ ಕಛೇರಿಗೆ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಸಲ್ಲಿಸುವುದು. ಅರ್ಜಿದಾರರು ತಂತ್ರಾಂಶದ ತಯಾರಿಕೆ ಮತ್ತು ಅಳವಡಿಸುವುದು ಮತ್ತು ವಾರ್ಷಿಕ ನಿರ್ವಹಣೆ ಸೇರಿಸಿ ದರಗಳನ್ನು ನಮೂದು ಮಾಡತಕ್ಕದ್ದು. ಟೆಂಡರ್ ತೆರೆಯುವ ದಿ: 04.12.2024ರ ಬೆಳಿಗ್ಗೆ 11 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ದೇವಾಲಯದ ಆಡಳಿತ ಕಛೇರಿಯನ್ನು ಸಂಪರ್ಕಿಸುವುದು.

1) ವಿಶೇಷ ಸೂಚನೆ: ಕರ್ನಾಟಕ ರಾಜ್ಯದಲ್ಲಿರುವ ಕರ್ನಾಟಕ ಸರ್ಕಾರಕ್ಕೆ ಸೇರಿದ ಹಿಂದೂ ದೇವಾಲಯಗಳಿಗೆ ಸಾಫ್ಟ್ ವೇರ್ ಕಂಪನಿಯವರು ಅವರ ಮೊಬೈಲ್ ಆಪ್ ತಂತ್ರಾಂಶವನ್ನು ಅಳವಡಿಸಿರುವ ಬಗ್ಗೆ ದಾಖಲೆಯನ್ನು ಸಲ್ಲಿಸಬೇಕು ಅಂತಹವರಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು. ಹಾಗೂ ಆಯ್ಕೆಯಲ್ಲಿ ಪರಿಗಣಿಸಲಾಗವುದು. **2)** ಟೆಂಡರ್ ಷರತ್ತುಗಳನ್ನು ದೇವಾಲಯದ ಆಡಳಿತ ಕಛೇರಿಯಲ್ಲಿ ಪಡೆಯುವುದು. **3)** ಅಂದಾಜು ಮೊತ್ತ ರೂ.5,00,000/– EMD– ಮೊತ್ತ ರೂ.10,000

ಸಹಿ/– ಕಾರ್ಯದರ್ಶಿ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ

DIPR/DDMYS-849/KSMCA-582/2024-25